"ಸತ್ಯಾನಂದ ಪಾತ್ರೋಟರ ಕಾವ್ಯದಲ್ಲಿ ಪ್ರೀತಿ ಮೀಮಾಂಸೆ"

(ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನ ನಿಬಂಧ)

ಸಂಶೋಧಕರು :
ಶ್ರೀ ವಿ.ಆಯ್. ಬಸನಗೌಡರ
ಬಾಗಲಕೋಟ

ಮಾರ್ಗದರ್ಶಕರು :
ಡಾ.ಎಂ.ಬಿ.ಹೂಗಾರ
ಶಿವಾನಂದ ಮಹಾವಿದ್ಯಾಲಯ
ಕಾಗವಾಡ, ಜಿ|| ಬೆಳಗಾವಿ

ಶ್ರೀ.ಬಿ.ಆರ್. ದರೂರ ಸಂಶೋಧನ ಕೇಂದ್ರ.
ಹಾರೂಗೇರಿ ಜಿ. ಬೆಳಗಾವಿ
ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೮

"ಸತ್ಯಾನಂದ ಪಾತ್ರೋಟರ ಕಾವ್ಯದಲ್ಲಿ ಪ್ರೀತಿ ಮೀಮಾಂಸೆ"

(ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನ ನಿಬಂಧ)

ಸಂಶೋಧಕರು :
ಶ್ರೀ ವಿ.ಆಯ್. ಬಸನಗೌಡರ
ಬಾಗಲಕೋಟ

ಮಾರ್ಗದರ್ಶಕರು :
ಡಾ.ಎಂ.ಬಿ.ಹೂಗಾರ
ಶಿವಾನಂದ ಮಹಾವಿದ್ಯಾಲಯ
ಕಾಗವಾಡ, ಜಿ॥ ಬೆಳಗಾವಿ

ಶ್ರೀ.ಬಿ.ಆರ್. ದರೂರ ಸಂಶೋಧನ ಕೇಂದ್ರ,
ಹಾರೂಗೇರಿ ಜಿ. ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೦೯

ಪ್ರಮಾಣ ಪತ್ರ

"ಸತ್ಯಾನಂದ ಪಾತ್ರೋಟರ ಕಾವ್ಯದಲ್ಲಿ ಪ್ರೀತಿ ಮೀಮಾಂಸೆ" ಎಂಬ ಶೀರ್ಷಿಕೆಯ ನಿಬಂಧವನ್ನು ಡಾ.ಎಂ.ಬಿ.ಹೂಗಾರ ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. ಹಾರೂಗೇರಿಯ ಶ್ರೀ.ಬಿ ಆರ್. ದರೂರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ. ಫಿಲ್. ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಗಾಗಲಿ ನಾನು ಪ್ರಕಟಿಸಿರುವುದಿಲ್ಲವೆಂದೂ ಹಾಗೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : 20/08/08

ಶ್ರೀ ವಿ.ಆಯ್. ಬಸನಗೌಡರ
ಸಂಶೋಧನ ವಿದ್ಯಾರ್ಥಿ
ಶ್ರೀ. ಬಿ. ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ.

ದೃಢೀಕರಣ ಪತ್ರ

ಶ್ರೀ.ವಿ.ಆಯ್.ಬಸನಗೌಡರ ಇವರು "ಸತ್ಯಾನಂದ ಪಾತ್ರೋಟರ ಕಾವ್ಯದಲ್ಲಿ ಪ್ರೀತಿ ಮೀಮಾಂಸೆ"ಎಂಬ ಶೀರ್ಷಿಕೆಯ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಾರೂಗೇರಿಯ ಶ್ರೀ. ಬಿ. ಅರ್. ದರೂರ ಸಂಶೋದನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್.ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಇವರು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟಿಸಿಲ್ಲವೆಂದೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : 20/08/08

ಡಾ.ಎಂ.ಬಿ.ಹೂಗಾರ
ಶಿವಾನಂದ ಮಹಾವಿದ್ಯಾಲಯ
ಕಾಗವಾಡ, ಜಿ॥ ಬೆಳಗಾವಿ

[illegible]

[illegible]

[illegible]

[illegible]

ಅನುಪೂರ್ವಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಪ್ರಸ್ತಾವನೆ :

ಕನ್ನಡವು ಮಧುರವಾದ, ಸವಿಯಾದ ಶ್ರೀಮಂತವಾದ ನುಡಿಯಾಗಿದೆ. ಹಾಗೆಯೇ ಕನ್ನಡ ನುಡಿಯು ಶ್ರೀಮಂತವಾದ ಹಾಗೂ ವೈಭವಪೂರಿತವಾದ ಸಾಹಿತ್ಯಲೋಕವನ್ನು ಹೊಂದಿದೆ. ಕನ್ನಡ ಸಾಹಿತ್ಯಲೋಕದಲ್ಲಿ ಕಾವ್ಯಕ್ಕೆ ವಿಶಿಷ್ಟವಾದ ಸ್ಥಾನವಿದೆ. ಕನ್ನಡ ನುಡಿಯ ಸಿರಿಯನ್ನು ಹೆಚ್ಚಿಸುವಲ್ಲಿ ಕಾವ್ಯದ ಪಾತ್ರ ಗಣನೀಯವಾದುದು. ಪ್ರಾಚೀನ ಕಾಲದಿಂದಲೂ ಗಮನಿಸಿದಾಗ ಅನೇಕ ಅದ್ವಿತೀಯ ಕವಿಗಳು ಕನ್ನಡದಲ್ಲಿ ಶ್ರೇಷ್ಠ ಕಾವ್ಯಗಳನ್ನು ರಚಿಸಿ, ಸಾಹಿತ್ಯ ಸಂಪತ್ತನ್ನು ವೃದ್ಧಿಸಿರುವುದು ಕಂಡು ಬರುತ್ತದೆ.

ಕನ್ನಡ ಕಾವ್ಯ ಪರಂಪರೆಯನ್ನು ಹಳಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡ ಎಂಬ ಮೂರು ಹಂತಗಳಲ್ಲಿ ಕಾಣಬಹುದು. ಹೊಸಗನ್ನಡ ಕಾವ್ಯವು ನವೋದಯ, ಪ್ರಗತಿಶೀಲ, ನವ್ಯ ಹಾಗೂ ದಲಿತ-ಬಂಡಾಯ ಘಟ್ಟಗಳಲ್ಲಿ ಬೆಳೆದು ಬಂದಿರುವುದನ್ನು ಕಾಣಬಹುದು. ಬಿ.ಎಂ.ಶ್ರೀಯವರ 'ಇಂಗ್ಲೀಷ ಗೀತೆಗಳು' (೧೯೨೦) ಎಂಬ ಕವನ ಸಂಕಲನದಿಂದ ಆರಂಭವಾಗಿ ಪ್ರಗತಿಶೀಲರವರೆಗಿನ ಕಾಲಾವಧಿಯ ಸಾಹಿತ್ಯವನ್ನೇ ನವೋದಯ ಘಟ್ಟ ಎಂದು ಗುರುತಿಸಲಾಗುತ್ತದೆ. ನವೋದಯ ಕಾಲವು ಪಾಶ್ಚಾತ್ಯ ಸಾಹಿತ್ಯದಿಂದ ಪ್ರಭಾವಿತವಾಗಿದ್ದು, ಕನ್ನಡ ಸಾಹಿತ್ಯಕ್ಕೆ ವೈವಿಧ್ಯತೆಯನ್ನು ನೀಡಿದ ಘಟ್ಟವಾಗಿದೆ. ಇನ್ನು ಪ್ರಗತಿಶೀಲ ಸಾಹಿತ್ಯವು ತನ್ನದೇ ಆದ ಸಾಂಸ್ಕೃತಿಕ ಕೊಡುಗೆಯನ್ನು ನಾಡಿಗೆ ನೀಡಿದೆ, ಪ್ರಗತಿಶೀಲ ಸಾಹಿತ್ಯವು ಪ್ರಗತಿಯನ್ನೇ ಲಕ್ಷಣವಾಗಿ ಉಳ್ಳದ್ದು, ಇದರ ಉದ್ದೇಶವೆಂದರೆ ಸಾಮಾಜಿಕ ವಿಷಮತೆ, ಶೋಷಣೆ, ಬಂಡವಾಳಗಾರರು, ಭೂಮಾಲೀಕರ ವಿರುದ್ಧದ ಸಮರದಲ್ಲಿ ತಮ್ಮನ್ನು ಬರಹದ ಮೂಲಕ ತೊಡಗಿಸಿಕೊಳ್ಳಬೇಕು ಮತ್ತು ಸಾಮಾಜಿಕ ಕ್ರಾಂತಿಯ ನೇತಾರರಾಗಬೇಕು. ಎಂಬುದು ನಂತರ ಹೊಸ ಸಾಹಿತ್ಯ ಸಂದರ್ಭದ ಅವಶ್ಯಕತೆ ಇದೆ ಎಂಬ ಭಾವನೆಯಿಂದ ನವೋದಯ ಸಾಹಿತ್ಯದ ಪ್ರತಿಭಟನೆಯಾಗಿ ನವ್ಯ ಸಾಹಿತ್ಯ ಮಾರ್ಗರೂಪತಾಳಿತು. ಕನ್ನಡ ನವ್ಯ ಸಾಹಿತ್ಯವು ಪಾಶ್ಚಾತ್ಯ ಆಧುನಿಕ ತಾತ್ವಿಕ ಚಿಂತನೆಗಳಾದ ಅಸ್ತಿತ್ವವಾದ ಅಸಂಗತವಾದಗಳನ್ನು ರೂಢಿಸಿಕೊಂಡು ಬೆಳೆಯಿತು. ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ಅಕ್ಷರದ ಮೂಲಕ ಅಭಿವ್ಯಕ್ತಿಸಲು ತೊಡಗಿದ ಅವಮಾನಿತ ಅಕ್ಷರಸ್ಥ ಸಮುದಾಯವೊಂದು ತಮ್ಮ

ಅಭಿವ್ಯಕ್ತಿಯ ಮಾಧ್ಯಮವನ್ನು ತಮ್ಮ ಕೇರಿಯ, ಪ್ರದೇಶದ ಭಾಷೆಯನ್ನು ಉಪಯೋಗಿಸಿಕೊಂಡು ತಮ್ಮ ಸಹಜ ಅನುಭವಗಳು, ಅವಮಾನ ದೌರ್ಜನ್ಯಗಳನ್ನು ಸ್ಪಷ್ಟವಾಗಿ ದಾಖಲಿಸತೊಡಗಿದ ಕೊಡಲೇ ಒಂದು ಜನಾಂಗೀಯ ಸಾಹಿತ್ಯ ಸಿದ್ಧವಾಯಿತು. ಅದನ್ನೇ ನಾವು ವಿಶಾಲ ಅರ್ಥದಲ್ಲಿ ದಲಿತ ಸಾಹಿತ್ಯ ಎಂದು ಕರೆಯುತ್ತೇವೆ. ದಲಿತ ಸಾಹಿತ್ಯದಲ್ಲಿ ಕಲೆಗಾರಿಕೆಯೇ ಸಾಹಿತ್ಯವಲ್ಲ. ಬದುಕು ಸತ್ಯ ಎಂಬ ನಿಲುವಿನಲ್ಲಿರುವ ಸಿದ್ಧಲಿಂಗಯ್ಯನವರ 'ಹೊಲೆ ಮಾದಿಗರ ಹಾಡು' ೧೯೭೫ ರಲ್ಲಿ ಪ್ರಕಟಗೊಂಡಿತು ಅಲ್ಲಿಂದ ಮುಂದೆ ಕಥೆ, ಕಾವ್ಯ, ಕಾದಂಬರಿ, ನಾಟಕ ಕ್ಷೇತ್ರದಲ್ಲಿ ಅತಿ ಹೆಚ್ಚು ಕೃಷಿ ನಡೆಯಿತು. ಇನ್ನು ಬಂಡಾಯ ಸಾಹಿತ್ಯ ತನ್ನ ಸಾಹಿತ್ಯ ಮತ್ತು ಸಂಘಟನೆ ಎರಡೂ ರೂಪಗಳಲ್ಲಿ ಕರ್ನಾಟಕದಾದ್ಯಂತ ಇಂದು ಪ್ರಬಲವಾಗಿ ಬೆಳೆದಿದೆ. ಸಂಘಟನೆಯಾಗಿ ಇಡಿ ನಾಡಿನಾದ್ಯಂತ ಹೊಸ ಆಲೋಚನೆಯ ಯುವ ಬರಹಗಾರರನ್ನು ಹುಟ್ಟು ಹಾಕಿದ ಸಂಘಟನೆ, ವ್ಯಕ್ತಿವಾದಿ ನೆಲೆಗೆ ವಿರುದ್ಧವಾಗಿ ಸಮಾಜಮುಖಿ ಜನಾಂಗವನ್ನು ನಿರ್ಮಾಣ ಮಾಡುವ ಧ್ಯೇಯದಿಂದ ಹೊರಟದ್ದು ಬಂಡಾಯ ಸಾಹಿತ್ಯ. ನಂತರದ ಸಾಹಿತ್ಯ ಕೃಷಿ ಗಮನಿಸಿದಾಗ ಹೃದಯ ಕಲುಕುವ ವಿಶಾಲ ವಸ್ತುಗಳು ಕಣ್ಣಿಗೆ ರಾಚುತ್ತವೆ ವ್ಯಕ್ತಿಗೌರವ ಪ್ರಜಾಪ್ರಭುತ್ವವಾದಿ ನೆಲೆ ಎಡ ಪಂಥೀಯ ಆಲೋಚನೆಯನ್ನು ಮುಖ್ಯ ನೆಲೆಯಾಗಿ ರೋಧಿಸುವ ಈ ಬಂಡಾಯ ಸಾಹಿತ್ಯ ಮುಖ್ಯವಾದ ಸಂವೇದನೆಗಳನ್ನು ಹುಟ್ಟುಹಾಕಿದೆ. ಅವುಗಳೆಂದರೆ ದಲಿತ ಸಂವೇದನೆ, ಸ್ತ್ರೀ ಸಂವೇದನೆ, ಮುಸ್ಲಿಂ ಸಂವೇದನೆ ಹೀಗೆ ಬಂಡಾಯ ಸಾಹಿತ್ಯ ಮುಖ್ಯವಾಗಿ ಬದುಕಿನ ಅಸಮಾನತೆಗಳಾದ ಜಾತಿ, ಅಸ್ಪೃಶ್ಯತೆ, ಧರ್ಮ, ಪ್ರಭುತ್ವ, ಲಿಂಗಭೇದಗಳನ್ನು, ವರ್ಗ ಸಂಘರ್ಷಗಳನ್ನು ಕುರಿತು ತನ್ನ ಬದುಕಿನ ಇರುವಿಕೆ ಮತ್ತು ಪ್ರತಿಭಟನೆಯನ್ನು ಏಕಕಾಲಕ್ಕೆ ಪ್ರಕಟಿಸುತ್ತದೆ.

ದಲಿತ – ಬಂಡಾಯ ಕವಿಗಳು ಸೃಷ್ಟಿಸಿದ ಸಾಹಿತ್ಯದಲ್ಲಿ ಅಸಮಾನತೆ, ಶೋಷಣೆ ವಿರುದ್ಧ ಪ್ರತಿಭಟನೆ ಪ್ರಮುಖವಾಗಿದ್ದರೂ ಅನೇಕ ದಲಿತ–ಬಂಡಾಯ ಕವಿಗಳು ಸೌಂದರ್ಯ, ಪ್ರಕೃತಿ, ಪ್ರೀತಿ ಇತ್ಯಾದಿಗಳ ಕುರಿತು ಸಾಹಿತ್ಯ ಕೃಷಿ ಮಾಡಿದ್ದಾರೆ. ದಲಿತ ಬಂಡಾಯ ಸಾಹಿತ್ಯದಲ್ಲಿ ಸಿದ್ಧಲಿಂಗಯ್ಯ, ಬರಗೂರು, ಶಿವಪ್ರಕಾಶ ಗೋವಿಂದಯ್ಯ, ಮ.ನ.ಜ. ಚಂಪಾ, ಅರವಿಂದ ಮಾಲಗತ್ತಿ,

ರಮಜಾನ್ ದರ್ಗಾ, ಸತ್ಯಾನಂದ ಪಾತ್ರೋಟಿ, ಕಟ್ಟಿಮನಿ, ತೇಜಸ್ವಿ, ಸರಜೂ ಕಾಟಕರ್ ಮೊದಲಾದ ಕವಿಗಳು ಪ್ರಮುಖರಾಗಿರುವರು.

ಇವರಲ್ಲಿ ಉತ್ತರ ಕರ್ನಾಟಕದವರಾದ ಸತ್ಯಾನಂದ ಪಾತ್ರೋಟರು ಪ್ರಮುಖ ಕವಿಗಳಲ್ಲಿ ಒಬ್ಬರಾಗಿದ್ದಾರೆ. ಅವರು ಉತ್ತಮ ಸಾಹಿತ್ಯ ಕೃಷಿ ಮಾಡಿದ್ದು, ಉನ್ನತವಾದ ಕವನ ಸಂಕಲನಗಳನ್ನು ರಚಿಸಿದ್ದಾರೆ. ಒಬ್ಬ ದಲಿತ ಕವಿಯಾಗಿ ಪ್ರಾತ್ರೋಟರು ಪ್ರೀತಿ ಕುರಿತು ಕವನಗಳನ್ನು ಬರೆದಿದ್ದು ಹಾಗೂ ಯಶಸ್ವಿಯೂ ಆಗಿದ್ದಾರೆ. ಮತ್ತು ಸಮಕಾಲೀನ ಕವಿಗಳು ಪ್ರೀತಿ ಕುರಿತು ರಚಿಸಿದ ಕವನಗಳನ್ನು ಗಮನಿಸಿದಾಗ ಪಾತ್ರೋಟರು ಭಿನ್ನವಾಗಿ ಕಾಣುತ್ತಾರೆ. ಆದ್ದರಿಂದ ಅವರ ಕವನಗಳಲ್ಲಿರುವ ಪ್ರೀತಿಯ ಅಂಶಗಳ ಕುರಿತು ಅಧ್ಯಯನ ಮಾಡುವುದು ಅಗತ್ಯವೆನಿಸುವುದು.

ಉದ್ದೇಶ :

ಬಂಡಾಯ ಹಾಗೂ ಪ್ರತಿಭಟನೆಯ ಉದ್ದೇಶವನ್ನಿರಿಸಿಕೊಂಡು ಬಂಡಾಯ ಸಾಹಿತ್ಯ ವಿಫುಲವಾಗಿ ಬೆಳೆದು ಬಂದಿದೆ. ಅನೇಕ ಬಂಡಾಯ ಕವಿಗಳು ಈ ಉದ್ದೇಶವನ್ನು ಸಾಕಾರಗೊಳಿಸಿದ್ದಾರೆ. ಇದಕ್ಕಾಗಿ ಕಥೆ, ಕವನ, ನಾಟಕ, ಕಾದಂಬರಿ ಮೊದಲಾದ ಎಲ್ಲ ಪ್ರಕಾರಗಳಲ್ಲಿ ಸಾಹಿತ್ಯ ಸೃಷ್ಟಿ ಮಾಡಿರುವರು. ಬಂಡಾಯ ಕವಿಗಳು ಕೇವಲ ಬಂಡಾಯ ಹಾಗೂ ಪ್ರತಿಭಟನೆಯನ್ನು ಮಾತ್ರ ಉದ್ದೇಶವನ್ನಾಗಿರಿಸಿಕೊಳ್ಳದೇ ಭಿನ್ನ-ಭಿನ್ನ ಭಾವಗಳನ್ನು ಕುರಿತು ರಚನೆ ಮಾಡಿದ್ದಾರೆ. ಅವುಗಳಲ್ಲಿ ಪ್ರೀತಿಎಂಬ ಭಾವ ಪ್ರಮುಖವಾಗಿರುವುದು. ಅನೇಕ ಬಂಡಾಯ ಕವಿಗಳು ಪ್ರೀತಿಯ ಕುರಿತು ಕವನಗಳನ್ನು ರಚಿಸಿದ್ದಾರೆ. ಅಂತಹ ಕವನಗಳನ್ನು ರಚಿಸಿದವರಲ್ಲಿ ಸಮಕಾಲೀನ ಪ್ರಮುಖ ಬಂಡಾಯ ಕವಿಗಳಲ್ಲಿ ಸತ್ಯಾನಂದ ಪಾತ್ರೋಟರು ಒಬ್ಬರು. ಒಬ್ಬ ಬಂಡಾಯ ಮನೋಭಾವದ ಕವಿಯಾಗಿ ಸತ್ಯಾನಂದ ಪಾತ್ರೋಟರು ಪ್ರೀತಿ ಮನೋಭಾವದ ಸುಂದರ ಕವನಗಳನ್ನು ರಚಿಸಿರುವರು. ಅವರ ಕಾವ್ಯದಲ್ಲಿನ ಪ್ರೀತಿಯ ಮೀಮಾಂಸೆ ಈ ಪ್ರಬಂಧದ ಪ್ರಮುಖ ಉದ್ದೇಶವಾಗಿದೆ ಹಾಗೂ ಸಮಕಾಲೀನ ಕವಿಗಳಲ್ಲಿ ಪಾತ್ರೋಟರ ವಿಶೇಷತೆಯನ್ನು ಅರಿಯುವುದು ಮತ್ತು ಸಮಕಾಲೀನ ಕವಿಗಳು ಪ್ರೀತಿ ಕುರಿತು ಬರೆದ ಕವನಗಳಲ್ಲಿ

ಪಾತ್ರೋಟರ ಪ್ರೀತಿ ಕುರಿತಾದ ಕವನಗಳು ಹೇಗೆ ಭಿನ್ನವಾಗಿವೆ ಎಂಬುದನ್ನು ಗುರುತಿಸುವುದು ಈ ಪ್ರಬಂಧದ ಉದ್ದೇಶವಾಗಿದೆ.

ಸ್ವರೂಪ :

ಆಧುನಿಕ ಕನ್ನಡ ಕವಿತೆಗಳಲ್ಲಿ ಪ್ರೀತಿ ಬಗೆಗಿನ ರಚನೆಗಳ ಹಿನ್ನೆಲೆಯಲ್ಲಿ ಕವಿ ಪಾತ್ರೋಟರ ಕವಿತೆಗಳ ವಿಶೇಷತೆಯನ್ನು ಸಾರುವ ಸ್ವರೂಪವನ್ನು ಈ ಅಧ್ಯಯನವು ಹೊಂದಿದೆ. ಒಬ್ಬ ದಲಿತ-ಬಂಡಾಯ ಕವಿಯಾಗಿ ಪಾತ್ರೋಟರು ಪ್ರೀತಿ ಕುರಿತು ರಚಿಸಿದ ಸುಂದರವಾದ ಕವನಗಳಲ್ಲಿ ಪ್ರೀತಿಯ ಮೀಮಾಂಸೆಯನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ. ಪ್ರಸ್ತುತ ಅಧ್ಯಯನದ ಸ್ವರೂಪವು ಪಾತ್ರೋಟರ ಆರು ಕವನ ಸಂಕಲನಗಳನ್ನು ಒಳಗೊಂಡಿದೆ.

ಪ್ರಸ್ತುತ ಪ್ರಬಂಧವು ಐದು ಅಧ್ಯಾಯಗಳನ್ನು ಒಳಗೊಂಡಿದೆ, ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿಯನ್ನು ವಿವರಿಸಲಾಗಿದೆ. ಎರಡನೇಯ ಅಧ್ಯಯದಲ್ಲಿ ಕವಿ ಸತ್ಯಾನಂದ ಪಾತ್ರೋಟರ ಬದುಕು ಮತ್ತು ಸಾಹಿತ್ಯದ ಅವಲೋಕನವನ್ನು ಮಾಡಲಾಗಿದೆ. ಇಲ್ಲಿ ವಿಶೇಷವಾಗಿ ಪಾತ್ರೋಟರ ಕವನಗಳನ್ನು ಪ್ರಮುಖವಾಗಿ ಅವಲೋಕಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಪಾತ್ರೋಟರ ಕವಿತೆಗಳಲ್ಲಿಯ ಪ್ರೀತಿಯ ಸ್ವರೂಪವನ್ನು ~~ಈ ಕೆಳಗಿನ ನೆಲೆ~~ಗಳಲ್ಲಿ ವಿಶ್ಲೇಷಿಸಲಾಗಿದೆ.

೧. ಪ್ರಕೃತಿಯೊಳು ಒಂದಾದ ಪ್ರೀತಿ

೨. ಕನಸಿನೊಳು ಒಂದಾದ ಪ್ರೀತಿ

೩. ಬಂಡಾಯದೊಡನೆ ಒಂದಾದ ಪ್ರೀತಿ

೪. ನೋವಿನನುಭಾವಗಳಲ್ಲಿ ಒಂದಾದ ಪ್ರೀತಿ

೫. ನೆನಪಿನೊಳು ಒಂದಾದ ಪ್ರೀತಿ

ನಾಲ್ಕನೆಯ ಅಧ್ಯಾಯದಲ್ಲಿ ಆಧುನಿಕ ಕನ್ನಡ ಕವನಗಳಲ್ಲಿ ಪಾತ್ರೋಟರ ಪ್ರೀತಿ ಕವಿತೆಗಳನ್ನು ತುಲನಾತ್ಮಕವಾಗಿ ಅವಲೋಕಿಸಲಾಗಿದೆ. ಐದನೆಯ ಅಧ್ಯಾಯ ಸಮಾರೋಪ. ಇಲ್ಲಿ ಅಧ್ಯಾಯನದ ಒಟ್ಟು ಫಲವನ್ನು ವಿವೇಚಿಸಲಾಗಿದೆ. ಅನುಬಂಧಗಳನ್ನು ಹಾಗೂ ಪರಾಮರ್ಶನ ಗ್ರಂಥಗಳನ್ನು ತಿಳಿಸಲಾಗಿದೆ.

ವ್ಯಾಪ್ತಿ :

ಕನ್ನಡ ಕಾವ್ಯದಲ್ಲಿ ಮಧುರಚನ್ನರು ಸಾರಿದ ಹಾಗೆ 'ಪ್ರೀತಿಯಂಥ ವಸ್ತು ಭವದಲ್ಲಿ ಕಾಣೆ' ಎಂಬಂತೆ ಕನ್ನಡ ಕಾವ್ಯದ ಪ್ರತಿ ರಚನೆಗಳಲ್ಲೂ ಪ್ರೀತಿ ಒಡಮೂಡಿದೆ. ಅಪಾರವಾದ ಮತ್ತು ತುಂಬಾ ಮೌಲಿಕವಾದ ಪ್ರೀತಿರಚನೆಗಳು ಕನ್ನಡ ಕಾವ್ಯದುದ್ದಕ್ಕೂ ದೊರೆತರೂ ಆಧುನಿಕ ಕನ್ನಡ ಕವನಗಳಲ್ಲಿ ಪಾತ್ರೋಟರ ಕವನಗಳಲ್ಲಿನ ಪ್ರೀತಿಯ ವಿವೇಚನೆ ಮಾಡುವುದು ಹಾಗೂ ಆಧುನಿಕ ಕನ್ನಡ ಕವಿತೆಗಳಲ್ಲಿ ಪ್ರೀತಿಯ ಕುರಿತಾದ ರಚನೆಗಳಲ್ಲಿ ಸತ್ಯಾನಂದ ಪಾತ್ರೋಟರ ಪ್ರೀತಿ ಕುರಿತಾದ ರಚನೆಗಳ ವಿಶೇಷತೆಯನ್ನು ಗುರುತಿಸುವುದು ಈ ಅಧ್ಯಯನದ ವ್ಯಾಪ್ತಿಯಾಗಿದೆ.

ಸತ್ಯಾನಂದ ಪಾತ್ರೋಟರ ಕಾವ್ಯದಲ್ಲಿ ಪ್ರೀತಿ ಮೀಮಾಂಸೆ ಈ ಅಧ್ಯಯನವನ್ನು ಸತ್ಯಾನಂದರ ಪ್ರಮುಖ ಕವನ ಸಂಕಲನಗಳು ಮತ್ತು ಅವರ ಸಮಕಾಲೀನ, ಅವರಿಗಿಂತ ಹಿರಿಯರ ಕವನಗಳನ್ನು ಆಧಾರವಾಗಿರಿಸಿಕೊಂಡು ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಾಯ - ೧

ಕವಿ ಪಾತ್ರೋಟರ ಬದುಕು ಮತ್ತು ಕಾವ್ಯ

ದಲಿತ ಬಂಡಾಯ ಸಾಹಿತ್ಯವು ಆರಂಭದಲ್ಲಿ ನಗರ ಕೇಂದ್ರಿಕೃತವಾಗಿತ್ತು. ನಗರದ ದಲಿತ ಬಂಡಾಯ ಸಾಹಿತಿಗಳು ಬರೆದ ಸಾಹಿತ್ಯ ಮಾತ್ರ ದಲಿತ ಬಂಡಾಯ ಸಾಹಿತ್ಯ ಎಂದು ನಂಬಲಾಗಿತ್ತು. ಗ್ರಾಮೀಣ ಪ್ರದೇಶದ ದಲಿತ ಸಾಹಿತಿಗಳನ್ನು ಕಡೆಗಣಿಸಲಾಗಿತ್ತು. ಗ್ರಾಮೀಣ ಪ್ರದೇಶದ ದಲಿತ ಸಾಹಿತಿಗಳನ್ನು ಪ್ರೋತ್ಸಾಹಿಸಿ ಅವರಲ್ಲಿ ಅತ್ಮ ವಿಶ್ವಾಸವನ್ನು ತುಂಬಿ ಅವರ ಸಾಹಿತ್ಯವನ್ನು ಪ್ರಕಟಿಸಲು ಮತ್ತು ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸುವ ಅವಕಾಶವನ್ನು ಒದಗಿಸಿದವರಲ್ಲಿ ಪ್ರಮುಖರು ಪ್ರೋ. ಬರಗೂರು ರಾಮಚಂದ್ರಪ್ಪನವರು. ಇಂತಹ ಸಂದರ್ಭದಲ್ಲಿ ದಲಿತ ಬಂಡಾಯ ಚಳುವಳಿಗೆ ಬರಲು ಅನೇಕ ಸಾಹಿತಿಗಳು ಮುಂದಾದರು. ಅವರಲ್ಲಿ ಸತ್ಯಾನಂದ ಪಾತ್ರೋಟರು ಒಬ್ಬರು.

ಸತ್ಯಾನಂದ ಪಾತ್ರೋಟರು ಒಬ್ಬ ದಲಿತ ಕವಿ. ನಾಟಕಕಾರ. ದಲಿತ-ಬಂಡಾಯ ಸಾಹಿತ್ಯ ಘಟ್ಟ ನೀಡಿದ ಅಪರೂಪದ ಕವಿಗಳಲ್ಲಿ ಪಾತ್ರೋಟರು ಕೂಡ ಒಬ್ಬರು, ಅವರೊಬ್ಬ ಕವಿಯಾಗಿ, ನಾಟಕಕಾರರಾಗಿ, ಲೇಖಕರಾಗಿ, ಸಂಘಟಕರಾಗಿ, ಉತ್ತಮ ಭಾಷಣಕಾರರಾಗಿ ಸಫಲತೆಯನ್ನು ಹೊಂದಿರುವರು. ಪಾತ್ರೋಟರು ಕನ್ನಡ ಕಾವ್ಯ ಲೋಕದಲ್ಲಿ 'ಜಾಜಿ ಮಲ್ಲಿಗೆ ಕವಿ' ಎಂದೇ ಪ್ರಸಿದ್ದರು.

ಸತ್ಯಾನಂದ ಪಾತ್ರೋಟರ ಜೀವನ ಮತ್ತು ಸಾಹಿತ್ಯದ ಅವಲೋಕನ :

ಜನ್ಮ ಸ್ಥಳ	:	ವಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಕುಲಗುರ್ಕಿ
ಬೆಳದದ್ದು	:	ಬೀಳಗಿ, ಜಿ. ಬಾಗಲಕೋಟ
ಶಿಕ್ಷಣ	:	ಎಂ.ಎ., ಪಿ.ಎಚ್.ಡಿ
ತಂದೆ ತಾಯಿ	:	ತಿಮ್ಮಣ್ಣ – ಜೆಟ್ಟೆವ್ವ
ಸಹೋದರರು	:	ಯಲ್ಲಪ್ಪ, ತಾಯಣ್ಣ
ಅಕ್ಕಂದಿರು	:	ಹಣಮವ್ವ, ರುಕ್ಮವ್ವ
ಪತ್ನಿ	:	ಸಮತಾ
ಮಕ್ಕಳು	:	ಪಲ್ಲವಿ, ಪ್ರವೇಶ
ಉದ್ಯೋಗ	:	ಕನ್ನಡ ಅಧ್ಯಾಪಕರು, ಎಸ್.ಬಿ. ಪಾಟೀಲ ಪದವಿ ಪೂರ್ವ ಕಾಲೇಜು, ಬಾಗಲಕೋಟ

[illegible]

ಸಾಹಿತ್ಯ :

ಕವನ ಸಂಕಲನಗಳು

- ಕರಿಯ ನೆಲದ ಕಲೆಗಳು : ೧೯೮೫
- ಜಾಜಿ ಮಲ್ಲಿಗೆ : ೧೯೯೫
- ಕಲ್ಲಿಗೂ ಗೊತ್ತಿರುವ ಕತೆ : ೧೯೯೪
- ಕರಿಯ ಕಟ್ಟಿದ ಕವನ : ೧೯೯೮
- ನನ್ನ ಕನಸಿನ ಹುಡಗಿ : ೧೯೯೮
- ನದಿಗೊಂದು ಕನಸು ಮತ್ತು ಅವಳು : ೨೦೦೪

ನಾಟಕಗಳು

- ನಮಗ ಯಾರೂ ಇಲ್ಲೋ ಎಪ್ಪಾ ಸಾಕ್ಷಿ : ೧೯೫೯
- ಮತ್ತೊಬ್ಬ ಏಕಲವ್ಯ : ೧೯೮೮
- ಹ್ವಾದವರು : ೧೯೯೩

ಪ್ರಬಂಧ ಸಂಕಲನ

- ಒಂದಿಷ್ಟು ಕ್ಷಣಗಳು : ೧೯೯೪

ಧ್ವನಿ ಸುರಳಿ

- ಎದೆಯ ಮಾತು
- ಓ ಬಾ; ಬಾ ಬೆಳಕೆ
- ಗೀತ ಮಾಧುರಿ – ಲಹರಿ (ಒಂದು ಕವಿತೆ)

ಸಂಪಾದನೆ

- ರಕ್ತದ ಹೊಳೆ ಬೆಂಕಿಯ ಮಳೆ
- ಕೃಷ್ಣ ಪ್ರಭೆ – ೩೮ ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಚಿಕೆ ಸಾಮರಸ್ಯ
- ನಿಜದ ನೆಲೆ – ಡಾ. ಬಿ.ಕೆ. ಹಿರೇಮಠ, ಅಭಿನಂದನಾ ಗ್ರಂಥ

೧೯೫೯ರಲ್ಲಿ ವಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಕಲಗುರ್ಕಿ ಎಂಬ ಗ್ರಾಮದಲ್ಲಿ ತಿಮ್ಮಣ – ಜೆಟ್ಟವ್ವ ಎಂಬ ದಂಪತಿಗಳ ಬಡ

ಕುಟುಂಬದಲ್ಲಿ ಜನಿಸಿದ ಸತ್ಯಾನಂದ ಪಾತ್ರೋಟರು. ತಮ್ಮ ಪ್ರಾಥಮಿಕ ಶಿಕ್ಷಣವನ್ನು ಕಲಗುರ್ಕಿಯಲ್ಲಿ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಮುಳವಾಡದಲ್ಲಿ ಪೂರೈಸಿದರು. ಬಡತನ ಕಾರಣಕ್ಕಾಗಿ ಮುಂದಿನ ಪಿ.ಯು.ಸಿ ಶಿಕ್ಷಣಕ್ಕಾಗಿ ಅವರು ತಮ್ಮ ಅಕ್ಕನ ಬಳಿ ಬಂದರು. ಆದರೆ ಅಲ್ಲಿಯೂ ಶಿಕ್ಷಣವನ್ನು ಮುಂದುವರೆಸಲು ಸಾಧ್ಯವಾಗದೇ ಇದ್ದಾಗ ಗೆಳೆಯರು ಅವರಿಗೆ ಸಹಾಯ ಮಾಡಿದರು. ಪಿ.ಯು.ಸಿ. ಕಲಿಯುತ್ತಿರುವ ಸಂದರ್ಭದಲ್ಲಿಯೇ ಅವರು ಕವಿತೆಗಳನ್ನು ಬರೆಯುವುದನ್ನು ಆರಂಭಿಸಿದರು.

೧೯೮೦ರಲ್ಲಿ 'ಹೇಮಕೂಟ' ಎಂಬ ಪತ್ರಿಕೆಯಲ್ಲಿ ಪಾತ್ರೋಟರ ಮೊದಲ ಕವಿತೆ 'ಮಕರಂದ' ಪ್ರಕಟವಾಯಿತು. ಅದು ಅವರ ಮುಂದಿನ ಕಾವ್ಯ ರಚನೆಗೆ ಸ್ಫೂರ್ತಿಯನ್ನು ಒದಗಿಸಿತು. ಈ ಸ್ಫೂರ್ತಿ ದೊರೆತದ್ದು, ಪಾತ್ರೋಟರು ಬಾಗಲಕೋಟೆಯ ಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಬಿ.ಎ. ಪದವಿಯನ್ನು ಮಾಡುತ್ತಿರುವ ಸಂದರ್ಭದಲ್ಲಿ ಡಾ. ಬಿ.ಕೆ. ಹಿರೇಮಠರ ಸಹಕಾರ, ಪ್ರೋತ್ಸಹದಿಂದ.

ಪಾತ್ರೋಟರು ಪದವಿಯನ್ನು ಪಡೆದರೂ. ಬಡತನದಿಂದಾಗಿ ಜೀವನ ಸಾಗಿಸುವುದಕ್ಕಾಗಿ ತೊಂದರೆಯನ್ನು ಅನುಭವಿಸಿದರು. ಈ ಸಂದರ್ಭದಲ್ಲಿ ಅವರು ಅನೇಕ ಕಷ್ಟಗಳನ್ನು ಅನುಭವಿಸಿದರು. ೧೯೮೬ರಲ್ಲಿ ಜಮಖಂಡಿಯ ಸರಕಾರಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಬಿ.ಎಡ್‌ನ್ನು ನಂತರ ೧೯೮೯ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿಯನ್ನು ಪಡೆದುಕೊಂಡರು. ನಂತರ ಅವರು ತಮ್ಮ ಗುರುಗಳಾದ ಎಚ್.ವಿ. ಧರ್ಮಣ್ಣನವರ ಹಾಗೂ ಶ್ರೀರಾಮ ಇಟ್ಟಣ್ಣನವರ ಸಹಾಯದಿಂದ ಬಾಗಲಕೋಟೆಯ ಕಾಳಿದಾಸ ಮಾಧ್ಯಮಿಕ ಶಾಲೆಯಲ್ಲಿ (ಎಸ್.ಬಿ. ಪಾಟೀಲ ಪದವಿ ಪೂರ್ವ ಕಾಲೇಜು, ಬಾಗಲಕೋಟೆ) ಶಿಕ್ಷಕ ವೃತ್ತಿಗೆ ಸೇರಿದರು. ೧೯೮೯ರಲ್ಲಿ 'ಕರಿನೆಲದ ಕಲೆಗಳು' ಎಂಬ ಕವನ ಸಂಕಲನ ಪ್ರಕಟವಾಯಿತು. ೧೯೯೦ರಲ್ಲಿ ಸುಧಾ ವಾರ ಪತ್ರಿಕೆಯಲ್ಲಿ ಪಾತ್ರೋಟರ 'ಜಾಜಿ ಮಲ್ಲಿಗೆ' ಕವಿತೆ ಪ್ರಕಟವಾಯಿತು. ಈ ಕವಿತೆಯು ಪ್ರಸಿದ್ಧಿಯನ್ನು ಪಡೆದು, ಪಾತ್ರೋಟರು 'ಜಾಜಿ ಮಲ್ಲಿಗೆ ಕವಿ' ಎಂದು ಜನಪ್ರಿಯರಾದರು. ನಂತರ 'ಜಾಜಿ ಮಲ್ಲಿಗೆ' ಕವನ ಸಂಕಲನ ಪ್ರಕಟವಾಯಿತು. ೧೯೮೦-೮೨ರ ಅವಧಿಯಲ್ಲಿ ಬೀಳಗಿಯಲ್ಲಿ 'ಹುಚ್ಚ' ಕನ್ನಡವಾರ ಪತ್ರಿಕೆಯಲ್ಲಿ ಉಪ ಸಂಪಾದಕರಾಗಿ ಸೇವೆ ಸಲ್ಲಿಸಿದರು. ೧೯೯೦ರ ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಬರಹಗಾರರ ಸಂಘದವತಿಯಿಂದ ಜರುಗಿದ

[illegible]

ರಾಜ್ಯಮಟ್ಟದ ಯುವ ಕವಿ ಸಮ್ಮೇಳನದಲ್ಲಿ ಪಾಲ್ಗೊಂಡರು. ಅದೇ ತಿಂಗಳು ಹುಬ್ಬಳ್ಳಿಯಲ್ಲಿ ಜರುಗಿದ ಅಖಿಲ ಭಾರತ ೫೭ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕವಿಗೋಷ್ಟಿಯಲ್ಲಿ ಭಾಗಿಯಾದರು. ಹಾಗೂ ಅದೇ ವರ್ಷ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರಿನಲ್ಲಿ ನಡೆದ ಬಂಡಾಯ ಸಾಹಿತ್ಯ ಸಮಾವೇಶದ ಕವಿಗೋಷ್ಟಿಯಲ್ಲಿ ಭಾಗವಹಿಸಿದ್ದರು. ೧೯೯೦ರ ಸೆಪ್ಟಂಬರ್ ನಲ್ಲಿ ಚಿತ್ರದುರ್ಗದಲ್ಲಿ ನಡೆದ ರಾಜ್ಯ ಮಟ್ಟದ ೯ನೇ ಬಂಡಾಯ ಸಾಹಿತ್ಯ ಸಮ್ಮೇಳನದ ಕವಿಗೋಷ್ಟಿಯ ಅಧ್ಯಕ್ಷರಾಗಿದ್ದರು. ೧೯೯೨ರಲ್ಲಿ ಫೆಬ್ರುವರಿ ೧೪-೧೫ರಂದು ಬಾಗಲಕೋಟೆಯಲ್ಲಿ ೧೦ನೇ ರಾಜ್ಯ ಮಟ್ಟದ ಬಂಡಾಯ ಸಾಹಿತ್ಯ ಸಮ್ಮೇಳನವನ್ನು ಸಂಘಟನೆ ಮಾಡಿದರು. ಅಲ್ಲದೇ ಅವರು ಇತ್ತೀಚೆಗೆ ಕರ್ನಾಟಕ ಸರ್ಕಾರದಿಂದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿ ನಾಮಕರಣಗೊಂಡಿದ್ದಾರೆ.

ಬಂಡಾಯ ಸಾಹಿತ್ಯ ಸಂಘಟನೆಯ ಮೂಲಕ ಬೆಳೆದ ಸತ್ಯಾನಂದ ಪಾತ್ರೋಟರು ದಲಿತ ಸಂವೇದನೆಯ ದಟ್ಟ ಅನುಭವಗಳನ್ನು ದಾಖಲಿಸುವಲ್ಲಿ ಮಾಡಿದ ಪ್ರಯತ್ನ ಗಮನಾರ್ಹವಾದುದು. ಅವರು 'ಕರಿ ನೆಲದ ಕಲೆಗಳು', 'ಜಾಜಿ ಮಲ್ಲಿಗೆ', 'ಕಲ್ಲಿಗೂ ಗೊತ್ತಿರುವ ಕತೆ', 'ಕರಿಯ ಕಟ್ಟಿದ ಕವನ', 'ನನ್ನ ಕನಸಿನ ಹುಡುಗಿ' ಹಾಗೂ 'ನದಿಗೊಂದು ಕನಸು ಮತ್ತು ಅವಳು' ಎಂಬ ಆರು ಕವನ ಸಂಕಲನಗಳನ್ನು ಬರೆದಿದ್ದಾರೆ.

ಪಾತ್ರೋಟರೆ ತಮ್ಮ 'ಕರಿಯ ನೆಲದ ಕಲೆಗಳು' ಎಂಬ ಸಂಕಲನದ ಅರಿಕೆಯಲ್ಲಿ 'ನಾನು ಹುಟ್ಟಿದ್ದ, ಕೆಳವರ್ಗದಲ್ಲಿ ಬೆನ್ನಟ್ಟಿ ಬಂದದ್ದು ಬಡತನ, ಸುತ್ತಲಿದ್ದುದು ಮಡಿವಂತಿಕೆಯಿಂದ ತುಂಬಿ ಜಿಡ್ಡುಗಟ್ಟಿನಾರುವ ವ್ಯವಸ್ಥೆ, ಇದು ಶೋಷಣೆ ಮಾಡಿ ನನ್ನ – ನನ್ನಂಥವರ ಮೌಲ್ಯಗಳನ್ನು ಹಿಂಡಿ ಹತ್ತಿಕ್ಕಲು ಪ್ರಯತ್ನಿಸಿದಾಗ : ನನಗೆ ನನ್ನ ಜನರಿಗೆ ಆಗುತ್ತ ಬಂದ ಆಘಾತ, ಅನುಭವಿಸುತ್ತ ಬಂದ ಎದೆಯಾಳದ ನೋವು ಅಪಾರ ಹಾಗೆ ಒಟ್ಟೈಸಿ ನಿಂತ ನೋವೆ ಈ ಕಾವ್ಯ' ಎಂದು ಪ್ರಸ್ತಾಪಿಸಿದ್ದು ಗಮನಾರ್ಹ ಸಂಗತಿ. ಈ ಮಾತನ್ನು ಇನ್ನಷ್ಟು ದೃಢೀಕರಿಸಲೆಂಬಂತೆ ಅವರು ತಮ್ಮ 'ಕಲ್ಲಿಗೂ ಗೊತ್ತಿರುವ ಕತೆ' ಸಂಕಲನದಲ್ಲಿ 'ಸತ್ಯವನ್ನು ಜೀವನದ ಸತ್ವವನ್ನು ಅರಗಿಸುವುದು ಕಾವ್ಯದ ಗುರಿ, ನನ್ನ ಕವಿತೆಗಳ ಮೂಲ ಆಶಯವೂ ಅದೆ, ನನ್ನ ಬರಹಕ್ಕೆ ನನ್ನ ತಂದೆ ತಾಯಿ, ನಾನು

ಬದುಕುತ್ತಿರುವ ಸಮಾಜ ಹೊಸ-ಹೊಸ ನೆಲೆಯನ್ನು ನೀಡಿವೆ. ಅಲ್ಲಿ ಕಂಡುಂಡ ನೋವು ನಲಿವುಗಳೇ ಸತ್ಯ ಮತ್ತು ವಾಸ್ತವದ ಪರಿಕಲ್ಪನೆಯಲ್ಲಿ ಅರಳಿವೆ ಎಂದಿದ್ದಾರೆ'.[೧]

ಪಾತ್ರೋಟರ ಕವನ ಸಂಕಲನಗಳು ಅನೇಕ ಸುಂದರ ಪ್ರೇಮ ಕವಿತೆಗಳನ್ನು ಹೊಂದಿವೆ. ಎಲ್. ಎಸ್. ಶೇಷಗಿರಿರಾವ್ ಪಾತ್ರೋಟರ 'ನದಿಗೊಂದು ಕನಸು ಮತ್ತು ಅವಳು' ಎಂಬ ಕವನ ಸಂಕಲನದ ಪ್ರಸ್ತಾವನೆಯಲ್ಲಿ ಹೀಗೆ ಹೇಳಿದ್ದಾರೆ – "ಸಾಮಾನ್ಯವಾಗಿ 'ಪ್ರೇಮ ಕವನ' ಎಂದಾಗ ಪ್ರೇಮವು ಈ ಕವನದ ವಸ್ತು ಎಂದು ನಾವು ಅರ್ಥಮಾಡುತ್ತೇವೆ. ಆದರೆ ಈ ಮಾತನ್ನು ಸ್ಪಷ್ಟಮಾಡಿಕೊಳ್ಳಬೇಕು, ಸಾವಿರಾರು ಕವಿಗಳು ಪ್ರೇಮವನ್ನು ಕುರಿತು ಹಾಡಿದ್ದಾರೆ, ಪ್ರೇಮವಷ್ಟೇ ಇವುಗಳ ವಸ್ತುವಾಗಿದ್ದರೆ ಹೇಳಬಹುದಾದದ್ದೆಲ್ಲ ಮುಗಿದು ಹೋಗಿ ಎಂದೋ ಪ್ರೇಮ ಕವನಗಳನ್ನು ರಚಿಸುವ ಸಾಧ್ಯತೆ ಮುಗಿದು ಹೋಗುತ್ತಿತ್ತು. ಆದರೆ ವಾಸ್ತವವಾಗಿ ಒಳ್ಳೆಯ ಪ್ರೇಮ ಕವನ ಒಂದರ ವಸ್ತು ಪ್ರೇಮವಷ್ಟೇ ಅಲ್ಲ, ಆ ಕವಿಯ ಅನುಭವಕ್ಕೆ ಬಂದ ಪ್ರೇಮ. ಆ ಕವಿಯು ಪ್ರೇಮವನ್ನು ಅನುಭವಿಸಿದ ವಿಶೇಷ ರೀತಿ ಆದ್ದರಿಂದಲೇ ಇಂದು ಹೊಸತು ಎನಿಸುವ ಫ್ರೆಷ್ ಎನಿಸುವ ಪ್ರೇಮ ಕವನಗಳನ್ನು ಬರೆಯುವುದು ಸಾಧ್ಯ. ಇನ್ನು ಒಂದು ಸಾವಿರ ವರ್ಷಗಳ ನಂತರವೂ ಮನುಷ್ಯನು ಮನುಷ್ಯನಾಗಿ ಉಳಿದಿದ್ದರೆ ಒಳ್ಳೆಯ ಪ್ರೇಮ ಕವನಗಳನ್ನು ರಚಿಸುವುದ ಸಾಧ್ಯವಾಗುತ್ತದೆ ಪಾತ್ರೋಟರು ಇಂಥ ಹಲವು ಕವನಗಳನ್ನು ಬರೆದಿದ್ದಾರೆ.[೨]

ಪಾತ್ರೋಟರು ತಮ್ಮ ಪ್ರೇಮ ಕವನಗಳ ಕುರಿತು 'ನನ್ನ ಕನಸಿನ ಹುಡಗಿ' ಕವನ ಸಂಕಲನದಲ್ಲಿ ಪ್ರೀತಿ, ಪ್ರೇಮವೇ ಈ ಸಂಕಲನದ ಸ್ಥಾಯಿಭಾವ. ಪ್ರೀತಿಗೆ ಅನಂತ ಮುಖ, ಬುದ್ಧ, ಅಕ್ಕಮಹಾದೇವಿಯವರು ಪ್ರೀತಿಯ ನೆಲೆ ಇನ್ನಿತರಿಗಿಂತ ಭಿನ್ನವಾದರೂ ಅದರ ಸೆಳೆವಿನಿಂದ ಯಾರೂ ತಪ್ಪಿಸಿಕೂಂಡಂತಿಲ್ಲ. ಪ್ರೀತಿ ಇದ್ದಲ್ಲಿ ಚೈತನ್ಯ ಹಾಗೂ ಕ್ರಿಯಾಶೀಲತೆ ಇರುತ್ತದೆಂಬುದೇ ನನ್ನ ನಂಬುಗೆ. ಪ್ರೀತಿ ಇಲ್ಲದೇ ಬದುಕುವುದಾದರೂ ಹೇಗೆ? ಈ ಪ್ರೀತಿ ವಿವಿಧ ನೆಲೆಯಲ್ಲಿ ನನ್ನನ್ನು ಗಾಢವಾಗಿ ಕಾಡಿದೆ. ಪ್ರಕೃತಿಯೊಂದಿಗೆ ಅರ್ಥಪೂರ್ಣ ಸಂಬಂಧ ಕಲ್ಪಿಸಿ ಹೊಸ ಸಂವೇದನೆಗಳನ್ನು ನನ್ನೊಳಗೆ ರೂಪಿಸಿದೆ. ಪ್ರೀತಿಗಿರುವ ಶಕ್ತಿ, ಸಾಮರ್ಥ್ಯಯಾವುದಕ್ಕಿದೆ? ಯಾರಲ್ಲಿದೆ? ಎಂದಿದ್ದಾರೆ.[೩]

ಟಿಪ್ಪಣಿಗಳು

೧. ದಲಿತ ಸಂವೇದನೆ – ರಂಗರಾಗ ವನದುರ್ಗ

೨. ನದಿಗೊಂದು ಕನಸು ಮತ್ತು ಅವಳು – ಎಲ್.ಎಸ್.ಶೇಷಗಿರಿ ರಾವ್ ರವರ ಪ್ರಸಾವನೆ

೩. ನನ್ನ ಕನಸಿನ ಹುಡಗಿ - ಪಾತ್ರೋಟರ ಒಂದಿಷ್ಟು ಮಾತುಗಳು

ಅಧ್ಯಾಯ – ೨

ಪಾಶ್ಚಾತ್ಯರ ಕವಿತೆಗಳಲ್ಲಿ ಪ್ರೀತಿಯ ಸ್ವರೂಪ

೩.೧ ಪ್ರಕೃತಿಯೊಳು ಒಂದಾದ ಪ್ರೀತಿ :

ಭಾರತೀಯ ಪರಂಪರೆಯಲ್ಲಿ ಪ್ರಕೃತಿಯನ್ನು ದೇವತೆಯೆಂದು ಪೂಜಿಸುತ್ತಾ, ಆರಾಧಿಸುತ್ತ ಬರಲಾಗಿದೆ. ಪ್ರಕೃತಿಯಲ್ಲಿನ ಗಿಡ, ಮರ, ಗುಡ್ಡ, ನೀರು, ಮಣ್ಣು, ಪ್ರಾಣಿ, ಸೂರ್ಯ, ಚಂದ್ರ ಇತ್ಯಾದಿಗಳೆಲ್ಲವುಗಳನ್ನು ಮನುಷ್ಯ ಪೂರೈಸುತ್ತಾ ಬಂದಿದ್ದಾನೆ. ಆದರೆ ಇಂದು ಇವೆಲ್ಲವುಗಳ ವಿನಾಶಕ್ಕೆ ಇತನು ಕಾರಣನಾಗುತ್ತಿದ್ದಾನೆ. ಪ್ರಕೃತಿ ಶ್ರೀಮಂತವಾಗಿದ್ದರೆ ಮಾತ್ರ ಮನುಷ್ಯನ ಜೀವನ ಶ್ರೀಮಂತವಾಗಿರಲು ಸಾಧ್ಯ. ಪ್ರಕೃತಿಯಿಂದಲೇ ಆತನ ಬದುಕು ಮತ್ತು ಪ್ರಕೃತಿಯ ವಿನಾಶದಿಂದ ಮನುಷ್ಯನ ಬದುಕು ವಿನಾಶದತ್ತ ಸಾಗುವುದು ಎಂಬುದು ಸತ್ಯ. ಆದ್ದರಿಂದ ಮನುಷ್ಯ ತನ್ನ ಸುಂದರ ಬದುಕಿಗೆ ಪ್ರಕೃತಿಯನ್ನು ಪ್ರೀತಿಸುವುದು, ಆರಾಧಿಸುವುದು ಅಗತ್ಯ. ಹಾಗೇಯೆ ಇತಿಹಾಸ ನೋಡಿದಾಗ ಮೊದಲಿನಿಂದಲೂ ಅನೇಕ ಮಹನೀಯರು ಪ್ರಕೃತಿ ಕುರಿತು ಅಪಾರ ಕಾಳಜಿ, ಪ್ರೀತಿ ತೋರಿ, ಅದರ ಉಳಿವಿಗಾಗಿ ಅಪಾರ ಹೋರಾಟ ಮಾಡಿರುವುದನ್ನು ಹಾಗೂ ಇಂದಿಗೂ ಅನೇಕರು ಮಾಡುತ್ತಿರುವುದನ್ನು ಗಮನಿಸಬಹುದು. ಇಂತಹ ಪ್ರೀತಿ, ಕಾಳಜಿಯನ್ನು ತೋರಿದವರಲ್ಲಿ ಕವಿಗಳದ್ದು ಪ್ರಮುಖ ಪಾತ್ರ. ಸಾಮಾನ್ಯವಾಗಿ ಎಲ್ಲ ಕವಿಗಳು ಪ್ರಕೃತಿ ಸೌಂದರ್ಯ ಕುರಿತು ಹಾಡಿ ವರ್ಣಿಸಿರುವುದು ಕಂಡು ಬರುತ್ತದೆ. ಕೆಲ ಕವಿಗಳು ಪ್ರಕೃತಿ ಕವಿಗಳೆಂದೇ ಪ್ರಸಿದ್ಧರೂ ಆಗಿದ್ದಾರೆ. ಪ್ರಾಚೀನ ಕಾಲದಿಂದಲೂ ಇಂದಿನವರೆಗೂ ಅನೇಕ ಕವಿಗಳು ಪ್ರಕೃತಿ ಕುರಿತು ಅಗಾಧವಾದ ತಮ್ಮ ಪ್ರೀತಿಯನ್ನು, ಸುಂದರ ಕವಿತೆಗಳಲ್ಲಿ ವ್ಯಕ್ತಪಡಿಸಿದ್ದಾರೆ. ಇಂದಿನ ಆಧುನಿಕ ಯುಗದಲ್ಲಿ ಮನುಷ್ಯ ತನ್ನ ಐಷಾರಾಮಿನ ಜೀವನಕ್ಕಾಗಿ ಪ್ರಕೃತಿಯನ್ನು ನಾಶ ಮಾಡುತ್ತಿದ್ದಾನೆ. ಆದ್ದರಿಂದ ಇಂದು ಪ್ರಕೃತಿ ಕುರಿತು ಪ್ರೀತಿ, ಕಾಳಜಿ ತುಂಬಾ ಅಗತ್ಯವಾಗಿದ್ದು, ಇದನ್ನು ಅನೇಕ ಆಧುನಿಕ ಕವಿಗಳ ಕವಿತೆಗಳಲ್ಲಿ ಕಾಣಬಹುದು. ಅವರಲ್ಲಿ ದಲಿತ ಕವಿ ಸತ್ಯಾನಂದ ಪಾತ್ರೋಟರು ಒಬ್ಬರು. ಸತ್ಯಾನಂದ ಪಾತ್ರೋಟರು ಪ್ರಕೃತಿ ಕುರಿತು ಸುಂದರವಾದ ಕವಿತೆಗಳನ್ನು ರಚಿಸಿದ್ದಾರೆ

"ಬಾರೋ ಬಾರೋ ಚಂದಿರ
ನನ್ನ ಗುಡಿಸಲ್ಹತ್ತಿರ
ಹರಕು ಕೌದಿ ಹಾಸಿ ನಿನಗೆ

ಕೋರುವೆನು ನಿನಗೆ ಸ್ವಾಗತ
ಹಣ್ಣು ಕಾಯಿ ಬಳಿಯಲಿಲ್ಲ
ಹಾಲು ಗೀಲು ಕುಡಿಸಲಿಲ್ಲ
ರೊಟ್ಟಿ ಚಟ್ನಿತಿನಿಸಬಲ್ಲೆ
ಸನಿಹ ಬಾರೋ ಚಂದಿರ"

ಪಾತ್ರೋಟರ ಹಲವಾರು ಕವನಗಳಲ್ಲಿ ಹೂವು, ಗಿಡ-ಗಂಟಿ, ಗಿರಿಶಿಖರ – ಕಂದರ, ಹಳ್ಳಕೊಳ್ಳ, ಮೀನು, ಮರ ಮಾವು ತೆಂಗು, ಕೋಗಿಲೆ, ಚಂದ್ರ ತಾರೆ ಭೂಮಿ, ಮಳೆ ಮೋಡ ಭುವಿ.... ಇತ್ಯಾದಿ ದಾಂಗುಡಿ ಇಡುತ್ತವೆ. ಆದರೆ ಬರಿ ನಿಸರ್ಗದ ಪ್ರಸ್ತಾಪಕ್ಕಿಂತ ಅವು ಪ್ರತೀಕಗಳಾಗಿ ಮೂಡಿ ಬಂದದ್ದೇ ಹೆಚ್ಚು.

"ಚಿಗುರು, ಹೂ, ಕಾಯಿ –
ಹೊತ್ತ ಮರ ಮರಕೆಲ್ಲ
ಬೇರು ಆದವ ನಾನು
ನನ್ನ ಬಳಿ ಬಂದೊಮ್ಮೆ
ಹಾಡು ನೀ ಕೋಗಿಲೆ"

ತಾನು ಪ್ರಕೃತಿಗೆ ಬೇರು, 'ಗಿರಿ ವನಗಳಿಗೆ ಉಸಿರು ಆದವ ನಾನು' ಎಂದು ಹೇಳುವಲ್ಲಿ ತನ್ನ ಪರಂಪರೆಯ ಅನ್ವೇಷಣೆಯೊಂದಿಗೆ ಕವಿಯ ಅದಮ್ಯ ಅತ್ಮವಿಶ್ವಾಸವೂ ವ್ಯಕ್ತವಾಗುತ್ತದೆ.

ಇವರು ಪ್ರಕೃತಿಗೆ ಮನುಷ್ಯ ಸಂಬಂಧೀ ಪ್ರತೀಕಗಳನ್ನು ಹೆಣೆಯುತ್ತಾರೆ.

"ನೆಲದೊಡಲ ಹೊಕ್ಕಳದಿ
ನೆಗೆದು ಚಿಗಿತರೂ ಕೂಡ
ಕತ್ತರಿಸಿಕೊಂಡಿಲ್ಲ ಮಣ್ಣೊಡಲ
ಕರಳು"

ಇವರು ತಮ್ಮ 'ಪ್ರಕೃತಿ' ಕವನದಲ್ಲಿ ಪ್ರಕೃತಿಯನ್ನು ಮುಪ್ಪಿರದ ಷೋಡಶಿಗೆ ಹೋಲಿಸಿ, ಅವಳು ಎಲ್ಲರನ್ನೂ ಹೆತ್ತು ಎಲ್ಲವನ್ನು ಹೊತ್ತು, ಎದೆಹಾಲು ನೀಡಿ ಲಾಲಿ ಹಾಡಿ, ನಾಯಿ ಹಂದಿ ಬೆಕ್ಕು ಮೊಲಗಳ ಹಾಗೆ ತನ್ನ ಕರುಳ ಕುಡಿಗಳನ್ನು ತಾನೇ ತಿಂದರೂ ಮತ್ತೆ ಹೆತ್ತು ಕಂಕುಳಲಿ ಹೊತ್ತುಕೊಳ್ಳುತ್ತಾಳೆಂದು ವರ್ಣಿಸುತ್ತಾರೆ.

ಪ್ರಕೃತಿಯ ನಾದ ಲಯಗಳನ್ನು ಸಹೃದಯತೆಯಿಂದ ಅರ್ಥವಿಸಿಕೊಂಡ ಪಾತ್ರೋಟರು ನಿಸರ್ಗದಲ್ಲಿಯ ವೈರುಧ್ಯಗಳನ್ನೂ ಕಂಡರಿಸಿದ್ದಾರೆ. ಅದರೊಂದಿಗೆ ಸೌಹಾರ್ದ ಸಂಬಂಧವನ್ನೊ ಬೆಸೆಯುತ್ತಾರೆ. ಅಂತೆಯೇ ಅವರು ಸೂಸುವ ಗಾಳಿ, ಬಿರಿಯುವ ಮೊಗ್ಗು, ಗಿರಿಶಿಖರಗಳನ್ನು ನೋಡುವ ದೃಷ್ಟಿಯಲ್ಲಿ ಭಿನ್ನರಾಗಿ ಅನನ್ಯತೆಯನ್ನು ಸಾಧಿಸಲು ಯತ್ನಿಸುತ್ತಾರೆ.[೪]

ಎಷ್ಟು ಸೊಗಸಾಗಿದ್ದಾಳೆ ಪ್ರಕೃತಿ
ಮುಪ್ಪಿರದ ಷೋಡಶಿ

ಎಲ್ಲರನ್ನು ಹೆತ್ತು, ಎಲ್ಲವನ್ನು ಹೊತ್ತವಳ
ಎಲ್ಲರಿಗೂ ಎದೆಹಾಲು ಉಣಲಿಕ್ಕಿ
ಲಾಲಿ ಹಾಡುಲ ಲ್ಲೆಗರೆದವಳು
ಮಕ್ಕಳಾಟಕ್ಕೆ ಅವರ ಒದೆತಕ್ಕೆ
ಪುಲಕಗೊಂಡರೂ
ಆಗೊಮ್ಮೆ, ಈಗೊಮ್ಮೆ
ಕೋಪ ತೋರ್ಪಡಿಸಿ ಬಿರುಕು ಬಿಟ್ಟವಳು
ನಾಯಿ, ಹಂದಿ, ಬೆಕ್ಕು, ಮೊಲಗಳ ಹಾಗೆ
ತನ್ನ ಕರುಳಿನ ಕುಡಿಗಳ
ತಾನೇ ತಿಂದರೂ ಕೂಡ
ಮರುಗಳಿಗೆಯಲಿ ಮತ್ತೆ ಹೆತ್ತು ಕಂಕುಳಲಿ ಹೊತ್ತವಳು[೫]

ಪಾತ್ರೋಟರು 'ಪ್ರಕೃತಿ' ಎಂಬ ಈ ಕವನದಲ್ಲಿ ಪ್ರಕೃತಿ ಮಾತೆಯ ಸುಂದರ ವರ್ಣನೆ ಮಾಡಿದ್ದಾರೆ – 'ಚಿರವಾಗಿರುವ ಪ್ರಕೃತಿ ಮಾತೆ, ಕ್ಷಣಿಕವಾಗಿರುವ ಜೀವಿಗಳಲ್ಲವನ್ನು ಹೆತ್ತು, ಹೊತ್ತು ಅವು ಮಾಡುವ ತಪ್ಪುಗಳನ್ನು ಕ್ಷಮಿಸುತ್ತ, ಚಿಕ್ಕ ಕೋಪವನ್ನು ಮಾತ್ರ ವ್ಯಕ್ತಪಡಿಸುತ್ತ, ಮತ್ತೆ ಪ್ರೀತಿಯಿಂದ ಸಲಹುತಿಹಳು ಎಲ್ಲರನ್ನು' ಇಲ್ಲಿ ಪ್ರಕೃತಿ ಕುರಿತು ಕವಿಯ ಪ್ರೀತಿ, ಕಾಳಜಿ ವ್ಯಕ್ತವಾಗುತ್ತದೆ.

ಕಾಡಲ್ಲೋ ಇದು ಬರೀ ಕಲ್ಲುಗಳ ಕಾಡಲ್ಲ
ನಾಡಿನ ಸಿರಿ ಸೊಬಗು ಇಲ್ಲಿಹುದು ನೋಡ

ಕಾಡಿನಿಂದಲೇ ಇಹವು ಕಾಡಿನಿಂದಲೇ ಜಗವು
ಕಾಡು ಅಳಿದರೆ ಮನುಜ ಬದುಕುವುದು ಹೇಗೆ
ದೇಹಕ್ಕೆ ಉಸಿರಿರಲಿ ನಾಡಿಗೆ ಕಾಡಿರಲಿ
ಈ ನಾಡ ಮಣ್ಣಲ್ಲಿ ಗುಡಿಸಲಿಗು ಬೆಲೆಯಿರಲಿ [೬]

ಪ್ರಕೃತಿ ಕುರಿತು ಅಪಾರವಾದ ಪ್ರೀತಿ ಹಾಗೂ ಅದರ ರಕ್ಷಣೆಯ ಕುರಿತು ಕಾಳಜಿಯನ್ನು ಈ ಕವನವು ವ್ಯಕ್ತಪಡಿಸುತ್ತದೆ. ಕಾಡಿದ್ದರೆ ನಾಡು, ಕಾಡಿದ್ದರೆ ಮಾತ್ರ ಮನುಷ್ಯನ ಬದುಕು ಸಾಧ್ಯ . ಕಾಡು ನಾಶವಾದರೆ, ನಾಡು ನಾಶ ಹಾಗೂ ಮನುಷ್ಯನ ಬದುಕು ಅಳಿವಿನತ್ತ ಸಾಗುವುದು. ನಾಡಿನ ಸಿರಿ, ಸೊಬಗು, ಸಂಪತ್ತು ಎಲ್ಲಕ್ಕೂ ಮೂಲ ಕಾಡು, ಎಲ್ಲ ಪ್ರಾಣಿ ಪಕ್ಷಿಗಳ ಸುಂದರ ಜೀವನಕ್ಕೂ ಕಾಡು ಆಧಾರ ಎಂಬ ನೈಜ ಅಂಶವನ್ನು ಕವಿ ಪಾತ್ರೋಟರ ಈ ಕವಿತೆ ಚಿತ್ರಿಸುತ್ತದೆ.

ಈ ಸೂರ್ಯ, ಈ ಚಂದ್ರ, ಈ ನಕ್ಷತ್ರ
ಹಕ್ಕಿ, ನದಿ, ಹೂ, ಗಿಡ-
ಮರ ಬಳ್ಳಿಗಳ ಬಳಗವೇ
ನನಗೆ
ಲಂಗೋಟಿ ಗೆಳೆಯರು
ಹತ್ತಿರದ ಬಂಧುಗಳು
ಈಗಲೂ
ಈ ನೆಲ
ನಿನ್ನ ಬೆನ್ನಿಗಾಸರೆ
ಯಾಕೆಂದರೆ
ಮಲಗಲಿಲ್ಲ
ನನಗೆ ನನ್ನದೇ ಮನೆ [೭]

ಕವಿ ಪಾತ್ರೋಟರು ನಿಸರ್ಗದೊಂದಿಗೆ ಹೊಂದಿದ ಸ್ನೇಹ, ಬಾಂಧವ್ಯ 'ಈ ನೆಲ' ಎಂಬ ಈ ಕವಿತೆಯಿಂದ ವೇದ್ಯವಾಗುತ್ತದೆ. ಇಲ್ಲಿ ಕವಿಗೆ ಸೂರ್ಯ, ಚಂದ್ರ, ನಕ್ಷತ್ರ, ಹಕ್ಕಿ, ನದಿ, ಹೂ, ಗಿಡ-ಮರ ಬಳ್ಳಿಗಳ ಬಳಗವೇ ಗೆಳೆಯರು, ಬಂಧುಗಳು, ಕವಿಗೆ ಈ ಗೆಳೆಯರು, ಬಂಧುಗಳು ಎಂದರೆ ಸಂಭ್ರಮ, ಕುಣಿಯುವಷ್ಟು ಸಂತೋಷ ಮತ್ತು ಕವನಕ್ಕೆ ಇವರೇ ಪ್ರೇರಣೆ.

[illegible]

ಮೋಡ
ಸಣ್ಣವಿರಲಿ ದೊಡ್ಡವಿರಲಿ
ಸಣ್ಣತನ ತೋರುವುದೇ ಇಲ್ಲ
ಡಿಕ್ಕಿ ಹೊಡೆದರೂ
ಒಂದಕ್ಕೊಂದು ಕೂಡುತ್ತವೆ, ಕಲೆಯುತ್ತವೆ
ಕಾಡಿರಲಿ ಊರಿರಲಿ
ಮಳೆಯಾಗಿ ಬುವಿಗೆ ಇಳಿಯುತ್ತವೆ.
ತಂಗಾಳಿ ತೀಡುತ್ತ
ಹಸಿರಿಗೆ ಜನ್ಮ ಕೊಡುತ್ತದೆ.[೮]

ಭೂಮಿಗೆ ತಂಪೆರದು. ಹಸಿರನ್ನು ಸೃಷ್ಟಿಸುವ ಮೋಡಗಳು ಸಣ್ಣವಿರಲಿ, ದೊಡ್ಡವಿರಲಿ ಭೇಧ ತೋರದೇ, ಒಂದಕ್ಕೊಂದು ಘರ್ಷಿಸಿದರೂ ಕೂಡುತ್ತವೆ, ಕಲೆಯುತ್ತವೆ. ಕಾಡಿರಲಿ, ನಾಡಿರಲಿ ಮಳೆ ಸುರಿಯುತ್ತವೆ. ಮೋಡಗಳು ಎಲ್ಲರ ಮನಸ್ಸನ್ನು ಅರಳಿಸುತ್ತವೆ. ಇವುಗಳ ಮನಸ್ಸು ಸರಳ ಆದರೆ ಮನುಷ್ಯನ ಮನಸ್ಸು ನಿಗೂಢ, ಅರ್ಥವಾಗುವುದೇ ಇಲ್ಲ, ಮನುಷ್ಯನಿಗಿಂತ ಮೋಡ – ಮಳೆಗಳೇ ಎಷ್ಟೋ ಮೇಲು, ಎನ್ನುತ್ತದೆ 'ಪಾತ್ರೋಟರ ಮೋಡಗಳು' ಎಂಬ ಕವಿತೆ.

ನೀಲಿಯಾಗಸದಲ್ಲಿ
ಏನಿದೆಯೋ ನಾ ಕಾಣೆ
ಇರುಳಾಗುತ್ತಿರುವಂತೆ ನಕ್ಷತ್ರಗಳ ಸಂತೆ
ಅಲ್ಲಲ್ಲಿ
ಚಲುವೆ ಮುಡಿದಂತೆ ಮಲ್ಲಿಗೆಯ ದಂಡೆ[೯]

ಸುಂದರ ಲೋಕ ನಕ್ಷತ್ರಲೋಕದ ಸೌಂದರ್ಯವನ್ನು ವರ್ಣಿಸುತ್ತ ಕವಿ ಕತ್ತಲಾಗುತ್ತಿದ್ದಂತೆ ನಕ್ಷತ್ರಗಳ ಲೋಕವೇ ತರೆದು ಕೊಳ್ಳುತ್ತದೆ. ಅಲ್ಲಲ್ಲಿ ಚಲುವೆಯ ಮಲ್ಲಿಗೆಯನ್ನು ಮುಡಿದಂತೆ ಬರುತ್ತದೆ. ಸದಾ ನಗುತ್ತಲೇ ಬೆಳಕನ್ನು ಚೆಲ್ಲುತ್ತಿರುವವು ಎನ್ನುತ್ತಾರೆ.

ಎಲ್ಲ ಬೇರಿಗೂ ಉಂಟು ಕೆಸರು
ಒಂದೇ ಉಸಿರು

ಗುಣದಲ್ಲಿ ಬಣ್ಣದಲ್ಲಿ ಒಂದಿಷ್ಟು ಪರಕು
ಕಹಿ, ಸಿಹಿ, ವಗರು
ತಿಳಿ, ಗಿಳಿ, ಗಡಸು ಹಸಿರು
ರೋಗಕ್ಕಂತೂ ಗ್ಯಾರಂಟಿ ಮದ್ದು
ಎಲ್ಲ ಇದ್ದರೂ;
ಒಂದಕ್ಕೊಂದು ಕೂಡಿ ನಲಿಯುತ್ತಿವೆ
ಒಂದರೊಳಗೊಂದು.[೧೦]

ನೆಲದೊಡಲಿನಲ್ಲಿ ಎಲ್ಲ ಬೇರುಗಳಿಗೂ ಒಂದೇ ಉಸಿರು, ಕೆಸರು ಗುಣ ಮತ್ತು ಬಣ್ಣದಲ್ಲಿ ಸ್ವಲ್ಪ ವ್ಯತ್ಯಾಸ, ಸಿಹಿ, ಕಹಿ, ವಗರು, ತಿಳಿ, ಗಿಳಿ, ಗಡಸು, ಹಸಿರು. ಆದರೂ ಒಂದಕ್ಕೊಂದು ಕೂಡಿಕೊಂಡು ನಲಿಯುತ್ತ ಬಾಳುತ್ತಿವೆ. ಇವುಗಳಿಂದ ರೋಗಗಳಿಗೆ ಸೂಕ್ತ ಮದ್ದು ಸಹ ಉಂಟು. ಹೀಗೆ 'ನೆಲದೊಡಲ' ಎಂಬ ಕವನದಲ್ಲಿ ಪ್ರಕೃತಿಯಲ್ಲಿನ ವೈವಿಧ್ಯತೆ ಹಾಗೂ ಏಕತೆ ಅದರಿಂದ ರೋಗಗಳಿಗೆ ಚಿಕಿತ್ಸೆಯೂ ಉಂಟು ಎಂಬುದನ್ನು ಕವಿ ಹೇಳುತ್ತಾರೆ.

ಜುಳು ಜುಳು ಹರಿವ ನದಿ
(ಗಂಗೆಯೋ, ಕೃಷ್ಣೆಯೋ, ಕಾವೇರಿಯೋ)

ಆದಿ ಅಂತ್ಯಗಳರದ ನನಗೂ ಕಟ್ಟಿದರು ಪಟ
ಆಣೆಕಟ್ಟೆಗಳ ಚಟ್ಟ
ಕಲರವಗೈಯುತ್ತ ಮನದಂತೆ ಹರಿಯುತ್ತ
ಪವಡಿಸಿದ್ದೇ ಜಗದ ಬಂಧನ ಮೀರಿ
ನನಗೂ ತೊಡಸಿಹರು ನೋಡು ಭವದ ಬೇಡಿ [೧೧]

'ನದಿ ಮತ್ತು ಕವಿ' ಎಂಬ ಕವನದಲ್ಲಿ ಕವಿ ತನಗೆ ಸ್ಫೂರ್ತಿಯಾಗಿರುವ ನದಿಗೆ ಪ್ರಶ್ನೆ ಮಾಡುತ್ತಾನೆ. 'ಹೀಗೇಕೆ ಸೊರಗಿರುವೆ ಒಳಗೊಳಗೆ ಕೊರಗುತ್ತನಿನಗೂ ಬಂತೆ ನರನಂತೆ ವೃದ್ಧಾಪ್ಯ' ಎಂದಾಗ ನದಿಯು – "ಕಲರವದಿ ನನ್ನ ಮನದಂತೆ ಹರಿಯುತ್ತಿದ್ದ ನನಗೆ ಬಂಧನವನ್ನು (ಅಣೆಕಟ್ಟು) ಹಾಕಿರುವರು, ಜನ ತಮಗೆ ಬೇಕೆಂದಾಗ ಹರಿಯಲು ಬಿಡುವರು ಹಾಗೂ ಕಟ್ಟಿ ಹಾಕುವರು, ಮತ್ತು ನನಗಾಗಿ

ಜಗಳ, ತಂಟೆ-ತಕರಾರು ಮಾಡುತ್ತಿರುವರು ಎನ್ನುತ್ತ ನದಿಯು ಮತ್ತೆ ಮೌನ ವಹಿಸುತ್ತದೆ". ಹೀಗೆ ಕವನದಲ್ಲಿ, ಮಾನವ ತನ್ನ ಸ್ವಾರ್ಥಕ್ಕಾಗಿ ಪ್ರಕೃತಿಗೆ ನೀಡುತ್ತಿರುವ ತೊಂದರೆಯನ್ನು ಕವಿಯು ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಮನುಷ್ಯನಲ್ಲಿ ಮಾತು ಉಂಟು
ಮಾತಿನಂತೆ ಇಲ್ಲ ಮನ
ಲಿಂಗ ವರ್ಣ ಜಾತಿ ಧರ್ಮ
ಹಾಳು ಕೊಂಪೆ ಇವನ ಮನ

ಜಾತಿ – ಗೀತಿ, ಲಿಂಗ – ಧರ್ಮ
ಮೀರಿ ಬೆಳೆದ ಗಿಡಮರ
ಅವನು ಅವಳು ಅದು ಇದು
ಎಣಿಸುತಿಲ್ಲ ಒಂದು ದಿನ [೧೨]

ಭೂಮಿ ಮೇಲಿರುವ ಜೀವಿಗಳಲ್ಲಿ ಮನುಷ್ಯನಿಗೆ ಮಾತು ಅಥವಾ ಭಾಷೆ ಎಂಬ ಅತ್ಯಮೂಲ್ಯ ಸಾಧನವುಂಟು. ಆದರೆ ಅವರ ಮಾತಿನಂತೆ ಇಲ್ಲ ಅವರ ಮನಸ್ಸು. ಜಾತಿ ಧರ್ಮ, ಲಿಂಗ ವರ್ಣ ಎಂಬ ಭೇದ-ಭಾವಗಳಿಂದ ಇವರ ಮನಸ್ಸು ತುಂಬಿ ಹೋಗಿದೆ. ಆದರೆ ಮನುಷ್ಯನಿಗಿಂತ ಭಿನ್ನ, ಶ್ರೇಷ್ಟವಾದ ಗಿಡ-ಮರಗಳು ಯಾವುದೇ ಜಾತಿ-ಧರ್ಮ ಎನ್ನದೇ, ಅವರು ಇವರು ಎನ್ನದೇ ನೀಡುತ್ತಿವೆ ಎಲ್ಲರಿಗೂ ಫಲ.

ಎಲೇ ಹೂಗಳೇ
ನಿಮಗೆ
ಎಷ್ಟೊಂದು ಬಣ್ಣಗಳು
ಮೌನದಲ್ಲಿ ಚಿಗುರುತಿಹ
ನಿಮ್ಮೊಡಲ ಹೊಕ್ಕಳಿಗೆ
ಎಷ್ಟೊಂದು ಎಸಳುಗಳು [೧೩]

[illegible]

[illegible]

[illegible]

'ಐಸಿರಿ' ಎಂಬ ಕವನದಲ್ಲಿ ಕವಿಯು ಹೂಗಳ ಸೌಂದರ್ಯ ಐಸಿರಿಯನ್ನು ವರ್ಣಿಸುತ್ತ, ಹೂಗಳಿಗೆ ಎಷ್ಟೊಂದು ಬಣ್ಣಗಳು, ಎಂತಹ ಸುಂದರ ನಗು, ಮುಳ್ಳು, ಕಲ್ಲುಗಳ ಮಧ್ಯೆಯೂ, ಬಿಸಿಲು-ಮಳೆ ನುಂಗಿಯೂ ಯಾರು ಮುಟ್ಟಿದರೂ ಹಾಗೂ ಯಾರು ಕಿತ್ತೊಯ್ದರು ನಕ್ಕು ನಲಿಯುತಿಹವು.

ತುಂತುರು ಹನಿಯಾಗಿ
ಗಡಸಾಗಿ ಇಲ್ಲಾ ದಡಸಾಗಿ
ಸುರಿವ ಈ ಮಳೆ
ಕೊಚ್ಚಿ ಒಯ್ಯುತ್ತದೆ ಭೂಮಿಯ ಮೇಲಿನ
ಎಲ್ಲಾ ಕೆಸರು ಕೊಳೆ [೧೪]

'ಸುಂದರವಾದ ಈ ಮಳೆ ಭುವಿಯ ಮೇಲೆ ಸುರಿದು. ಭುವಿಗೆ ಸುಂದರ ಕಳೆಯನ್ನು ತರುವುದು. ಗಡಸಾಗಿ, ದಡಸಾಗಿ ಸುರಿಯುವ ಈ ಮಳೆ ಭುವಿಯ ಮೇಲೆ ಇರುವ ಎಲ್ಲ ಕೆಸರು, ಕೊಳೆಯನ್ನು ಕೊಚ್ಚಿಕೊಂಡು ಹೋಗುವುದು'- ಎಂದು ಕವನದಲ್ಲಿ ಹಾಡಿದ್ದಾರೆ.

'ಧಾರವಾಡದ ಮುಂಗಾರು ಮಳೆ' ಎಂಬ ಕವನದಲ್ಲಿ ಧಾರವಾಡದಲ್ಲಿ ಮುಂಗಾರು ಮಳೆ ಯಾವಾಗ ಬೇಕೆಂದಾಗ, ಯಾವ ಸಮಯ ಎನ್ನದೇ, ಗೊತ್ತು-ಗುರಿ ಇಲ್ಲದೇ ಸುರಿಯುವ ಮಳೆಯ ವರ್ಣನೆಯನ್ನು ಕವಿ ಮಾಡಿದ್ದಾರೆ.

ಗೊತ್ತುಗುರಿ ಇರದೇ ಮಳೆ ಗೀಳೆ ಎನ್ನದೇ
ಖಾಸಾ ನೆಂಟರ ತುಂಟ ನಗೆ ಚಿಮ್ಮಿಸಿ
ಬೇಕಾದಾಗ ಧುತ್ತನೆ ಬರುವ ಈ
ಧಾರವಾಡದ ಮುಂಗಾರು ಮಳೆ
ಮನೆ ಮಂದಿ-ಗಿಡಗಂಟೆಗೆಲ್ಲ
ತರುವುದು ಹಸಿಮನೆಯ ಕಳೆ [೧೫]

ಪ್ರಕೃತಿಯನ್ನು ಆರಾಧಿಸುತ್ತಾ ಬಂದಿರುವುದು ನಮ್ಮ ದೇಶ, ನಾಡಿನ ಪರಂಪರೆ. ನಮ್ಮ ಕನ್ನಡ ನಾಡಿನ ಕವಿಗಳಲ್ಲಿ ಪ್ರಕೃತಿಯನ್ನು ಕುರಿತು ಬರೆಯದ ಕವಿಗಳೇ ಇಲ್ಲ ಎನ್ನಬಹುದು. ಅನೇಕರು ಪ್ರಕೃತಿ ಕುರಿತು ತಮ್ಮ ಪ್ರೀತಿಯನ್ನು ವ್ಯಕ್ತಪಡಿಸಿದ್ದಾರೆ. ಅವರಲ್ಲಿ ಒಬ್ಬರಾದ ಸತ್ಯಾನಂದ ಪಾತ್ರೋಟರು ಪ್ರಕೃತಿ ಕುರಿತು

[illegible]

ತಮ್ಮ ಪ್ರೀತಿ, ಕಾಳಜಿಯನ್ನು ವ್ಯಕ್ತಪಡಿಸುತ್ತ ; ಅದರ ಸೌಂದರ್ಯ, ಮಹತ್ವ ಹಾಗೂ ಪ್ರಕೃತಿ ರಕ್ಷಣೆಯ ಮಹತ್ವವನ್ನು ಕುರಿತು ತಮ್ಮ ಸುಂದರ ಕವನಗಳಲ್ಲಿ ಚಿತ್ರಿಸಿದ್ದಾರೆ.

೩.೨ ಕನಸಿನೊಳು ಒಂದಾದ ಪ್ರೀತಿ :

ಕನಸು, ಕನಸು ಕಾಣದೇ ಇರುವವರೇ ಯಾರಿಲ್ಲ, ಪ್ರತಿಯೊಬ್ಬರು, ಪ್ರತಿನಿತ್ಯ ಕನಸು ಕಾಣುತ್ತಾರೆ. ಕನಸು ಸಾಮಾನ್ಯವಾಗಿ ಭವಿಷ್ಯದ ಕುರಿತಾಗಿ ಇರುತ್ತದೆ ಹಾಗೂ ಇಂದಿನ ಸ್ಥಿತಿಗತಿಯ ಸುಧಾರಣೆಯ ಕುರಿತಾಗಿರುತ್ತದೆ. ಸಾಮಾನ್ಯವಾಗಿ ಎಲ್ಲರೂ ತಮ್ಮ ಭವಿಷ್ಯದ ಕುರಿತು ಚಿಂತಿತರಾಗಿದ್ದು. ಅನೇಕ ಕನಸುಗಳನ್ನು ಕಟ್ಟಿಕೊಂಡಿರುತ್ತಾರೆ. ಹಾಗೂ ತಮ್ಮ ಸುತ್ತಮುತ್ತಲಿನ ಪರಿಸರದ ಮತ್ತು ಪ್ರೀತಿ ಪಾತ್ರರಾದವರ ಕುರಿತು ಅನೇಕ ಕನಸುಗಳನ್ನು ಕಾಣುತ್ತಿರುತ್ತಾರೆ. ಕವಿಗಳೂ ಕನಸು ಕಾಣುತ್ತಾರೆ. ಕವಿಯ ಕವನಕ್ಕೆ ಕನಸುಗಳೂ ಸ್ಫೂರ್ತಿಯಾಗುತ್ತವೆ, ಅನೇಕ ಕವನಗಳು ಕವಿಗಳ ಕನಸುಗಳನ್ನು ವ್ಯಕ್ತಪಡಿಸುತ್ತವೆ. ಕವಿ ಸತ್ಯಾನಂದ ಪಾತ್ರೋಟರು ರಚಿಸಿದ ಪ್ರೀತಿ ಕವನಗಳಲ್ಲಿ ಪ್ರೀತಿಯು ಕನಸಿನೊಳು ಒಂದಾದ ಬಗೆಯನ್ನು ಕಾಣಬಹುದು.

ಯಾರಿಗಿಲ್ಲ ಹೇಳು
ಕನಸು ಕಾಣುವ ಕಟ್ಟುವ ಚಪಲ
ದೇವ ದಾನವರಿಗೂ ಬಿಟ್ಟಿಲ್ಲೀ ಹಂಬಲ
– – – – – – – – – – –
ನನ್ನ ನಿನ್ನ ಬಿಡು
ಕನಸುಗಳಿರದೇ
ಇಲ್ಲಿ ತಿರುಕನು ಬದುಕಲಾರ
ಹೊಟ್ಟೆಗೆ ಕೂಳು ತುರುಕಲಾರ [೧೩]

ವ್ಯರ್ಥವಾಗಿ ಹೋಗುವ ಈ ಕನಸುಗಳನ್ನು ಕಾಣದಿರು, ಕಟ್ಟದಿರು ಎನ್ನುವ ಗೆಳತಿಯ ಮಾತಿಗೆ, ಕವಿಯು 'ಕನಸಿನ ಪ್ರಸಂಗ' ಎಂಬ ಕವನದಲ್ಲಿ ಕನಸು ಕಾಣದಿರುವವರಾರಿಲ್ಲ. ಗಡಿ, ಸೀಮೆ, ಜಾತಿ, ಮತ, ವರ್ಣ, ಲಿಂಗ, ಭೇದ ಎನ್ನದೇ ಮನಸ್ಸಿದ್ದಲ್ಲಿ ಕನಸು ಸೊಗಸಾಗಿಹುದು ಎಂದಿದ್ದಾರೆ.

[illegible]

[illegible]

[illegible]

[illegible]

ಬರೀ ಚೆಲುವಿದ್ದರೆ ಮುಗಿಯಲಿಲ್ಲವೇ ಗೆಳತಿ
ಆ ಚೆಲುವಿಗೆ ಅರ್ಥ ಬರಲು
ಬೇಕು ಸುಂದರ ಮನಸು
ಹೂಳಬಾರದು ಅದು ಅವರಿವರ ಕನಸು [೧೭]

'ಬರೀ ಚಲುವಿದ್ದರೆ, ಮುಗಿಯಲಿಲ್ಲ' ಎಂಬ ಕವನದಲ್ಲಿ ಕವಿಯು ಗೆಳತಿಯನ್ನು ಕುರಿತು, ಇರುವ ಚೆಲುವಿಗೆ ಅರ್ಥ ಬರಲು ಸುಂದರವಾದ ಮನಸು ಬೇಕು. ಆ ಮನಸಿಗೆ ಬೇಕು ಚೆಲುವಾದ ಕನಸುಗಳು ಮತ್ತು ಆ ಮನಸು ಇನ್ನೊಬ್ಬರ ಕನಸುಗಳನ್ನು ಮಣ್ಣು ಮಾಡದಿರಲಿ ಎಂಬ ಮನದ ಮಾತನ್ನು ವ್ಯಕ್ತಪಡಿಸಿದ್ದಾರೆ.

ನನ್ನ ಮನಸ್ಸಿನ ತುಂಬ
ಕಣ್ಣ ಕನಸಿನ ತುಂಬ
ನೀನೇ ತುಂಬಿರುವಾಗ
ಹೇಗೆ ಮರೆಯಲಿ ಗೆಳತಿ ನಿನ್ನ ನಾನು
ಇದೆಂಥ ಮರುಳೆಂದು – ನಕ್ಕು ಹೋಗದಿರು ನೀನು

ನನ್ನ ಎದೆಯೊಳಕ್ಕೆ ಇಳಿದಿಳಿದು
ನೀ ಬಿಟ್ಟ ಬೇರಿಗ ಮರಹೊತ್ತಿದೆ
ಸೋತ ಮೈಮನಗಳಿಗೆ ನೆರಳಾಗಿದೆ
ಇದಕ್ಕಿಂತ ಹೆಚ್ಚೇನು ಬೇಕು ಸಾಕ್ಷಿ!
ನನ್ನ ಕಾವಾಕ್ಷಿ ! [೧೮]

ಕವಿಯ ಮನಸ್ಸಿನ ತುಂಬ, ಕಣ್ಣ ಕನಸಿನ ತುಂಬ ತುಂಬಿರುವ ಗೆಳತಿಯನ್ನು ಹೇಗೆ ಮರೆಯಲಿ ಎನ್ನುವದರೊಂದಿಗೆ ಅದಕ್ಕೆ ಸಾಕ್ಷಿಯನ್ನು ನೀಡುತ್ತ, ಗೆಳತಿ, ನೀನು ನನ್ನೆದೆಯೊಳಗೆ ಬಿಟ್ಟ ಪ್ರೀತಿಯ ಬೇರು ಈಗ ಮರವಾಗಿ, ನನ್ನ ಸೋತ ಮೈಮನಗಳಿಗೆ ನೆರಳಾಗಿದೆ ಎಂದು ಮಿಡಿಯುತ್ತಾರೆ.

'ನನ್ನ ಮರೆತು ಬಿಡು
ಎಂದರೆ
ಹೇಗೆ ಮರೆಯಲಿ ಹೇಳು

ನಾಳೆ ನಾಡಿದ್ದರ ಕನಸುಗಳನು
ಸುಂದರ ಮನಸುಗಳನು
ಮರ
ಮರೆತರೆ ಹೇಗೆ
ಬೇರನ್ನು, ಚಾಚಿದ ಚಿಗುರನ್ನು [೧೯]

'ಹೇಗೆ ಮರೆಯಲಿ ಹೇಳು' ಎಂಬ ಕವನದಲ್ಲಿ ಕವಿಯು 'ನನ್ನ ಮರೆತು ಬಿಡು' ಎನ್ನುವ ಗೆಳತಿಯ ಕುರಿತು - ಹೇಗೆ ಮರೆಯಲಿ ಹೇಳು ನಿನ್ನ ನಾನು, ಮರೆತು ಮತ್ತೇ ಹೇಗೆ ಬರೆಯಲಿ ನಿನ್ನೆ-ಇಂದು-ನಾಳೆಗಳ ಕುರಿತು ಕವನಗಳನ್ನು? ಹೇಗೆ ಮರೆಯಲಿ ಹೇಳು ನಾಳೆ ನಾಡಿದ್ದರ ಕನಸುಗಳನ್ನು ಹಾಗೂ ಸುಂದರ ಮನಸ್ಸುಗಳನ್ನು? ಎಂದು ಪ್ರಶ್ನೆ ಮಾಡಿದ್ದಾರೆ.

'ಉಳಿದ ಚೆಲುವೆಯರಂತೆ
ನೀನಲ್ಲ ಚೆಲುವೆ

ಮನಸ್ಸು, ಮಧು ಮಧುರ ಸಂಗಮ
ಕನಸು, ಮುಂಜಾವಿನ ಸೂರ್ಯೋದಯ
ಮಾತು, ಅರಳು ಹುರಿದಂತೆ ಪಟ ಪಟ
ಹೀಗಿದ್ದರೂ ನೀನು
ಅರ್ಥವೇ ಆಗುತ್ತಿಲ್ಲ ಒಮ್ಮೊಮ್ಮೆ ನನಗೆ [೨೦]

ಕವಿಯು ಚೆಲುವೆಯನ್ನು ಕುರಿತು ಉಳಿದ ಚೆಲುವೆಯರಂತೆ ನೀನಲ್ಲ, ಎಂದು ಚೆಲುವೆಯನ್ನು ವರ್ಣಿಸುತ್ತ 'ಚೆಲುವೆ ಮತ್ತು ಕವಿ' ಎಂಬ ಕವನದಲ್ಲಿ ಮನಸ್ಸಿನ ಕನಸಿನಿಂದ ಹಾಡಿದ್ದಾರೆ.

ಬರೀ ಚೆಲುವಿನಿಂದ
ಬರುವುದೇನು ಹೇಳು ಓ ಸಖಿ
- - - - - - - - - -
ಮಣ್ಣಿನೊಡಲ ಕಣ್ಣಿನಲ್ಲೇ
ಮೊಳಕೆಯೊಡೆವ ಎಲ್ಲ ಬೀಜ

ಮಳೆಯ ಹೊದ್ದು ಚಳಿಯ ತಿಂದು
ಅವರಿವರ ಕನಸುಗಳಿಗೆ
ಸೂಸುತಿಲ್ಲವೇ ಚೆಲುವು [೨೧]

ಮಣ್ಣಿನೊಡಲಲ್ಲಿ ಮೊಳಕೆಯೊಡೆಯುವ ಬೀಜಗಳು ಮಳೆ-ಚಳಿಯಲ್ಲಿ ಇತರರ ಕನಸುಗಳನ್ನು ನನಸುಗೊಳ್ಳುವ ಹಾಗೆ ನಿನ್ನಲ್ಲಿರುವ ಕೇವಲ ಚೆಲುವಿನಿಂದ ಏನು ಫಲ ಬೇಕು ಅದಕ್ಕೊಂದಿಷ್ಟು ಪ್ರೀತಿ ಎಂದು ಕವಿ ಇಲ್ಲಿ ಹಾಡಿದ್ದಾರೆ.

ಕವಿಯು ನಾನು ಮಾತನಾಡಿಸಿದರೂ ನೀನು ಮಾತನಾಡುತ್ತಿಲ್ಲ, ಎದುರಿಗೆ ಬಂದರೂ ಕಣ್ಣೆತ್ತಿ ನೋಡುತ್ತಿಲ್ಲ, ನಿನ್ನ ನಗು ಮಾತು ಕೇಳದೆ ಒಳಗೊಳಗೆ ಸಾಯುತ್ತಿದ್ದೇನೆ, ನೆನಪಿಸಿಕೊ ಒಮ್ಮೆ ಆ ದಿನಗಳನ್ನು ಎನ್ನುತ್ತ ಹೀಗೆ ಹಾಡಿದ್ದಾರೆ.

ನಗು ಹೊತ್ತ ನಿನ್ನ ಆಗಮನ
ನನಗೂ - ನನ್ನ ಗುಡಿಸಲಿಗೂ
ದಿನವೂ ಮೂಡಿಸುತ್ತಿತ್ತು ವಸಂತನ ದರ್ಶನ
ನಿನ್ನ ಬರುವಿಕೆ, ಚಿನಕುರುಳಿ ಮಾತು
ಅದೆಷ್ಟು ಹಿತಕರ ಸಂತಸಕರವಾಗಿತ್ತು
ಕನಸಿನೊಳಗೊಂದು ಕನಸು [೨೨]

'ಅಂತರ್ಜಲ' ಎಂಬ ಕವನದಲ್ಲಿ ಕವಿಯು ಪ್ರೀತಿಯನ್ನು ಯಾವ ಸಾಧನೆಗಳಿಂದಲೂ, ಯಾರಿಂದಲೂ, ಯಾವ ಲೋಕಗಳಿಂದಲೂ ಅಳೆಯುಲು ಸಾಧ್ಯವಿಲ್ಲ

ಸೃಷ್ಟಿ ಪ್ರತಿಸೃಷ್ಟಿಗೂ
ಗೊತ್ತಿರಲಿಕ್ಕಿಲ್ಲ ಇದರ ಆಳ, ಅಂತರಾಳ
ನೀರಾಳ
ಕಣ್ಣಿದ್ದಲ್ಲಿ ಕನಸುವುದು
ಕನಸ್ಸಿದ್ದಲ್ಲಿ ಲಾಸ್ಯವಾಡುವುದು
ಇದರ ಜಾಯಮಾನ ----- ಎಂದಿದ್ದಾರೆ [೨೩]

ಮನೆ ಅಂದರೆ
ಅಲ್ಲಿರಬೇಕು, ಗಡಿ, ಸೀಮೆ ಮೀರಿದ ಮನಸ್ಸುಗಳು

ನಾಳೆಗಾಗಿ ಚಿಂತಿಸುವ ಸುಂದರ ಕನಸ್ಸುಗಳು
ಇಂಥದ್ದೊಂದು ಮನೆ
ನನ್ನ ಗೆಳೆಯ ನನಗೆ ಕಟ್ಟಿದ್ದಾನೆ
ನನ್ನ ಕನಸುಗಳ ಕೊನರಿ ಹೂವಾಗಲು
ತನ್ನ ಕನಸುಗಳನ್ನೆಲ್ಲ ಬೆರೆಸಿದ್ದಾನೆ [೨೪]

ಪ್ರಸ್ತುತ ಕವನದಲ್ಲಿ ಗೆಳತಿ ತನ್ನ ಗೆಳೆಯ ತನಗೆ ಪ್ರೀತಿಯಿಂದ ಕಟ್ಟಿಕೊಟ್ಟ ಮನೆಯನ್ನು, ತನ್ನ ಸಖಿಗೆ ಬಂದು ನೋಡಲು ಕರೆಯುತ್ತ ಈ ಮಾತನ್ನು ಹೇಳುತ್ತಾಳೆ.

"ಕನಸಿನೊಳಗೊಂದು ಕನಸು"
ಅಲ್ಲೊಂದು ಏಳು ಸುತ್ತಿನ ಕೋಟೆ
ಅದರೊಳಗೆ ನಡು ಸಣ್ಣ, ಮೈಸಣ್ಣ ಬಂಗಾರ ಬಣ್ಣದ ಕೂದಲಿನ
ರಾಜಕುವರಿಯಲ್ಲಿ ತೂರಿ ಬರಬೇಕು
– – – – – – – – – – – – –
ಈ ಕನಸು ––––––– ನನಸಾದರೆ?
ಬಂತದೋ ನನ್ನ ಸಾಮ್ರಾಜ್ಯ [೨೫]

ಕವಿಯು ತನ್ನ ಕನಸಿನ ಕುರಿತು ಹೇಳುತ್ತ. ಈ ಕನಸು ನನಸಾದರೆ, ಅದೇ ನನ್ನ ಸಾಮ್ರಾಜ್ಯ. ಅದು ಸುಖ ಸಮೃದ್ಧಿಯ ಹಾಗೂ ದ್ವೇಷ, ಅಸೂಯೆ, ಭೇದಗಳಿರದ ಸಾಮ್ರಾಜ್ಯವಾಗಿರುತ್ತದೆ, ಅಲ್ಲಿ ಆಳುವ, ಆಳಿಸಿಕೊಳ್ಳುವವರಿಲ್ಲ, ಆಳು–ಪಾಳುಗಳಿಲ್ಲ, ಹುಲಿ–ಸಿಂಹಗಳ ಬಾಯಲ್ಲಿ ಮೊಲ–ಜಿಂಕೆಗಳು ಬಾಯಿಟ್ಟು ಬದುಕುತ್ತವೆ. ಇಂತಹ ಸುಂದರ ಸೌಹಾರ್ದ ವಾತಾವರಣ ಅದಾಗಿರುತ್ತದೆ.

ಆಗಸದೆತ್ತರಕೆ ಎಳೆದೊಯ್ಯದಿರು ಪ್ರಿಯೆ
ಮುಗಿಲು ಮಲ್ಲಿಗೆಯಾಗುವ ಆಸೆ ನನಗಿಲ್ಲ
ಕನಸಿನ ಲೋಕದಲ್ಲಿ ಹೊತ್ತೊಯ್ಯದಿರು ಪ್ರಿಯೆ
ಕನಸು ಕಣುವ ಇಚ್ಛೆ ನನಗಿಲ್ಲ [೨೬]

ಆಗಸದೆತ್ತರಕೆ, ಕನಸಿನ ಲೋಕದಲ್ಲಿ ಕರೆದೊಯ್ಯಬೇಡ ಎಂದು ಕವಿಯು ತನ್ನ ಪ್ರಿಯೆಯಲ್ಲಿ ಮನವಿಯನ್ನು ಇಡುತ್ತ, ಮುಗಿಲು ಮಲ್ಲಿಗೆಯಾಗುವ, ಕನಸು

ಕಾಣುವ ಇಚ್ಛೆ ನನಗಿಲ್ಲ. ಭ್ರಮೆಯ ಲೋಕದಲ್ಲಿ ತೇಲುವುದು ಬೇಡ ಮನಸ್ಸಿದ್ದರೆ ನನ್ನೊಂದಿಗೆ ಬಾ ಬೇಡವಾದರೆ ಬಿಡು. ಎಂಬ ಕರೆಯನ್ನಿಡುತ್ತಾರೆ. ಪ್ರಸ್ತುತ 'ಒತ್ತಾಯ ನಿನಗಿಲ್ಲ' ಕವನದಲ್ಲಿ ಕವಿ ಕನಸು ಕಾಣುವ ಇಚ್ಛೆ ನನಗಿಲ್ಲ ಎಂದಿದ್ದಾರೆ, ಅಂದರೆ ಕೈಗೆಟುಕದ್ದನ್ನು ಕನಸು ಕಾಣುತ್ತ, ಭ್ರಮೆಯ ಲೋಕದಲ್ಲಿ ತೇಲುವುದನ್ನು ಅವರು ನಿರಾಕರಿಸುತ್ತಾ, ಶ್ರಮ ದೇವಿಯಾಗಿರಲು ಇಚ್ಛೆಯನ್ನು ವ್ಯಕ್ತಪಡಿಸುತ್ತ, ಮನಸ್ಸಿದ್ದರೆ ಇಂತಹ ನನ್ನ ಜೊತೆ ಬಾ ಬೇಡವಾದರೆ ಬಿಡು ಎಂದು ಪ್ರಿಯೆಯನ್ನು ಕುರಿತು ಹೇಳುತ್ತಾರೆ.

ನಿನ್ನೆಗಳ ನೆನಪಿಲ್ಲ ನಾಳೆಗಳ ಕನಸಿಲ್ಲ
ಬರೀ ಸೂರ್ಯನೇ ಇವನ ಮನಸಿನಲ್ಲಿ
ಹಸಿದ ಕರಡಿಯ ಕುಣಿತ ಇವನೆದೆಯ ಗೂಡಿನಲಿ

ಎಷ್ಟೋ ವರ್ಷಗಳಾಯಿತು
ಅವನಿಲ್ಲಿ
ಈ ರಸ್ತೆ ಬದಿಯಲ್ಲಿ
ಕುಳಿತೇ ಇದ್ದಾನೆ [೨೭]

ನಿನ್ನೆಗಳ ನೆನಪಿಲ್ಲದ, ನಾಳೆಗಳ ಕನಸಿಲ್ಲದ ವ್ಯಕ್ತಿ ರಸ್ತೆ ಬದಿಯಲ್ಲಿ ಕುಳಿತು ಯಾರೇ ಬರಲಿ, ಅವರ ಚಪ್ಪಲಿ, ಬೂಟುಗಳನ್ನು ಕೈಗೆತ್ತಿಕೊಂಡು ಪಾಲಿಶ್ ಮಾಡುತ್ತ ಎಷ್ಟೋ ವರ್ಷಗಳಿಂದ ಈ ರಸ್ತೆ ಬದಿಯಲ್ಲಿಯೇ ಕುಳಿತ್ತಿದ್ದಾನೆ. ಅವನ ಬದುಕು, ಶ್ರಮ, ಬೆವರು ಅದರಿಂದ ಅವನು ಪಡುವ ಸಂತೋಷ, ಸಮಾಧಾನ ಶ್ರೇಷ್ಟವಾದುದು.

ಮಂಡೇಲಾ ಮಂಡೇಲಾ ಮಂಡೇಲಾ
ಧ್ವನಿ ಕೇಳಿ ನಡಗಿತದೋ ಭೂ ಮಂಡಲಾ
– – – – – – – – – – – –
ಕನಸುಗಳ ಕೊಂದವರ
ಮನಸುಗಳ ಬೆಸೆದನು
ಕಪ್ಪು ಬಿಳಿ ಎಲ್ಲಾ ಸುಳ್ಳು
ಬೆಳಕು ನೀರಿಗಂದನು. [೨೮]

ಮಂಡೇಲಾ ವರ್ಣಭೇದ, ಜಾತಿ ಭೇದ, ಶೋಷಣೆ ತಾರತಮ್ಯದ ವಿರುದ್ಧ ಧ್ವನಿ ಎತ್ತಿದರು. ಕನಸುಗಳ ಕೊಂದವರ ಮನಸುಗಳ ಬೆಸೆದನು. ನಿಸರ್ಗದಲ್ಲಿ ಗಾಳಿ, ಬೆಳಕು, ನೀರಿಗೆ ಕಪ್ಪು ಬಿಳಿ ಎಲ್ಲ, ಎಲ್ಲರೂ ಒಂದೇ. ಮಂಡೇಲಾನ ಪ್ರೀತಿಯ ಮಾತುಗಳು, ಹೋರಾಟದ ಬೀಜಗಳು ಕನಸುಗಳ ಬಿತ್ತಿದವು, ಸಮಾಜದಲ್ಲಿರುವ ಕೊಳೆಯನ್ನು ಕಿತ್ತಿದವು.

ಮನಸ್ಸು ಇದೆ ಎಂದು
ಕಂಡ ಕಂಡ ಕನಸು ಕಂಡವರೂ ಅಲ್ಲ
ಹಾಗೆಂದು
ಅವರಿವರ ಕನಸುಗಳ ಹಿಚುಕಿ ಬೆಳೆದವರೂ ಅಲ್ಲ [೨೯]

'ಬರಗೂರರನ್ನು ಕುರಿತು' ಎಂಬ ಕವನದಲ್ಲಿ ಕವಿಯು ಬರಗೂರರು ಸಹಜ, ಸರಳ ನಡೆ, ನುಡಿ ಬರಹ ಹಾಗೂ ಸೂಜಿಗಲ್ಲಿನ ತರಹ ಕುತೂಹಲದ ವ್ಯಕ್ತಿತ್ವ. ಅವರು ಮನಸ್ಸು ಇದೆ ಎಂದು ಕಂಡ-ಕಂಡ ಕನಸುಕಂಡವರಲ್ಲ ಹಾಗೆಂದು ಇತರರ ಕನಸುಗಳನ್ನು ತುಳಿದು ಬೆಳೆದವರಲ್ಲ. ಕಾರಣ ಅವರು ಬೆಳೆಯುವುದು ಮತ್ತು ಬೆಳೆಸುವುದು ಮನುಷ್ಯರಿಗೆ ಇರಬೇಕಾದ ಗುಣ ಎಂದು ನಂಬಿರುವವರು.

ಕಾಡಲ್ಲೋ ಇದು ಬರೀ ಕಲ್ಲುಗಳ ಕಾಡಲ್ಲ
- - - - - - - - - - - - - - -
ಕಪ್ಪು ಕೆಂಪುಗಳಲ್ಲಿ ಒಪ್ಪು ಓರಣಗಳಲ್ಲ
ಹಿಗ್ಗಿನಲಿ ಬೆಳೆಯುತ್ತ ತ್ಯಾಗದಲಿ ನಿಂತಿವೆ.
ಬರುವ ಜನಗಳ ಕರೆದು ತಂಗಾಳಿ ಚಿಮುಕಿಸಿ----
ಕನಸುಗಳ ಮಾಲೆಯನು ತಲೆ ತುಂಬಿ ಹೆಣದಿವೆ [೩೦]

'ಕಾಡಲ್ಲೋ ಇದು' ಎಂಬ ಕವನದಲ್ಲಿ ಕವಿಯು ಕಾಡಿನ ಸೊಬಗನ್ನು ವರ್ಣಿಸುತ್ತ ಕಾಡಿದ್ದರೆ ನಾಡು, ನಾಡಿದ್ದರೆ ಮನುಜ ಎಂಬುದನ್ನು ಹೇಳುತ್ತ, ಕಾಡು ನಮಗೆ ತಂಗಾಳಿಯನ್ನು ಸೂಸಿ ನಮ್ಮಲ್ಲಿ ಅನೇಕ ಕನಸುಗಳನ್ನು ಬಿತ್ತುತ್ತದೆ ಎಂದಿದ್ದಾರೆ.

ನನ್ನ ಕನಸಿನ ಹುಡುಗಿ
ಗಾನ ಗಂಧವತಿ
ನುಡಿಸಿದ್ದಳು ಎದೆ ಮೀಟಿ ಮಂದಾರ
ಮಧುರ ಶೃತಿ
ಈಗವಳು ಬರೀ ಸ್ಮೃತಿ
ಎಲ್ಲಿ ಹೋದಳೋ ಏನೋ ಕೆಡಿಸಿ ಧೃತಿ....... [೩೧]

ಕವಿ ಕಾಣೆಯಾಗಿ ಹೋದ ಕನಸಿನ ಹುಡುಗಿಯನ್ನು ನೆನೆಯುತ್ತ, ಅವಳನ್ನು ವರ್ಣಿಸುತ್ತ, ಅವಳಿಲ್ಲದೆ ತನ್ನ ಮತ್ತು ತನ್ನ ಗುಡಿಸಲಿನ ಸ್ಥಿತಿಯನ್ನು ಚಿತ್ರಿಸುತ್ತಾರೆ. ತನ್ನೆದೆಯ ತೋಟದಲ್ಲಿ ಕನಸಿನ ಮಾಲೆಯ ಹೆಣೆದವಳು, ಸುಂದರವಾದ ನಗುವಿನವಳು, ಹೂವಿನಷ್ಟು ಮೃದುವಾದುದು ಅವಳ ನಿಲುವು. ಯಾರು ಹೊತ್ತೊಯ್ದರೋ? ಅವಳನ್ನು ಎಂದು ತನ್ನ ಮನಸ್ಸಿನ ನೋವನ್ನು ವ್ಯಕ್ತಪಡಿಸಿದ್ದಾರೆ.

"ಇಲ್ಲಿ ಕವಿ ತೀರ ವೈಯಕ್ತಿಕವಾದ ನೋವನ್ನು ಸಹೃದಯದಲ್ಲಿ ಆತ್ಮೀಯಗೊಳಿಸುತ್ತಲೇ ಅವರ ಭಾವ ಪ್ರಪಂಚದಲ್ಲಿ ಸಮಾಜಿಕ ಪ್ರಜ್ಞೆಯನ್ನು ತುಂಬುವ ಕ್ರಿಯೆಯಲ್ಲಿ ತೊಡಗುತ್ತಾನೆ. ಹೀಗೆ ವ್ಯಕ್ತಿ ಮತ್ತು ಸಮಷ್ಟಿ ಪ್ರಜ್ಞೆಯನ್ನು ಏಕಕಾಲಕ್ಕೆ ಕಾರ್ಯದಲ್ಲಿ ಸೆರೆ ಹಿಡಿಯುವ ಪ್ರಯತ್ನ ಈ ಕವಿಯದಾಗಿದೆ".[೩೨]

ಹಗಲು ರಾತ್ರಿಯ ಬೆರಸಿ
ಕೊರೆವ ಚಳಿಯನು ನುಂಗಿ
ಕಾರ್ಖಾನೆ ಕೆರೆಯಲ್ಲಿ
ಕನಸು ಕೊಂದವರ ಮಧ್ಯ-ನೀನು
ನೆನಪಾಗುವುದಿಲ್ಲ ಗೆಳತಿ [೩೩]

ಮಳೆಯ ರಭಸಕ್ಕೆ ತೋಯ್ದು ತಪ್ಪಡಿಯಾದ ಜೋಪಡಿಗಳ ಮಧ್ಯ, ಕಾರ್ಖಾನೆ ಕರೆಯಲ್ಲಿ ಕನಸು ಕೊಂದವರಮಧ್ಯ, ಜೀವ ತೇಯುತ್ತಿರುವ ಕಪ್ಪು ಜನ ಮಧ್ಯ. ಈ ಹೋರಾಟಗಳಲ್ಲಿ ಕನಸಿನ ಗೆಳತಿ ಕವಿಯನ್ನು ಸೆಳೆಯುತ್ತಿಲ್ಲ, ನೆನಪಾಗುತ್ತಿಲ್ಲ.

ಬೆಳದಿಂಗಳ ಬಾಲೆ

ಪುಟ್ಟ ಗುಡಿಸಲಿನಲ್ಲಿ
ಹುಟ್ಟಿದರೆಕ್ಷಣದಲ್ಲಿ
ಎಷ್ಟೊಂದು ಮಾತುಗಳು
ಎಷ್ಟೊಂದು ಕನಸುಗಳು
ಬೆಳೆಯುತ್ತ ಮಾಗಲು [೩೮]

ಕಥೆ, ಕಾವ್ಯಗಳಿಗೆ ಸ್ಫೂರ್ತಿಯಾದ ತನ್ನ ಬೆಳದಿಂಗಳ ಬಾಲೆಯನ್ನು ನೆನೆಯುತ್ತ ಕವಿಯು, ಅವಳ ಅಗಲಿಕೆಯ ನೋವಿನಲ್ಲಿ ಅವಳ ನಗೆ, ಮುತ್ತು, ಅವಳು ಬಿತ್ತಿದ ಕನಸುಗಳನ್ನು ನೆನೆಯುತ್ತ, ಈಗಲೂ ನನ್ನ ಬದುಕಿಗೆ ನೀನೇ ಬೆಳ್ಳಿ ಬೆಡಗು ಎಂದು ಹಾಡಿದ್ದಾರೆ.

ಗೊತ್ತಿಲ್ಲ ನಿಮಗೆ
ನನ್ನ ಅವಳ ಮಾತು
ನನ್ನ ಅವಳ ಕನಸು

ಅದಕ್ಕಾಗಿ
ಕುಳಿತ್ತಿದ್ದೇನೆ ನಾನು
ಬಂದೇ ಬರುವಳೆಂದು
ಜೀವ ತರುವಳೆಂದು [೩೯]

ಅವಳ ಬರುವಿಗಾಗಿ ಕಾಯುತ್ತ ಕವಿಯು ನದಿಯ ದಡದಲ್ಲಿ ಎಲ್ಲವನ್ನು ಮರೆತು ಕೇವಲ ಅವಳ ಮಾತು, ತನ್ನ ಮತ್ತು ಅವಳ ಕನಸುಗಳನ್ನು ನೆನೆಯುತ್ತ ಕುಳಿತೇ ಇದ್ದಾನೆ, ನದಿ ಹರಿಯುತ್ತಲೇ ಇದೆ, ಗಾಳಿ ಬೀಸುತ್ತಲೇ ಇದೆ. ಇಂದೇ ಬರುವೆನೆಂದ ಅವಳು ಇನ್ನು ಬಂದಿಲ್ಲ, ಬಂದೇ ಬರುವಳೆಂಬ ನಂಬಿಕೆಯಲ್ಲಿ, ಬಂದು ತನ್ನಲ್ಲಿ ಜೀವ ತುಂಬವಳೆಂಬ ನಂಬಿಕೆಯಲ್ಲಿ ಕುಳಿತಿರುವನು.

ಪ್ರೀತಿ ಎಂದರೆ
ಪ್ರೀತಿಸುವುದು, ಕಾಯಿಸುವುದು – ಆಮೇಲೆ
ಕನಸೆಂದು – ಭ್ರಮೆಯೆಂದು – ಮರೆಯುವುದು
ಎಂದು ತಿಳಿದಿರುವಿಯೇನೆ? [೩೨]

[illegible]

[illegible]

[illegible]

[illegible]

[illegible]

'ಪ್ರೀತಿ ಎಂದರೆ' ಎಂಬ ಕವನದಲ್ಲಿ ಕವಿ ಗೆಳತಿಯ ಮುಂದೆ ಅನೇಕ ಪ್ರಶ್ನೆಗಳನ್ನು ಇಡುತ್ತ, ಪ್ರೀತಿ ಎಂದರೆ ಏನು? ಎಂಬುದನ್ನು ತಿಳಿಸುತ್ತಾನೆ. ಪ್ರೀತಿ, ಪ್ರೀತಿಸಿದವರನ್ನು ಎಂದೂ ಮರೆಯುವುದಿಲ್ಲ, ಪ್ರೀತಿ ಎಂದರೆ ಬರೀ ಮಾತು, ನಗು ಇತ್ಯಾದಿಗಳಿಗೆ ಸೀಮಿತವಾದುದಲ್ಲ. ಪ್ರೀತಿಸಿ, ಕಾಮಿಸಿ ಕನಸು ಕಂಡು ನಂತರ ಭ್ರಮೆಯೆಂದು ಮರೆಯುವದಲ್ಲ. ಪ್ರೀತಿಯೆಂಬುದು ಕತ್ತಲೆಗೆ ಬೆಳಕಾಗಿಹುದು, ಅದು ಕಾಲಾತೀತವಾದುದು ಎಂದು ಪ್ರೀತಿಯನ್ನು ಅರ್ಥೈಸುತ್ತ, ನಾ ನಿನ್ನ, ನೀ ನನ್ನ ಮರೆಯುವುದು ಎಂದರೆ ಅದೆಂತಹ ಪ್ರೀತಿ ಹೇಳೇ ಅದೇನು ನೀರ ಮೇಲಿನ ಗುಳ್ಳೆಯೇ? ಎಂದು ಮತ್ತೇ ಕವಿ ಪ್ರಶ್ನಿಸುತ್ತಾರೇ. ಈ ಕವನದಲ್ಲಿ ಕವಿಯು ಪ್ರೀತಿ ಎಂಬುದು ಸಂಕುಚಿತವಾದುದಲ್ಲ, ಅದು ವೈಶಾಲ್ಯತೆಯನ್ನು ಹೊಂದಿದೆ. ಅದು ಸೀಮಾತೀತವಾದುದು ಹಾಗೂ ಕಾಲಾತೀತವಾದುದು ಎಂದಿದ್ದಾರೆ.

ಹೇಳೇ ಗೆಳತಿ
ನೀನೆಲ್ಲಿ ಇರುವಿ

ಪುಟ್ಟ ಗುಡಿಸಲಿನಲ್ಲೇ
ಚುಕ್ಕೆಗಳ ಪೋಣಿಸುವೆನು
ಕೆಟ್ಟ ಕನಸುಗಳ ಮೀಟಿ
ಹೂ ಮಳೆಯ ಸುರಿಸುವೆನು [೩೭]

ಗೆಳತಿಯಿಂದ ಅಗಲಿ, ಅವಳಿರದ ನಾಡಲ್ಲಿ, ಬದುಕಲ್ಲಿ ಹೇಗೆ ಇರಲಿ? ಅವಳನ್ನೆಲ್ಲಿ ಹುಡುಕಲಿ ಎಂದು ಕನವರಿಸುತ್ತಿದ್ದಾರೆ ಕವಿ. ಕೆಂಡಕಾರುವ ಮುಗಿಲು, ಕಿಚ್ಚಿ ನಂತಹ ಭೂಮಿ ಸುಡುತ್ತಿದ್ದರೂ ನಿನ್ನ ಪಡೆಯಲು ಕನಸುಗಳನ್ನು ಕಟ್ಟುವೆನು. ಆಕಾಶ ಕಳಚಿ ಮೈ ಮೇಲೆ ಬಿದ್ದರೂ, ಹರಿಯುವ ನದಿಗಳನ್ನು ಸಪ್ತ ಸಾಗರವ ದಾಟಿಯೂ ನಿನ್ನ ಬಳಿ ಸೇರುವೆ. ಹೇಳೆ ನಿನ್ನನ್ನೆಲ್ಲಿ ಹುಡುಕಲಿ, ನೀನೆಲ್ಲಿ ಇರುವಿ ಎಂದು ತಮ್ಮ ಆಗಾಧ ಪ್ರೀತಿ ತೋರುತ್ತಿದ್ದಾರೆ.

ನೋಡೆ ಜಾಣೆ
ಸದಾ ನಗುತಲೇ ಇರುವ
ಆ ಚುಕ್ಕೆಗಳನ್ನು

ಮೇಲಿದ್ದರೂ
ಕೆಳಗೆ ಚೆಲ್ಲುವವು ಬೆಳಕು [೩೮]

ಆಗಸದಲ್ಲಿ ರಾತ್ರಿಯಾಗುತ್ತಿದ್ದಂತೆ ನಕ್ಷತ್ರಗಳ ಸಂತೆ ಸೇರುವುದು. ಅಲ್ಲಲ್ಲಿ ಚೆಲುವೆಯು ಮಲ್ಲಿಗೆ ಮುಡಿದಂತೆ ಕಾಣುವುದು. ಪ್ರತಿದಿನವೂ ಅರಳುವವು ಪಕ್ಕ-ಪಕ್ಕ. ಎಣಿಸಲು ಲೆಕ್ಕ ಸಿಗದು, ಆಕಾರದಲ್ಲಿ ಸ್ವಲ್ಪ ವ್ಯತ್ಯಾಸವಿದ್ದರೂ ಅವುಗಳ ಸ್ನೇಹ ಸಂಬಂಧ ಮಾತ್ರ ಕಡಿದಿಲ್ಲ. ಸದಾ ನಗುತ್ತಿದ್ದು, ಮೇಲಿದ್ದರೂ ಕೆಳಗೆ ಬೆಳಕು ಚೆಲ್ಲುತ್ತಿರುವ ನಕ್ಷತ್ರಗಳನ್ನು ನೋಡಲು ಕವಿ ತನ್ನ ಗೆಳತಿಗೆ ಇಲ್ಲಿ ಸೂಚಿಸುತ್ತಾನೆ. ಹೀಗೆ ನಾವಿಬ್ಬರು ಬದುಕಿದರೆ ನಮ್ಮ ಕನಸುಗಳೆಲ್ಲ ಮಂದಾರ, ನಮ್ಮ ಬಾಳೆಲ್ಲ ಸಿಂಗಾರವಾಗುವುದು ಎಂದು ಬಯಸುತ್ತಾನೆ.

ಕನ್ನಡತಿ
ಬರಬಾರದಾಗಿತ್ತೇ ನಿನಗಿಂಥ ಹೀನ ಸ್ಥಿತಿ

ಕನ್ನಡತಿ
ಯಾರಿಗಿದೆ ಹೇಳು ನಿನ್ನ ಮೇಲೆ ಪ್ರೀತಿ
ನಿನ್ನ ನಾಡಿನಲಿ ನೀನೇ ಪರದೇಶಿ [೩೯]

ಕನ್ನಡತಿ ಎಂಬ ಕವನದಲ್ಲಿ ಕವಿಯು ಕನ್ನಡ ನಾಡಿನ ಇಂದಿನ ಸ್ಥಿತಿಯ ಕುರಿತು ಮರುಗಿ ಹಾಡಿದ್ದಾರೆ. ಒಂದು ಕಾಲದಲ್ಲಿ ಐಸಿರಿಯಿಂದ ತುಂಬಿ ತುಳುಕತ್ತಿದ್ದ ನಾಡು ಇಂದು ಅನೇಕ ಸಮಸ್ಯೆಗಳ ಬೀಡಾಗಿದೆ. ಹಿಂದಿನ ಕಾಲದಲ್ಲಿ ರತ್ನ-ವೈಡೂರ್ಯಗಳನ್ನು ಬಳ್ಳದಿಂದ ಅಳೆಯುತ್ತಿದ್ದ, ಶೌರ್ಯಸಾಹಸದಿಂದ ಮೆರೆದ, ದಾನ-ಧರ್ಮದಲ್ಲಿ ಪ್ರಸಿದ್ಧಳಾಗಿದ್ದ ಕನ್ನಡತಿಯ ಇಂದಿನ ಸ್ಥಿತಿಯನ್ನು ಕಂಡ ಕವಿ ನೋವನ್ನು ವ್ಯಕ್ತಪಡಿಸಿದ್ದಾನೆ. ತನ್ನ ನಾಡಿನಲ್ಲೇ ಕನ್ನಡತಿಗೆ ಯಾರಿಂದಲೂ ಪ್ರೀತಿ ಸಿಗುತ್ತಿಲ್ಲ. ಬೇರೆಯವರ ಪ್ರಭಾವದಿಂದ ಕನ್ನಡತಿ ಕನ್ನಡ ನಾಡಿನಲ್ಲೇ ಪರದೇಶಿ ಆಗಿರುವಳು.

ನನ್ನ ಈ ಇಂಡಿಯಾದಲ್ಲಿ
ಏನಿದೆ, ಏನಿಲ್ಲವೆಂದು ಬರೆಯಲಿ
-- -- -- - --
ಮಹಲು ಗುಡಿಸಲುಗಳಿದ್ದರೂ

ಒಂದಕ್ಕೊಂದು ಸಂಧಿಸುವುದಿಲ್ಲ
ಇಲ್ಲವೆಂದಲ್ಲ ಕನಸುಗಳು
ಇಲ್ಲಿ ಅವುಗಳಿಗೆ ಎಸಳುಗಳು [೮೦]

'ಇಂಡಿಯಾ ನನ್ನ ಇಂಡಿಯಾ' ಎಂಬ ಕವನದಲ್ಲಿ ಕವಿಯು ಇಂದಿನ ಭಾರತದ ಸ್ಥಿತಿಯನ್ನು ಚಿತ್ರಿಸಿದ್ದಾರೆ. ನಮ್ಮ ಭಾರತದಲ್ಲಿ ಎಲ್ಲವೂ ಇದ್ದರೂ ಏನೂ ಇಲ್ಲ ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ಇಲ್ಲಿ ಸುಂದರ ಕನಸುಗಳೂ ಇವೆ, ಆದರೆ ಅವು ಕನಸುಗಳಾಗಿಯೇ ಉಳಿಯುತ್ತಿವೆ ಎಂಬ ಕವಿಯ ಅಂತರಾಳದ ಮಾತು ಕವನದಲ್ಲಿ ವ್ಯಕ್ತವಾಗಿದೆ.

ಪ್ರತಿ ಜೀವಿಯೂ ಕನಸು ಕಾಣುತ್ತದೆ, ಅವು ಕಾಣುವ ಕನಸನ್ನು ಕವನಗಳಲ್ಲಿ ಚಿತ್ರಿಸುವ ಪ್ರಯತ್ನವನ್ನು ಕವಿ ಮಾಡಿದ್ದಾರೆ. ಕವಿಯು ತಾನು ಹಾಗೂ ತನ್ನ ಗೆಳತಿ ಕಂಡ ಕನಸುಗಳನ್ನು, ದಲಿತರು ಕಂಡ, ಕಾಣುವ ಕನಸುಗಳನ್ನು, ನಾಡು-ನುಡಿ ಹಾಗೂ ಪ್ರಕೃತಿ ಕುರಿತಾದ ಕನಸುಗಳನ್ನು ಕವನಗಳು ಸುಂದರವಾಗಿ ಮಾರ್ಮಿಕವಾಗಿ ಚಿತ್ರಿಸುತ್ತವೆ.

೩.೩ ಬಂಡಾಯದೊಡನೆ ಒಂದಾದ ಪ್ರೀತಿ:

ಒಬ್ಬ ದಲಿತ ಬಂಡಾಯ ಕವಿಯಾಗಿ ಸತ್ಯಾನಂದ ಪಾತ್ರೋಟರು ಪ್ರೀತಿಯ ಕುರಿತು ಸುಮಧುರವಾದ ಕವನಗಳನ್ನು ರಚಿಸಿದ್ದರೆ. ಇಲ್ಲಿ ಬಂಡಾಯದೊಳು ಸಹ ಪ್ರೀತಿಯು ಒಂದಾದ ಬಗೆಯನ್ನು ಕಾಣಬಹುದು. ಕಾರಣ ಬಂಡಾಯವೂ ಹುಟ್ಟುವುದು ಪ್ರೀತಿಗಾಗಿ, ಅದು ಜೀವನದ ಮೇಲಿನ ಪ್ರೀತಿಗಾಗಿ. ಕವಿಯ ಜೀವನದ ಪ್ರೀತಿ, ನೆಲದ ಪ್ರೀತಿ, ನಾಡು ನುಡಿಯ, ಶ್ರಮ ಮತ್ತು ಬೆವರಿನ ಸಂಸ್ಕೃತಿಯ ಮೇಲಿನ ಪ್ರೀತಿಯು ಬಂಡಾಯದೊಳು ಒಂದಾದ ರೀತಿಯನ್ನು ಅವರ ಕವನಗಳಲ್ಲಿ ಗುರುತಿಸಬಹುದು.

ಒಂದೆಡೆ ಮಹಲಿನ ಮೇಲೆ ಮಹಲು
ಇನ್ನೊಂದೆಡೆ ನರಳುವ ಗುಡಿಸಲು
ಒಂದೆಡೆ ನಗು ಸಂತಸದ ಹೊನಲು
ಇನ್ನೊಂದಡೆ ಕಣ್ಣೀರು ಕೂಳು

[illegible]

[illegible]

[illegible]

[illegible]

[illegible]

[illegible]

[illegible]

[illegible]

ಯಾರು ಸೃಷ್ಟಿಸಿದರು ಹೀಗೆ ಈ ಜಗತ್ತನ್ನು
- - - - - - - - - -[೮೧]

ಮೌನದಲ್ಲಿರುವ ಸಖಿಯನ್ನು ಕುರಿತು ಕವಿಯು 'ಬದುಕಲೇ ಬೇಕಿಗೆ' ಎಂಬ ಕವಿತೆಯಲ್ಲಿ - ಹೀಗೆ ಮೌನದಿಂದಿದ್ದು ನನ್ನ ಕೊಲ್ಲಬೇಡ, ಹೀಗಿದ್ದರೆ ನಾನು-ನೀನು ಬದುಕುವದಾದರೂ ಹೇಗೆ, ಎನ್ನುತ್ತ, ನಂತರ ಒಂದೆಡೆ ಶ್ರೀಮಂತಿಕೆ, ನಗು, ಇನ್ನೊಂದೆಡೆ ದಾರಿದ್ರ್ಯ, ಬಡತನ, ಕಣ್ಣೀರು. ಇಂತಹ ಜಗತ್ತನ್ನು ಸೃಷ್ಟಿಸಿದವರಾರು? ಎಂದು ಪ್ರಶ್ನಿಸುತ್ತಾ, ಬೇಸರ, ಕೋಪವನ್ನು ವ್ಯಕ್ತಪಡಿಸಿದ್ದಾರೆ. ಈ ಪ್ರಶ್ನೆಗೆ ಉತ್ತರ ಹುಡುಕಲು ಸಖಿಯನ್ನು ಮೌನಮುರಿದು ಬರಲು ವಿನಂತಿಸಿದ್ದಾರೆ.

ಇಂದು ಮತ್ತೆ ಬಂದಿದೆ ನೋಡು ದೀಪಾವಳಿ
ಖಾಸಾ ನೆಂಟನ ದಿಮಾಕಿನಲಿ
ನೀನಿಲ್ಲದ ವೇಳೆಯಲಿ
ಬಡವರ ಕಣ್ಣೀರು ಒರಸಿ
ಒಂದಿಷ್ಟು ನಗಿಸದ ದೀಪಾವಳಿ
ಹೇಗಾಗುವುದು ಹೇಳು
"ತಮಸೋಮಾ ಜೋತಿರ್ಗಮಯ"[೮೨]

ಬೆಳಕಿನ ಹಬ್ಬ ದೀಪಾವಳಿ ಪ್ರತಿ ವರ್ಷದಂತೆ ಮತ್ತೆ ಬಂದಿದೆ, ಬಡವರ ಬದುಕಿಗೆ ಬೆಳಕಾಗದ, ಬಡವರ ಕಣ್ಣೀರು ಒರೆಸದ, ಬಡವರ ಮುಖದಲ್ಲ ಒಂದಿಷ್ಟು ನಗುವನ್ನು ಮೂಡಿಸದ ದೀಪಾವಳಿ ಮತ್ತೆ ಬಂದಿದೆ. ಇದರಿಂದ ಹೇಗಾಗುವುದು ಕತ್ತಲೆ ಮತ್ತು ಅಂಧಕಾರದ ವಿನಾಶ.

ಸಾವಿರ ಕಷ್ಟಗಳಿಗೆ ತಲೆಯೊಡ್ಡಿದರೂ
ಇನ್ನು ಬದುಕಬೇಕನ್ನುವ ಹಟ
- - - - - - - - - - -
ಸಿಗಲಿ ಸಿಗದಿರಲಿ ಅವರಿವರ ಬೆಂಬಲ
ನನಗೆ ನನ್ನ ದಾರಿಯಲಿ ವಿಶ್ವಾಸ
ರೆಕ್ಕೆ ಬಿಚ್ಚಿ, ಬೀಸಿ ಹಾರುವ ಹಕ್ಕಿಗೆ
ಬೇಕಿಲ್ಲ ಅವರಿವರ ಸಮ್ಮಾನ, ಸಮಾಧಾನ
ಇಲ್ಲ ಮೇಲೇರಿದೆನೆಂಬ ಬಿಗುಮಾನ[೮೩]

ಹತ್ತರಲ್ಲಿ ಹನ್ನೊಂದಾಗಿ ಬದುಕಿ, ಒಂದು ದಿನ ಸಾಯುವದಕ್ಕಿಂತ, ಸಾಧಿಸಬೇಕಾದ್ದನ್ನು ಸಾಧಿಸಿ, ಅದನ್ನು ಬುವಿ ತುಂಬ ಪಸರಿಸಿ ಹಸಿರು ಚಿಗುರಾಗಿಸುವ ಹಂಬಲ ಕವಿಯದ್ದಾಗಿದೆ. ಏನೇ, ಎಷ್ಟೇ ಕಷ್ಟಗಳು ಎದುರಾದರೂ ಅವುಗಳನ್ನು ಎದುರಿಸಿ ಬದುಕಬೇಕೆನ್ನುವ ಹಟ, ಇತರರ ಬೆಂಬಲ ಸಿಗಲಿ ಅಥವಾ ಸಿಗದಿರಲಿ ಸ್ವ ಸಾಮರ್ಥ್ಯದಲ್ಲಿ ವಿಶ್ವಾಸವಿರಿಸಿಕೊಂಡು ಮುನ್ನುಗ್ಗುವ ಛಲವನ್ನು ಕವಿಯು ಕವನದಲ್ಲಿ ವ್ಯಕ್ತಪಡಿಸಿದ್ದಾರೆ.

ಗ್ರಾಮೀಣ ಭಾರತದಲ್ಲಿ ಮೇಲ್ವರ್ಗದವರಿಂದ, ಪುರೋಹಿತಶಾಹಿಗಳಿಂದ, ರಾಜಕಾರಣಿಗಳಿಂದ, ಅಧಿಕಾರಶಾಹಿಗಳಿಂದ ತುಳಿತಕ್ಕೆ ಒಳಗಾದ ಶೋಷಿತ ಜನಾಂಗದ ದನಿಯಾಗಿ ಸತ್ಯಾನಂದ ಪಾತ್ರೋಟರ ಕಾವ್ಯ ಗಮನರ್ಹವಾಗುತ್ತದೆ. ಕವಿತೆಗಳನ್ನು ಬರೆಯುವುದನ್ನೇ ಕುರಿತಾಗಿ ಕವಿ ಮೂರು ಪದ್ಯಗಳನ್ನು ಬರೆದಿದ್ದಾನೆ. 'ನಾನೇ ಬರೆಯುತ್ತೇನೆ', 'ನಾನಿನ್ನು ಬರೆಯುವುದಿಲ್ಲ', 'ಕರಿನೆಲದ ಕಪ್ಪು ಕಲೆಗಳು' ಈ ಪದ್ಯಗಳಲ್ಲಿ ನೆಲದಿಂದ ನೆಗೆದು ಮಹಲಿಗೆಲ್ಲ ಆಧಾರವಾದ ಮಹಲುಗಳನ್ನು ಕಟ್ಟಿಯೂ ಅವುಗಳನ್ನು ಪುಡಿ ಮಾಡಲು ಸಿದ್ಧನಾದ ಅಪ್ಪ, ಅವನಂತಹ ರೋಷಗೊಂಡ ತನ್ನವರ ಬಗೆಗೆ ಅವರ ಬೆವರಿನ ಬೆಲೆಯನ್ನು ತಿಳಿಯಲಾರದವರ ಬಗೆಗೆ ತಿರಸ್ಕಾರವಿದೆ.[೪೪]

ನಾನಿನ್ನು ಬರೆಯುವುದಿಲ್ಲ
– – – – – – – – – –
ಅಲ್ಲಿ ತೆಳುವಾದ ಚರ್ಮದ ಬದಲು
ರಾಡಿ ಮೆತ್ತಿದ ಎಮ್ಮೆಯ ಚರ್ಮ
ಅದಕ್ಕೆಂದೇ ನಾನಿನ್ನು ಬರೆಯುವುದಿಲ್ಲ
ಅವರ ಮೆದುಳಿನ ಸುತ್ತಲು ಕವಿದ ಪೊರೆಯನ್ನು
ಹೆಜ್ಜೆಯಾಗಿ ಬಿಡಿಸುತ್ತ ಅಕ್ಷರದ ಮುದ್ರೆಯನ್ನೊತ್ತ ಬೇಕು

ಎನ್ನುವ ಸಂಕಲ್ಪವಿದೆ. ಹೆಸರಿದ್ದರೂ "ತನ್ನನ್ನು ಕರಿಯನೆಂದೇ ಕರೆಯುವ 'ನೀನು ದಡ್ಡ ಶತದಡ್ಡ ಶೆಟಗೆವ್ವ ನಿನ್ನ ನಾಲಗೆಯ ಮೇಲೆ ಅಕ್ಷರ ಬರೆದಿಲ್ಲ' ವೆನ್ನುವ ಕೆಂಜಗ ಮುಖದ ಮಾಸ್ತರು, ಹಾಗೇಕೆ ಕರೆಯುತ್ತಾರೆಂದು ಕೇಳಿದಾಗ ವಿವರಣೆ, ಪ್ರೇರಣೆಯನ್ನು ನೀಡಿದ ಟೀಚರು ಛಲದಿಂದ ಕರಿಯ ಕವಿಯಾಗಿ ಪಡುವ

[illegible]

ಅಭಿಮಾನ ಇಲ್ಲಿ ವ್ಯಕ್ತವಾಗಿದೆ. ದುಡಿದೂ ದೊಡ್ಡವರಾಗದೆ ಹಣ್ಣಾದವ, ಮೇಲ್ಜಾತಿಯವರ ಕುತಂತ್ರವನ್ನರಿಯದೆ ಅತಂತ್ರ ಸ್ಥಿತಿಯಲ್ಲಿರುವವರಿಗೆ ಅಕ್ಷರದ ಬಲವನ್ನು ನೀಡುವ ಆಶಯ ವ್ಯಕ್ತವಾಗಿದೆ. ಅಂಬೇಡ್ಕರ ಹೇಳಿದ Educate, Organise and agitate ಎಂಬ ಮಾತುಗಳು ಇಲ್ಲಿ ತುಂಬಾ ಪ್ರಸ್ತುತವಾಗುತ್ತವೆ. ಇಂತಹ ಸ್ಥಿತಿಯಲ್ಲಿ ಬರೆಯದೇ ಇರುವುದು ಸಾಧ್ಯವಿಲ್ಲ ಎಂಬ ಧ್ವನಿಯೂ ವ್ಯಕ್ತವಾಗುತ್ತದೆ. ನರಳುವ ಗುಡಿಸಲು ಮರಗುವ ಧ್ವನಿಗಳು ಅದರ ವಸ್ತುವಾಗುತ್ತವೆ".[೬೫]

ಅಳಬೇಕೆಂದರೆ ಅಳಲಾಗುವುದಿಲ್ಲ
ನಗಬೇಕೆಂದರೆ ನಗಲಾಗುವುದಿಲ್ಲ
ಅಳು-ನಗುಗಳನ್ನು
ಬಿಚ್ಚಿಟ್ಟುಕೊಂಡೋ ಬಚ್ಚಿಟ್ಟುಕೊಂಡೋ
ಒಳಗೊಳಗೆ ಬೇಯುತ್ತ
ಯುದ್ಧ ಮಾಡುತ್ತಿದ್ದೇನೆ
ನಿತ್ಯ ಬದುಕಿನ ಜೊತೆ [೬೬]

ನಮ್ಮ ಸುತ್ತ-ಮುತ್ತಲೂ ಭೂತಗಳು ತಿರುಗುತ್ತಿದ್ದು, ಒಟ್ಟಿಗೆ ನಮ್ಮ ಮೇಲೆ ಮುಗಿ ಬೀಳಲು ಹೊಂಚಿ ಹಾಕಿ ಕುಳಿತಿವೆ. ಇಂತಹ ಸ್ಥಿತಿಯಲ್ಲಿ ಅಳಲಾಗುತ್ತಿಲ್ಲ, ನಗಲಾಗುತ್ತಿಲ್ಲ ಎಲ್ಲವೂಗಳನ್ನು ಮುಚ್ಚಿಟ್ಟುಕೊಂಡು ಒಳಗೊಳಗೆ ಕೊರಗುತ್ತ, ಮುನ್ನಗ್ಗಲು, ಗೂಡುಕಟ್ಟಲು ನಿತ್ಯವೂ ಬದುಕಿನೊಂದಿಗೆ ಯುದ್ಧ ಮಾಡುತ್ತಿದ್ದೇನೆ ಎಂದು ಕವಿ ಎಲ್ಲವನ್ನು ಎದುರಿಸುವ ಧೈರ್ಯವನ್ನು ವ್ಯಕ್ತಪಡಿಸಿದ್ದಾನೆ.

ಜೀ . . . . ಜೀ ಎನ್ನುವ ಷಂಡರಿಗೆ
ಉಫೇ . . . . ಉಫೇ ಎನಿಸಿಕೊಳ್ಳುವ ಭಂಡರಿಗೆ
ನುಂಗಲಾರದ ತುತ್ತು
ಕಾರಣ
ನಮ್ಮೆದೆಯಲ್ಲಿ
ನಿಗಿ – ನಿಗಿ ಕೆಂಡ
ಹೃದಯಾಂತರಾಳದಲ್ಲಿ ನೂರು ನೋವಿನ ಹಂದರ

ಆದರೂ ;

ಎದೆ ಸೆಟಸಿ ಹೆಡಕು ಮೇಲೆತ್ತಿ. . . . . . [೪೭]

"'ನಾನು ಮತ್ತು ನನ್ನ ಕಾವ್ಯ' ಎಂಬ ಕವಿತೆಯಲ್ಲಿ ಎದೆಯಲ್ಲಿ ಪ್ರತಿಭಟನೆಯ ಕಂಡ ಹಾಗೂ ಹೃದಯಾಂತರಾಳದಲ್ಲಿ ಅನೇಕ ನೋವುಗಳು ಇದ್ದರೂ ಧೈರ್ಯದಿಂದ ಎದೆಯೊಡ್ಡಿ ಮುನ್ನುಗ್ಗುತ್ತಿರುವೆವು ಎಂಬ ಮಾತನ್ನು ಕವಿ ವ್ಯಕ್ತಪಡಿಸಿದ್ದಾನೆ.

ದಡ್ಡರಂತಪ್ಪೋ ಇವರು ಒಡ್ಡಜನಗಳು' ಸಂಕಲನದ ಮತ್ತೊಂದು ಉತ್ತಮ ಕವಿತೆ. ಗುಡ್ಡಕ್ಕೆ ಸೊಡ್ಡು ಹೊಡೆದು, ಸುರೆದೇವಿಯ ಸೆರಗು ಹಿಡಿದು, ತೇಪೆ ಸೀರೆ ಹೊದ್ದುಕೊಂಡು ಹೊಡೆದು, ಸುರಿಸಿ, ತಮ್ಮ ಶಕ್ತಿ – ಸಾಹಸಗಳಿಂದ ಮಹಡಿ ಮಹಲುಗಳನ್ನು ಕಟ್ಟಿದವರು. ಈ ದೇಶದ ಸಂಸ್ಕೃತಿಯ ಜೀವಾಳವೆನಿಸಿದೆ. ಗುಡಿ-ಗುಂಡಾರಗಳನ್ನು ನಿರ್ಮಿಸಿದವರು. ರಾಜರುಗಳ ಹೆಸರುಗಳನ್ನು ಮರೆಸಿದವರು. ಯಾವ ಇತಿಹಾಸದಲ್ಲಿ ಇವರ ಹೆಸರುಗಳು ದಾಖಲಾಗಿವೆ, ಅಂತೆಯೇ ಇಂದು ಜ್ವಾಲೆಯಾಗಿ ಕಾಣುತ್ತಿರುವ, ಕುದಿ ಲಾವಾರಸದಂತೆ ಕುದಿಯುತ್ತಿರುವ ಇವರು

ಗುಡುಗು ಮಿಂಚು ಸಿಡಿಲುಗಳನ್ನು / ಎದೆಯ ತುಂಬ ತುಂಬಿಕೊಂಡು

ಲಾವಾರಸವ ಚಿಮ್ಮಲೆಂದು / ಕೋಟೆಗೋಡೆ ಕೆಡವಲೆಂದು
ಮಹಲು ಕೆಡವಿ ನಶಿಸಲೆಂದು / ಎದುರು ನೋಡುತಿಹರು
ಕಪ್ಪು ಜನಗಳಲ್ಲ ಈ ಒಡ್ಡ ಜನಗಳು
ಈದ ಹುಲಿಗಳಪ್ಪ ಈಗ ಒಡ್ಡ ಜನಗಳು

ಈದ ಹುಲಿ ತುಂಬಾ ಅಪಾಯಕಾರಿ, ಅದನ್ನು ತಡವಲೇ ಕೊಡದು. ತಮ್ಮ ಶ್ರಮದ ಬೆಲೆಗೆ ಕನಸಿನಲ್ಲೂ ಇಲ್ಲದ ಸುಖಕ್ಕಾಗಿ ಕವಿ ಕುಪಿತನಾಗಿದ್ದಾನೆ. ಗಂಧದಂತೆ ಜೀವ ತೇಯುವವರು ಒಬ್ಬರು; ಅದರ ಸುವಾಸನೆಯನ್ನು ಮೂಸುವವರು ಇನ್ನೊಬ್ಬರು, ಅದಕ್ಕಾಗಿಯೇ ಮಹಲುಗಳನ್ನು ಕೆಡವಲು ಎದುರು ನೋಡುತ್ತಿದ್ದಾರೆ. ಬಡತನ, ನೋವು, ಕಷ್ಟ-ನಷ್ಟಗಳಿಗೆ ದೇವರೇ ಕಾರಣವೆಂದ ಪುರೋಹಿತಶಾಹಿ ವರ್ಗ ಅತನ ನಿಜನೆಲೆಯನ್ನು ತಿಳಿಬಾಯಿಯಿಂದ ಸಂಸ್ಕೃತ ಶ್ಲೋಕಗಳನ್ನುದುರಿಸುತ್ತ ಪೂಜೆ – ಪುನಸ್ಕಾರಗಳೆಡೆಗೆ ಬೆರಳು ಮಾಡಿದರು.

ನಿಜವಾದ ದೇವರನ್ನು ಮುಚ್ಚಿಟ್ಟರು, ದೇವರು ಸೇವೆಗೆ ದಾಸಿಯರು ಬೇಕೆಂದು 'ದೇವದಾಸಿ' ವರ್ಗವನ್ನು ನಿರ್ಮಿಸಿ, ಅವರನ್ನು ಭೋಗದ ವಸ್ತುಗಳನ್ನಾಗಿಸಿಕೊಂಡರು. ಅಂಧಶ್ರದ್ಧೆಯಲ್ಲಿ ಮುಳುಗಿದ ಜೀವಗಳು, ಅದನ್ನೇ ಪರಮಾರ್ಥವೆಂದು ಭ್ರಮಿಸಿದರು". [೪೮]

ಬರಬ್ಯಾಡೋ ಅಜ್ಜ ಬರಬ್ಯಾಡೋ
ಬಂದ್ರು – ಬರವಲ್ಯಾಕ
ಆದ್ರ ಅಜ್ಜ ಬಾಳ ಜ್ವಾಕಿ
ಇವರ ಕೈಯಾಗ ಸಿಕ್ಕಿ–ಗಿಕ್ಕಿ
ಆಕಸ್ಮಾತ ಸಿಕ್ಕಿ – ಕುತ್ತೆಂತ ತಿಳಿನಿನ ಕಂತಿ [೪೯]

ಕವಿತೆಯಲ್ಲಿ , ಇಂದಿನ ಸಮಾಜದ ವ್ಯವಸ್ಥೆಯ ಅನಾಚಾರ, ಮೋಸತನ ದೇಶದ್ರೋಹದ ಕೆಲಸಗಳ ಕುರಿತು ಕವಿಯ ಪ್ರತಿಭಟನೆ ಕೂಗು ಕೇಳುತ್ತದೆ. ಇಲ್ಲಿ ದಲಿತರ, ಬಡವರ ನೋವು, ಕೂಗು ಯಾರಿಗೂ ಕೇಳಿಸುವುದಿಲ್ಲ. ವಿರುದ್ಧ ದನಿ ಎತ್ತಲು ಹೋದರೆ ತರುವರು ಜೀವಕ್ಕೆ ಕತ್ತು.

ಕಪ್ಪು ಗುಡಿಸಲುಗಳಲ್ಲಿ
ಸೂರ್ಯ ಕಾಣಲಾರನೇನೆ
ಹಸಿವಿನೆದೆಯ ಮೀಟಿ ನಿಂತು
ನಗುವು ಚಿಮ್ಮಲಾರದೇನೆ

ವರ್ಗವರ್ಣ ದೂರತಳ್ಳಿ
ಪ್ರೀತಿ ಮಾಡಬಾರದೇನೆ
ಎರಡು ಹೃದಯ ಒಪ್ಪಿದಾಗ
ಜಾತಿ–ಕೋತಿ ಹೋಗದೇನೆ [೫೦]

'ವರ್ಗ – ವರ್ಣ' ಎಂಬ ಕವಿತೆಯಲ್ಲಿ ವರ್ಗ, ವರ್ಣ ಮೊದಲಾದ ಭೇದ – ಭಾವಗಳು ಹೊರಟು ಹೋಗಿ ಪ್ರೀತಿ ಮೂಡುವದು. ಎರಡು ಹೃದಯಗಳು ಒಪ್ಪಿ ಸೇರಿದಾಗ ಈ ಎಲ್ಲ ಭೇದ–ಭಾವಗಳು ಹೊರಟು ಹೋಗುತ್ತವೆ. ದಲಿತರ, ಬಡವರ ಗುಡಿಸಲಿನಲ್ಲಿ ಅಥವಾ ಬದುಕಿನಲ್ಲಿ ಸೂರ್ಯ ಮೂಡುತ್ತಾನೆ, ನೋವು ಹಸಿವುಗಳನ್ನು ದಾಟಿ ನಗುವು ಚಿಮ್ಮಿಬರುವುದು ಎಂಬ ಆಶಯವನ್ನು ಕವಿ ವ್ಯಕ್ತಪಡಿಸಿದ್ದಾನೆ.

'ಉಸಿರಾಗದಿರಲಿ ಗೆಳತಿ' ಎಂಬ ಕವಿತೆಯಲ್ಲಿ ಕವಿ ಗೆಳತಿಯನ್ನು ಕುರಿತು – 'ನಿನ್ನ ಉಸಿರು ಕೇವಲ ಉಸಿರಾಗದಿರಲಿ, ನಿನ್ನೀ ಉಸಿರು ನೆತ್ತರಾದರಾಗಲಿ, ನೂರಾರು ಹೂಗಳಿಗೆ ಚೇತನ ತುಂಬಲಿ ಎನ್ನುತ್ತ.

ಅಂಗೈಯಲ್ಲಿ ರಂಗು-ರಂಗಿನ ಆಗಸತೋರ
ಅಂಗಾಲಿಂದ ನೆತ್ತಿಯತನ ಮಾತಿನ ಮಹಲು ಕಟ್ಟಿ
ಮೈತುಂಬ ಬಣ್ಣದ ಬಸರಾಗಲು
ದೌರ್ಜನ್ಯಗಳ ಮಳೆ ಸುರಿವ
ರಕ್ತ ಬೀಜಾಸುರರಿಗೆ ಇಲ್ಲಿ ಕೊರತೆಯಿಲ್ಲ [೫೧]

ಬರೀ ಮಾತು, ಅಶ್ವಾಸನೆಗಳಿಂದ ಮನೆ ಕಟ್ಟಿ, ಕನಸು ತೋರಿಸಿ, ಮೋಸಮಾಡಿ, ಮತ್ತೆ ಶೋಷಣೆ ದೌರ್ಜನ್ಯ ಮಾಡುವ ರಕ್ತ ಬೀಜಾಸುರರು ಇಲ್ಲಿ ಅನೇಕರಿರುವರು. ಅದಕ್ಕೆ ಕವಿ ಗೆಳತಿಯ ಉಸಿರು ಬರೀ ಉಸಿರಾಗದಿರಲಿ, ಆ ಉಸಿರು ಸೂರ್ಯನಿಗಿಂತಲೂ ಭಯಂಕರವಾಗಿ ದಿಕ್ಕು-ದಿಕ್ಕಿಗೆ ಹಬ್ಬಿ ಅಮಾನುಷರನ್ನು ಉಸಿರುಗಟ್ಟಿ ಸಾಯಿಸಲಿ ಎಂದಿದ್ದಾರೆ.

ಸಂಜೆಯ ಮಳೆ ಯಾರಪ್ಪನ ಸ್ವತ್ತು ಅಲ್ಲ
ಕೊಳಗೇರಿಯ ಪ್ರತಿಗುಡಿಸಲು ಗುಡಿಸಲೆಲ್ಲ
ಮೈ-ಕೊಡುವಿ ಲಕ್ಷ್ಮಣ ರೇಖೆ ಒದ್ದು ಹೊರ ಬರಲಾರದ
ತನಕ
ಈ ಸಂಜೆಯ ನವಿರಾದ ಮಳೆ ಇವರಿಗೆ ದಕ್ಕಲಾರದು
ಇವರು ನೀರಿಲ್ಲದೆ ಬಿಕ್ಕುವುದು ತಪ್ಪಲಾರದು [೫೨]

ಹುಟ್ಟಿನಿಂದ ಇಲ್ಲಿಯವರೆಗೂ ಕಷ್ಟ-ನೋವಿನಲ್ಲಿ ಜೀವನ ಹಣ್ಣಾಗುತ್ತ ನಡೆದಿದೆ, ಆದರೂ ಇಲ್ಲಿಯವರೆಗೂ ಸಂಜೆಯ ಮಳೆ ಹಸಿದ ನೆಲಕ್ಕೆ ಚುಂಬಿಸಿಲ್ಲ. ಈ ಮಳೆ ಮಹಲಿನ ರೇಖೆ ದಾಟಿ ಕೊಳಗೇರಿಯ ಸನಿಹ ಬರುತ್ತಿಲ್ಲ. ಮೋಡ ಮಳೆಯಾಗುವುದು ಕೊಳಗೇರಿಯ ಗಬ್ಬುನಾತದಿಂದಾದರೂ, ಈ ಕಡೆಗೆ ಸಂಜೆ ಮಳೆ ಸುಳಿದಿಲ್ಲ. ಅಂದರೆ ನಗು, ಸಂತೋಷ, ಸಿರಿ ಮಹಲಿನ ರೇಖೆಯ ದಾಟಿ ಗುಡಿಸಲ ಹತ್ತಿರ ಬರುತ್ತಿಲ್ಲ , ಕೊಳಗೇರಿಯ ಪ್ರತಿ ಗುಡಿಸಲು ಎದ್ದು ಲಕ್ಷ್ಮಣ ರೇಖೆ ಒದ್ದು ಮುನ್ನುಗ್ಗದೇ, ಈ ಸಂಜೆಯು ನವಿರಾದ ಮಳೆ ಇವರಿಗೆ ದಕ್ಕಲಾರದು. ಎಂಬ ಪ್ರತಿಭಟನೆಯ ಕರೆಯನ್ನು ನೀಡಿದ್ದಾನೆ. ಇಲ್ಲಿ ಕವಿ ಅಸಮಾನತೆಯ ವಿರುದ್ಧ

[illegible]

ಕೋಪವನ್ನು, ಗುಡಿಸಲುಗಳ ಮೇಲೆ ಪ್ರೀತಿಯನ್ನು ವ್ಯಕ್ತಪಡಿಸುತ್ತಾ, ಗುಡಿಸಲುಗಳಲ್ಲಿನ ನೋವುಗಳನ್ನು ಚಿತ್ರಿಸಿದ್ದಾನೆ.

ನೆಲ ಅವರದಂತೆ ಮುಗಿಲವರದಂತೆ
ಹರಿವ, ಹೊಳೆ-ಹಳ್ಳ-ಕೊಳ್ಳ ಬೆಟ್ಟಗಳನ್ನೆಲ್ಲ
ಬರುವಾಗ ಬ್ರಹ್ಮ ಕೊಟ್ಟು ಕಳಿಸಿರುವನಂತೆ
ಆ ಪಾಪಸು ಕಳ್ಳಿಗಳೆಲ್ಲ
ನನ್ನ-ನಿನ್ನ ತಲೆ ಮೇಲೆ
ನೂರ್ಮಡಿಸಿಹವು ನಾ-ನೀ ಕೂಡದ ಹಾಗೆ [೫೩]

ಪ್ರಕೃತಿ ಎಲ್ಲರಿಗೂ ದೇವತೆ, ಎಲ್ಲರಿಗೂ ಒಂದೇ, ಅದರಲ್ಲಿ ಭೇದವಿಲ್ಲ, ಭೂಮಿಗೆ ಬರುವಾಗ ಯಾರು ಯಾವ ಸಂಪತ್ತು ತಂದಿಲ್ಲ, ಆದರೂ ಕೆಲ ಜನ ಹೀಗೇ ಆಡುತಿಹರು. ಇಲ್ಲಿ 'ಸರ್ವರಿಗೂ ಸಮಪಾಲು ಸಮಬಾಳು' ಆದರೆ ಈ ಘೋಷಣೆ ಇಂದು ಹಾಸ್ಯಕ್ಕೀಡಾಗಿದೆ. ಮುಂದುವರೆದು ಕವಿ ಹೀಗೆ ಹೇಳುತ್ತಾನೆ.

ಈ ನಾಡ ಮಣ್ಣೇ ಹೀಗೆ
ಒದ್ದು ಹೋಗೋಣ ಬಾ ದೂರ ತೀರಕೆ,
ಈರ್ವರನು ಒಂದಾಗಿಸುವ
ಒಂದಾಗಿಸೆ ಚುಂಬಿಸುವ
ಹೊಸ ನಾಡಿಗೆ - ಹೊಸ ದಿಗಂತಕ್ಕೆ
ನಾನು - ನೀನು ಆಗಬೇಕು ಈಗ ಹೀಗೆ

'ಕಲ್ಲಿಗೂ ಗೊತ್ತಿರುವ ಕತೆ' ಎಂಬ ಕವನ ಸಂಕಲನದಲ್ಲಿ 'ಕಣದೇವು ನಾವು ಹಾಡಿದೇವು' ಎಂಬ ಕವಿತೆ - ಹೊಟ್ಟೆಯ ಹಸಿವಿಗಾಗಿ ಮತ್ತು ಮುಕುತಿಗಾಗಿ ಕಾಲು ನೋಯುತನಕ, ರಕ್ತ ಸೋರುವತನಕ ಎಲ್ಲೆಂದರಲ್ಲಿ ಕುಣಿದೇವು, ಹಾಡಿದೇವು.

ಹೊಟ್ಟೆ ತುಂಬಲಿಲ್ಲ
ಬಟ್ಟೆ ಕಾಣಲಿಲ್ಲ
ಮುಕುತಿಯಂತೂ
ನಮಗೆ
ಸಿಗಲೇ ಇಲ್ಲ

ತಡದೇವು ಮತ್ತೆ ಕಾದೇವು
ತಡೆ-ತಡೆದು ಮತ್ತೀಗ ಕುಣಿದೇವು
ಕುಣಿ-ಕುಣಿದು ಹಾಡವ ಹಾಡಿದೇವು [೫೪]

ಎಲ್ಲೆಂದರಲ್ಲಿ ಕುಣಿದು, ಹಾಡಿದರೂ ಹಸಿವು ನೀಗಲಿಲ್ಲ, ಇನ್ನೂ ಹೊಟ್ಟೆ ತುಂಬಲಿಲ್ಲ, ಬಟ್ಟೆ ಕಾಣಲಿಲ್ಲ ಹಾಗೂ ಮುಕುತಿಯಂತೂ ನಮಗೆ ಸಿಗಲೇ ಇಲ್ಲ. ಅದಕ್ಕಾಗಿ ಮತ್ತೇ ಕಾದು, ಕುಣಿ-ಕುಣಿದು ಹಾಡು ಹಾಡಿದೇವು. ಮೂಲಭೂತ ಅಗತ್ಯಗಳ ಈಡೇರಿಕೆಗಾಗಿ ದಿನವೂ ಹೋರಾಟ ನಡೆಯುತ್ತಿದೆ.

ಎಷ್ಟು ನೋವುಗಳು
ಎಷ್ಟು ಕನಸುಗಳು
ನಿತ್ಯ ಬದುಕಿನಲ್ಲಿ
ಮೌನದಲಿ ನುಂಗಿ
ನಡೆದಿಹರು ತಗ್ಗಿ
ಸಾಗರದ ಕಾಂತಿಯಲ್ಲಿ
ತಲೆಗಿಲ್ಲ ನೆರಳು
ಮನಕಿಲ್ಲ ಕನಸು
ಸ್ವಾತಂತ್ರ್ಯ ಬಂದರಿಲ್ಲಿ
ಮೌನವನು ಮುರಿದು
ಎದ್ದೇಳುತನಕ
ಸುಖವಿಲ್ಲ ಕನಸಿನಲ್ಲಿ [೫೫]

ನಿತ್ಯ ಬದುಕಿನಲ್ಲಿ ಅನೇಕ ಕಷ್ಟ-ನೋವುಗಳನ್ನು ಪಡೆದರೂ ಎಲ್ಲವನ್ನು ಸಹಿಸುತ್ತ ಗುಡಿಸಲಲ್ಲಿ ಜೀವಿಸುತ್ತಿರುವರು. ಶತಮಾನದಿಂದಲೂ ಹಸಿವನ್ನು ತಡೆದು ಹೊತ್ತಿಹರು ದಿಲ್ಲಿ ಖರ್ಚಿ. ಅಂದರೆ ಮೇಲಿನವರ ಸುಸ್ಥಿತಿಗೆ ಕಾರಣ ಕೆಳಗಿನವರ ಗುಡಿಸಲುಗಳ ಜನರ ಬೆವರು. ಶಾಂತಸಾಗರದಂತೇ ಎಲ್ಲ ನೋವು, ಶೋಷಣೆಗಳನ್ನು ನುಂಗಿ ಮೌನದಿಂದ ಬದುಕುತಿಹರು. ಸ್ವಾತಂತ್ರ್ಯ ದೊರೆತಾಯಿತು, ಈ ಮೌನವನ್ನು ಮುರಿದು ಎದ್ದು ಮುಂದೆ ಬರುವ ತನಕ ಇವರಿಗೆ ಸುಖವಿಲ್ಲ ಕನಸಿಲ್ಲ.

ಈ ದೇಶದ ರಾಜಕಾರಣ ಇಂದು ಎಷ್ಟೊಂದು ಗಬ್ಬೆದ್ದು ಹೋಗಿದೆಯೆಂದರೆ, ಅದರ ಬಗೆಗೆ ಮಾತನಾಡಲು ಹೇಸಿಗೆ ಎನಿಸುತ್ತದೆ.

ರಸ್ತೆ ಬದಿ ಜೋಪಡಿಗೆ ರಾತ್ರಿ ಕಳ್ಳರೂ ಇಲ್ಲ
ಗಾಳ–ಮಳೆ–ಚಳಗಳೇ ಬಂಧುಬಳಗ
ರಾಜ–ರಾಣಿಯರ್ಹೋಗಿ ರಾಜಕಾರಣಿ ಬಂದ
ಸುಡುವ ಸೂರ್ಯನೇ ಇವರಿಗೀಗಲೂ ಗೆಳೆಯ

ತತ್ವಾಧಾರಿತ ರಾಜಕೀಯದ ಮಾತುಗಳನ್ನಾಡುತ, ರಾಮ ರಾಜ್ಯದ ಹುಸಿ ಕನಸನ್ನು ತೋರಿಸುತ್ತ, ಹಣ,ಹೆಂಡ, ತೋಳ್ಬಲವನ್ನು ಉಪಯೋಗಿಸಿ ಮತಪೆಟ್ಟಿಗೆಯಲ್ಲಿ ಮತಗಳನ್ನು ಹಾಕಿಸುತ್ತಾರೆ ಅಂದು ರಾಜ–ರಾಣಿಯರು ವೈಭವದಿಂದ ಬಡವನ ಹೆಗಲೇರಿ ಮೆರೆದರೆ ಇಂದು ಪ್ರಜಾಪ್ರಭುತ್ವದಲ್ಲಿ 'ಪ್ರಜೆಗಳೇ ಪ್ರಭುಗಳು' ಎಂಬ ಡೈಲಾಗ್ ಹೊಡೆಯುತ್ತ, ವಿಧಾನ ಸೌಧದಲ್ಲೇನಾದರು ಬಡಬೋರೆಗೌಡನನ್ನು ಕಂಡರೆ ಅರ್ಜಿಕೊಡು ನೋಡೋಣ ಎನ್ನುತ್ತ; ಬಂಧುಗಳಿಗೆ ಮಕ್ಕಳಿಗೆ ಮಣಿ ಹಾಕುತ್ತಾರೆ. ನೇಕಾರನ ಹೆಂಡತಿ ಎಂದಿದ್ದರೂ ಬತ್ತಲೆಯೇ ಪುಡಾರಿಗಳನ್ನು ದೋಚಿದರೆ ಏನಾದರೂ ಸಿಕ್ಕೀತು. ರಸ್ತೆ ಬದಿಯ ಬಡವನ ಮನೆಗೆ ಕಳ್ಳ ನುಗ್ಗಿದರೆ ಏನು ಸಿಗುತ್ತದೆ. ಎಂದು ಇಂದಿನ ಸ್ಥಿತಿಯನ್ನು ಚಿತ್ರಿಸಲಾಗಿದೆ.[೫೭]

ಮಂಡೇಲಾ ಮಂಡೇಲಾ ಮಂಡೇಲ
ಧ್ವನಿ ಕೇಳ ನಡಗಿತದೋ ಭೂಮಂಡಲಾ
– – – – – – – – – – –
ಕನಸುಗಳ ಕೊಂದವರ
ಮನಸುಗಳ ಬೆಸೆದನು
ಕಪ್ಪು ಬಿಳ ಎಲ್ಲಾ ಸುಳ್ಳು
ಬೆಳಕು ನೀರಿಗಂದನು
ನದಿಗಳಾಗಿ ಉಕ್ಕಿದವು
ಅವನ ಪ್ರೀತಿ ಮಾತುಗಳು
ಕಳೆ ಕಸರು ಕಿತ್ತಿದವು
ಹೋರಾಟದ ಬೀಜಗಳು [೫೮]

ನೆಲ್ಸನ್ ಮಂಡೇಲಾ ಹೆಜ್ಜೆ ಇಟ್ಟಲ್ಲೆಲ್ಲಾ ಸುಗ್ಗಿ ಸೊಗಸುಬಂದಿತು. ಮಂಡೇಲಾ ಧ್ವನಿ ಕೇಳಿ ಭೂಮಿ ನಡುಗಿತು ಹಾಗೂ ಅದೇ ಧ್ವನಿಗೆ ಭೂಮಿ ಅರಳಿತು. ಕಾರಣ ಮಂಡೇಲಾ ಮನಸು – ಮನಸುಗಳ ಬೆಸೆಯುವ ಕೆಲಸಮಾಡಿದರು. ವರ್ಣಭೇಧವನ್ನು ಹೋಗಲಾಡಿಸಿ, ಅದೆಲ್ಲಾ ಸುಳ್ಳು, ನೀರು, ಗಾಳಿ, ಬೆಳಕಿಗೆ ಎಲ್ಲವೂ ಒಂದೇ ಎಂದು ಸಾರಿದನು. ಅವನ ಮಾತುಗಳು ನದಿಗಳಾಗಿ ಉಕ್ಕಿದವು ಹೋರಾಟದ ಬೀಜಗಳಾಗಿ ಬಿತ್ತಿದವು.

ನಾಡಿನ ಪ್ರಸ್ತಕ ಸ್ಥಿತಿಯನ್ನು ಕುರಿತು ಕೃತಿಯು ಈ ನಾಡಿನ ಜನರಿಗೆ ಮನುಷ್ಯರ ಮನಸ್ಸೇ ಇಲ್ಲದಾಗಿದೆ. ರಾಮ, ಬಾಬರರ ಹೆಸರಿನಲ್ಲಿ ಜಗಳವಾಡುತ್ತಿದ್ದಾರೆ.

ಬುದ್ಧ, ಬಸವ, ಗಾಂಧಿ
ಅರ್ಥವಾಗಿದ್ದರೆ ಇವರು ಇಂದಿದು
ವೇದನೆಗಳ ನಾಡು
ಆಗುತ್ತಲೇ ಇರಲಿಲ್ಲ
ಸತ್ಯ ಹೇಳಿದವರನ್ನೆಲ್ಲ ಸಾಗಕ್ಕೆ ತಳ್ಳಿ
ನೆನಸುತ್ತೇವೆ ಸುಮ್ಮನೇ ಸಂಕಟ ಆದಾಗೊಮ್ಮೆ
ಅಂದೆಲ್ಲೇ ಅದೋ
"ವೇದನೆಗಳ ಮಡುತುಂಬಿ ಫಾಸಿಗೊಂಡಿದೆ ನಾಡು"
ಗಾಯಕ್ಕೆ ಔಷಧಿ ಯಾರಲ್ಲಿ ಉಂಟು? [೫೮]

ಎಂದು ಪ್ರಶ್ನೆಸಿದ್ದಾರೆ.

ಪಾತ್ರೋಟರ 'ಜಾಜಿ ಮಲ್ಲಿಗೆ' ಕವನ ಸಂಕಲನಕ್ಕೆ ಮುನ್ನುಡಿಯನ್ನು ಬರೆಯುತ್ತ ಶ್ರೀ ಬರಗೂರು ರಾಮಚಂದ್ರಪ್ಪನವರು 'ಬಂಡಾಯ ಕವಿಯೊಬ್ಬ ಸದಾ ಹೋರಾಟದ ಹುನ್ನಾರಡಲ್ಲೇ ಹೂತು ಹೋಗಬೇಕಾಗಿಲ್ಲ, ಹೂತು ಹೋಗುವ ಸ್ಥಿತಿ ಹೋರಟವಾಗುವುದಿಲ್ಲವಾದ್ದರಿಂದ ಈ ಮಾತುಗಳನ್ನು ಹೇಳುತ್ತಿದ್ದೇನೆ .... ಅನುಭವದ ಗರಿಕೆ ಮತ್ತು ಆಲೋಚನಾ ವಿಧಾನದ ವಿಶಿಷ್ಟ ನೆಲೆಯಿಂದ ಅಭಿವ್ಯಕ್ತಿಗೆ ಹೊಸ ಆಯಾಮ ಒದಗಿಸುತ್ತಿರುವ ಸತ್ಯಾನಂದರ 'ಜಾಜಿ ಮಲ್ಲಿಗೆ' ಕವನ

ಸಂಕಲನವು ಒಂದು ಸಮರ್ಥ ಸೇರ್ಪಡೆಯಾಗಿದೆ' ಎಂದು ಅಭಿಪ್ರಾಯಪಡುವುದು ಈ ಸಂಕಲನಕ್ಕೆ ಸಿಕ್ಕಿಸಿದ ಗರಿಯಾಗಿದೆ.

ಪುಟ್ಟ ಗುಡಿಸಲುಗಳಲ್ಲಿ ಕೆಟ್ಟ ಕನಸುಗಳಿಲ್ಲ
ಮನಸು ಕನಸುಗಳಲ್ಲಿ ಜಾಜಿ ಮಲ್ಲಿಗೆ
ಸತ್ತ ನರಗಳ ಸುತ್ತ ಹಸಿದ ಹಾವುಗಳಿಲ್ಲ
ಟೊಂಗೆ ಟೊಂಗೆಯ ತುಂಬ ಬಿರುವ ಮೊಗ್ಗೆ

ಬೈಯುವುದೇ ಬಂಡಾಯ ಕವ್ಯದ ಕರ್ಮವೆಂದು ಹಲವರು ತಿಳಿದಂತಿದೆ. ಇಲ್ಲಿ ನವುರತೆಗೂ, ಸೊಕ್ಷ್ಮತೆಗೂ ತನ್ನದೇ ಆದ ವಾಸನೆ ಇದೆ, ರುಚಿಯಿದೆ, ಇಲ್ಲಿ ಬಡತನವಿದೆ, ಗ್ರಂಥ ತೀಡುವಂತಹ ಜಗಳವೂ ಇದೆ. ನೋವಿದೆ, ಸಂಕಟವಿದೆ. ಆದರೆ ಬದುಕು ಹಸನಾಗಿದೆ, ಹೊಲಸಾಗಿಲ್ಲ, ಅಲ್ಲಿ ಕೊಳಕುತನ ವಿಲ್ಲ, ಹಾವಿನ ವಿಷವಿಲ್ಲ, ಹೂವಿನ ಸುವಾಸನೆಯಿದೆ. ಬದುಕಿನ ಚೇತನದ ಚಿಲುಮೆ ಚಿಮ್ಮುತ್ತಿದೆ. 'ಪ್ರೀತಿಯಂಥಾ ವಸ್ತು ಜಗದಲ್ಲಿ ಕಾಣೆ' ಎಂಬ ಸುಖವಿದೆ ಅದು ಜೀವನವನ್ನು ಸಹ್ಯಾವನ್ನಾಗಿಸುತ್ತದೆ; ಸಂತೋಷಗೊಳಿಸುತ್ತದೆ. ಇಂತಹ ನವುರಾದ ಭಾವನೆಗಳ ನಡುವೆಯೂ ಹರಳು ಕಡಿದಂತೆ. [೫೯]

ವರ್ಗ ವರ್ಣಗಳ ಕುಸ್ತಿಯಲಿ
ಜಯಕ್ಕಾಗಿ ಸೆಣಸಾಡಿ
ರಾತ್ರೋರಾತ್ರಿ ನೇಣೇರುವ
ಬೆಂಜಾಯಿನ್ ಮೊಲಾಯಿಸರ ಮಧ್ಯೆ ನೀನು
ನೆನಪಾಗುವುದಿಲ್ಲ ಗೆಳತಿ

ಎಂದು ತೀವ್ರ ವಿಷಾದದಿಂದ ಕವಿ ಹಾಡುತ್ತಾನೆ. ಅವಳ ಉಕ್ಕುವ ಹೃದಯ ಅವನಿಗ ಉಮೇದಿಯನ್ನು ತರುವುದಿಲ್ಲ. ಅವಳ ಹೊಳೆಯುವ ಕಣ್ಣುಗಳ ಕಾಂತಿ ಆತನನ್ನು ಕೋರೈಸುವುದಿಲ್ಲ. ಈ ಹೋರಾಟದಲ್ಲಿ ಅವಳು ಮೇನಕೆಯಂತೆ ಕಾಮದ ಗೊಂಬೆಯಾದರೂ ಆತ ವಿಶ್ವೇಯಿತ್ರನಾಗುವುದಿಲ್ಲ. ಏಕೆಂದರೆ ಸ್ವಂತದ ಸುಖಕ್ಕಾಗಿ ಹೋರಾಡದ ಕಾವನ್ನು ತಣ್ಣನೆಗೊಳಿಸುವುದರಲ್ಲಿ ಆತನಿಗೆ ಆಸಕ್ತಿಯಿಲ್ಲ.

[illegible]

ವಿಮೋಚನೆಗಾಗಿ ಒದ್ದಾಡುತ್ತಿರುವ ಅನೇಕ ನಿಸ್ಸಾಹಾಯಕ ಮುಖಗಳು ಅವನ ಗೆಳತಿಯ ಮುಖವನ್ನು ಮುಸಕಾಗಿಸುತ್ತವೆ. ತನ್ನ ಪ್ರೀತಿಯ ಹುಡುಗಿಯನ್ನು 'ಆತ' ಮಣ್ಣಲ್ಲಿ ಬೆರೆತು ಕ್ರಾಂತ್ಯಾಗಿ ಸಿಡಿದು ತನ್ನಲ್ಲಿ ಒಂದಾಗಲು ಆಹ್ವಾನಿಸುತ್ತಾನೆ, ವರ್ಗ-ವರ್ಣಗಳ ಹಾವಳಿಯಲಿ, ಜಾತಿ ಧರ್ಮದ ಚಕ್ರವ್ಯೂಹದಲಿ ಮಲ್ಲಿಗೆಯ ಅವಳೆದೆ ಸಿಕ್ಕು ಹೋಗದ ಮುನ್ನ 'ಅಕ್ಕಾ ಅವಳನ್ನು ಹುಡಕಾಡಿ ಕೊಡಬಾರೆ' ಎಂದು ಅಕ್ಕನನ್ನು ಕೇಳಿಕೊಳ್ಳುತ್ತಾನೆ. ಇತಿಹಾಸದ ಗರ್ಭಕ್ಕೆ 'ಬಿಲ್ಲು ಬಾಣವ ಹೂಡಿ' ಅನ್ಯಾಯಕೊಳ್ಳಗಾದ ಅಬಲೆಯರನ್ನು 'ಹದ್ದುಗಳ ಹಾವಳಿ ತಡೆಯೋಣ ಎದೆಮೆಟ್ಟ' ಎಂಬಂತಹ ಸಾಲುಗಳೆಲ್ಲ ಕವಿಯ ವೈಯಕ್ತಿಕ ಸಖ-ಸಖಿಯರ ನಿಲ್ಲದೆಯೆ ಕ್ರಾಂತಿಯಾಗಿ. ಸ್ತ್ರೀಪರ ನಿಲುವುಗಳಾಗಿ ಮಾರ್ಪಡುವುದು ಸತ್ಯಾನಂದರ ಪ್ರೀತಿಯ ಕವಿತೆಗಳ ವಸ್ತುವಾಗಿ ರೂಪುಗೊಂಡದ್ದು ಒಂದು ವಿಶಿಷ್ಟತೆಯನ್ನು ಕಾಯ್ದುಕೊಂಡಿದೆ.

‘ಕಾಗೆಗೇನು?
ಎತ್ತಿನ ಬೆನ್ನ ಮೇಲಾದ ಹುಣ್ಣು
ಕುಕ್ಕುವುದೇ ಹುಟ್ಟುಗುಣ
ಕ್ಷಣಿಕ ಹಿತಕ್ಕಾಗಿ ಕುಕ್ಕಿಸಿಕೊಳ್ಳುವುದೇ ಇದರ ಧರ್ಮ
ಅನ್ನವ ಕಾಲವೊಂದಿತ್ತು : [೩೦]

ಎಷ್ಟೇ ಕಷ್ಟ - ನೋವುಗಳು ಬಂದರೂ, ಶೋಷಣೆಯಾದರೂ ಎಲ್ಲವನ್ನು ಸಹಿಸಿಕೊಳ್ಳುವ ಕಾಲವೊಂದಿತ್ತು. ಆದರೆ ಈಗ ಕಾಲಬದಲಾಗಿದೆ. ಅವುಗಳ ವಿರುದ್ಧ ಜನರು ಎದೆ ಸೆಟೆಸಿ ನಿಂತು ಪ್ರತಿಭಟನೆ ಮಾಡಿ ತಮ್ಮ ಹಕ್ಕನ್ನು ಪಡೆಯುವರು.

ಕೂಳಿಲ್ಲ ತಿನ್ನಲು
ನೀರಿಲ್ಲ ಕುಡಿಯಲು
ಸರದಿ ಮೇಲೆ ಸರದಿ
ಬಡರೈತ ಕೂಲಿ ಕಾರ್ಮಿಕರ
ಆತ ಹತ್ಯೆಗಳ ಗೋಳು
- - - - - - - - - - - -
ನೋಡೇ ಹುಡುಗಿ

ಇಂಥವುಗಳ ಮಧ್ಯ
ಎಲ್ಲೆಲ್ಲೂ ಹಾರುತಿದೆ
ಸುವರ್ಣ ಮಹೋತ್ಸವದ ಧ್ವಜ [೬೧]

ಸ್ವಾತಂತ್ರ್ಯ ಸಿಕ್ಕು ಐವತ್ತು ವರ್ಷಗಳಾಯಿತು. ಎಲ್ಲಿ ನೋಡಿದರು ಸಮಸ್ಯೆಗಳು, ಬಡತನ, ದಾರಿದ್ರ್ಯ, ಅಸಮಾನತೆ, ಶೋಷಣೆ, ಭೇದ-ಭಾವ, ತಿನ್ನಲು ಬಡವರಿಗೆ ಕೊಳಲ್ಲ, ಕುಡಿಯಲು ನೀರು ಸಿಗುತ್ತಿಲ್ಲ. ಬಡ ರೈತರು, ಕಾರ್ಮಿಕರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಇಂಥವುಗಳ ಮಧ್ಯೆ ಸುವರ್ಣ ಮಹೋತ್ಸವದ ಧ್ವಜ ಹಾರುತ್ತಿದೆ. ಎಂದು ಕವಿ ಬೇಸರ, ಕೋಪ, ನೋವಿನಿಂದ ಹಾಡಿದ್ದಾರೆ.

ಸತ್ಯಾನಂತ ಪಾತ್ರೋಟರು ಬಂಡಾಯ ಕವಿಯಾಗಿ ಅದರ ಉದ್ದೇಶಗಳನ್ನು ತಮ್ಮ ಕವಿತೆಗಳಲ್ಲಿ ಸಾರಿದ್ದಾರೆ, ಬದುಕಿನ ಮೇಲಿನ ಪ್ರೀತಿಗಾಗಿ, ಆ ಬದುಕನ್ನು ಸುಂದರಗೊಳಸುವ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಇಂದಿನ ಸಮಾಜದಲ್ಲಿನ ಕೊಳಕನ್ನು ತೋರಿಸುವ ಪ್ರಯತ್ನವನ್ನು ಮಾಡಿದ್ದಾರೆ, ಮತ್ತು ಅದನ್ನು ಕುರಿತು ಬೇಸರ, ನೋವನ್ನು ವ್ಯಕ್ತ ಪಡಿಸಿದ್ದಾರೆ.

೩.೪ ನೋವಿನನುಭಾವಗಳಲ್ಲಿ ಒಂದಾದ ಪ್ರೀತಿ

ವ್ಯಕ್ತಿ ಜೀವನದಲ್ಲಿ ನೋವು ನಲಿವು ಸಹಜ. ಒಂದರ ನಂತರ ಒಂದು ಬರುತ್ತಲೇ ಇರುತ್ತವೆ. ಅನೇಕರು ತಮ್ಮ ಜೀವನದಲ್ಲಿ ನೋವನ್ನೇ ಹೆಚ್ಚು ಅನುಭವಿಸಿ, ಬಳಲಿದ್ದನ್ನು ಕಾಣಬಹುದು. ಎಲ್ಲವನ್ನು ಸಹಿಸಿಕೊಂಡು ಬದುಕುತ್ತಿರುವವರನ್ನು ಹಾಗೂ ಅದರ ವಿರುದ್ಧ ಸಿಟ್ಟನ್ನು ವ್ಯಕ್ತಪಡಿಸುತ್ತಿರುವವರನ್ನು ಕಾಣಬಹುದು. ವ್ಯಕ್ತಿಯು ತನಗೆ ಪ್ರೀತಿಪಾತ್ರವಾದುದನ್ನು ಪಡೆಯಲು, ಸುಖಕ್ಕಿಂತಲೂ ನೋವನ್ನೇ ಹೆಚ್ಚು ಅನುಭವಿಸಬೇಕಾಗುತ್ತದೆ. ಆದ್ದರಿಂದ ನೋವಿನನುಭಾವಗಳಲ್ಲಿ ಪ್ರೀತಿ ಒಂದಾದುದನ್ನು ಗುರುತಿಸಬಹುದು, ಪಾತ್ರೋಟರ ಕವಿತೆಗಳಲ್ಲಿ ಇದು ಸುಂದರವಾಗಿ ವ್ಯಕ್ತವಾಗಿರುವುದನ್ನು ಗಮನಿಸಬಹುದು.

ನಿನ್ನ ನಗೆಯ ಮೊಗವ ಕಂಡು
ನೂರು ನೋವು ಮರೆಯುವೆ

ಎದುರಾಗುವ ಸಾಗರಕ್ಕೆ
ಎದೆಯ ಒಡ್ಡಿ ನಡೆಯುವೆ

ನಿನ್ನ ಚೆಲುವ ಮಾತು ಕೇಳಿ
ಕಷ್ಟ ಕಟ್ಟಿ ಎಸೆಯುವೆ
ಕಲ್ಲು ಮುಳ್ಳು ಹಾದಿಯಲ್ಲಿ
ಹೂವು ಆಗಿ ಅರಳುವೆ [೬೨]

'ನಿನ್ನದೆಂಥ ಪ್ರೀತಿಯೆ'.. ಎಂಬ ಕವಿತೆಯಲ್ಲಿ ಕವಿಯು ತನ್ನ ಪ್ರೀತಿಯ ಚೆಲುವೆಯ ಮಾತು, ನಗು, ಕಣ್ಣು, ಅವಳಿಡುವ ಹೆಜ್ಜೆಗಳನ್ನು ಪ್ರೀತಿಯಿಂದ ವರ್ಣಿಸುತ್ತ, ಅವಳ ಈ ಚೆಲುವಿನಿಂದ ತನ್ನ ಜೀವನದಲ್ಲಿರುವ ಅನೇಕ ನೋವು, ಕಷ್ಟಗಳನ್ನು ಮರೆಯುವೆ. ಏನೇ ಎದುರಾದರೂ ಧೈರ್ಯದಿಂದ ಎದುರಿಸುವೆ. ಚೆಲುವೆಯ ಪ್ರೀತಿಯಿಂದ ಮಸಣಕ್ಕೂ ಜೀವ ಬರುವುದು ಎಂದು ಪ್ರೀತಿಯ ಚೆಲುವೆಯನ್ನು ಮನದಾಳದಿಂದ ವರ್ಣಿಸಿದ್ದಾರೆ. ಪ್ರೀತಿಗೆ ಅಗಾಧವಾದ ಶಕ್ತಿಯಿದೆ, ಎಲ್ಲೆಡೆಯೂ ಚೈತನ್ಯ, ಕ್ರಿಯಾಶೀಲತೆಯನ್ನು ತುಂಬುವ ಶಕ್ತಿಯಿದೆ. ಪ್ರೀತಿಯು ನೋವಿನನುಭಾವಗಳಲ್ಲಿ ಒಂದಾದರೆ, ಆ ಎಲ್ಲ ನೋವುಗಳನ್ನು ಮರೆಸುವಂತಹ ಸಾಮರ್ಥ್ಯ ಪ್ರೀತಿಗಿದೆ ಎಂಬ ಮಾತು ಕವಿತೆಯಲ್ಲಿ ವ್ಯಕ್ತವಾಗಿದೆ.

ಹೇಗೆ ಹೇಳಲಿ ಗೆಳತಿ
ನನ್ನೆದೆಯ ಮಾತು
ಒದ್ದಾಡಿ ತಳಮಳಿಸಿ
ಹೇಳಲೋಡೋಡಿ ಬರುವೆ ದಿನವು

ಆಗ, ಎದುರಾಗುತ್ತಿ ನೀನು
ಗೆಲುವಿನಲಿ ನಲಿ ನಲಿದು
ಕುದುರೆ ಹತ್ತುವೆ ನಾನು [೬೩]

ಕವಿಯು ತನ್ನ ಎದೆಯಾಳದಲ್ಲಿನ ಪ್ರೀತಿ ಹಾಗೂ ನೂರಾರು ನೋವುಗಳನ್ನು ಹೇಳಲಾಗದೆ, ಒಳಗೊಳಗೆ ಒದ್ದಾಡುತ್ತಿಹನು. ತನ್ನ ಎದೆಯ

[illegible]

ಮಾತುಗಳನ್ನು ಗೆಳತಿಯ ಮುಂದೆ ಹೇಳಲು ಓಡಿ ಬರಲು, ಎದುರಾಗುವ ಗೆಳತಿಯ ನಗುವ ಕಂಡು ಕವಿಯಲ್ಲಿ ಉತ್ಸಾಹ ತುಂಬುವುದು. ಆದರೆ ಇಲ್ಲಿ ಎಲ್ಲೆಡೆಯಲ್ಲಿ ಜಾತಿ-ಮತ, ಭೇದ-ಭಾವವನ್ನು ಬೆರೆಸಿರುವ.. ಇಂತಹದರಲ್ಲಿ ನನ್ನ ಎದೆಯ ಮಾತನ್ನು ಹೇಗೆ ಹೇಳಲಿ? ಎಂದು ಪ್ರಶ್ನಿಸಿದ್ದಾರೆ.

ಭೂಮಿಯ ಆಳಕ್ಕೆ
ಆಕಾಶದಗಲಕ್ಕೆ
ಇಳಿದಿಳಿದು, ಬೆಳೆಬೆಳೆದು
ನೋವಿನೆದೆಗಳಿಗೆಲ್ಲ ಜೀವರಸವಾಗಲು
ನೀನೆಂದು ಬರುವಿ ಹೇಳು ಚೆಲುವಿ
ನಿನಗಾಗಿ ಕಾದಿರುವೆ ಮರಭೂಮಿಯಲ್ಲೆ [೩೪]

ಕವಿ ಇಲ್ಲಿ ತನ್ನ ಗೆಳತಿಯ ಬರುವಿಗಾಗಿ, ಅವಳ ನೆನಪಿನಲ್ಲೇ ಕಾದು ಕುಳಿತಿರುವನು. ಜೀವನದಲ್ಲಿ ಚೈತನ್ಯ ತುಂಬಲು, ಹೊಸ ಬೇರು ಚಿಗುರಲು ನೀನೇಕೆ ಬರುತ್ತಿಲ್ಲ ಎಂದು ಪ್ರಶ್ನಿಸುತ್ತಾನೆ, ಕವಿ ತನ್ನ ನೋವುಗಳೆಲ್ಲವುಗಳನ್ನು ನಿವಾರಿಸಿ, ಜೀವ ತುಂಬಲು ಅವಳೆಂದು ಬರುವಳೆಂದು ಮರುಭೂಮಿಯಲ್ಲಿರುವ ಹಾಗೆ ಕಾದು ಕುಳಿತಿರುವನು.

ಒಣಗಿರುವ ಮರ ಬಳ್ಳಿ
ಹೂ, ಹಸಿರು ಹೊರುವವು
ನರಳುವ ಗುಡಿಸಲು
ನಗುಸೂಸಿ ನಲಿವವು

ನಿನ್ನ ನಗು ಕಂಡಾಗ
ಕೊಳೆತು ಹೂತ್ಹೋಗಿರುವ
ಮಣ್ಣ ಕಣ ಕಣದಲ್ಲಿ
ಹೊಸಕವಿತೆ ಹುಟ್ಟುವುದು [೩೫]

ಗೆಳತಿಯ ನಗು ಇರುಳನ್ನು ಹಗಲಾಗಿಸುವುದು, ಸುಡು – ಸುಡು ಬಿಸಿಲನ್ನು ಬೆಳದಿಂಗಳಾಗಿಸುವುದು, ಒಣಗಿದ ಮರ, ಬಳ್ಳಿ ಹಸಿರನ್ನು ಹೊರುವವು, ನೋವು

[illegible]

ನಲಿವಾಗುವುದು, ಎಂದು ಕವಿ ಹಾಡಿದ್ದಾನೆ. 'ಉರಿಯುತಿಹ ನನ್ನೊಡಲು' ಎಂಬ ಈ ಕವನದಲ್ಲಿ ಗೆಳತಿಯ ನಗು ಉರಿಯುತಿಹ ನನ್ನೊಡಲನ್ನು ಹೂವಾಗಿ ಅರಳಿಸುವುದು, ನೋವುಗಳೆಲ್ಲವನ್ನು ಈ ನಗು, ಅವಳ ಪ್ರೀತಿ ಮರೆಸಿಬಿಡುವುದು ಎಂದು ಎದೆಯಾಳದ ಮಾತನ್ನು ವ್ಯಕ್ತಪಡಿಸಿದ್ದಾರೆ.

ಅಲ್ಲಿ ಇಲ್ಲಿ ಹುಡುಕುತಿರುವೆ
ಎಲ್ಲಿ ಇರುವೆ ಹೇಳು
ಹುಡುಕುವಲ್ಲಿ ಕಳೆಯಿತದೋ
ಹೇಗೆ ಏನೋ ಇರುಳು
– – – – – – – – – – – –
ನೋವಿನೆದೆಗೆ ಗೆಲುವ ತರುವ
ಚೆಲುವ ನಿನ್ನ ಸ್ನೇಹವು
ದೇವ ದೈವ ಸ್ವರ್ಗಕ್ಕಿಂತ
ಮಿಗಿಲು ಹೃದಯದೊಲುವೆಯು [೬೬]

'ನಗೆಯ ಹೂ' ಎಂಬ ಕವಿತೆಯಲ್ಲಿ ಕವಿಯು ಗೆಳತಿಯ ನಗೆಯ ಹೂವನ್ನು ಹುಡುಕುತಿರುವನು. ಗೆಳತಿಯನ್ನು ಹುಡುಕುವಲ್ಲೇ ಕವಿಯು ನೋವುಗಳ ಇರುಳನ್ನು ಕಳೆಯುತಿರುವನು. ಗೆಳತಿಯ ಸ್ನೇಹವು ಎದೆಯ ನೋವಿಗೆ ಗೆಲುವು, ನಲಿವು ತರುವುದು ಹಾಗೂ ಅವಳೊಲುಮೆ ದೇವರು, ಸ್ವರ್ಗಕ್ಕಿಂತ ಮೀಗಿಲಾಗಿಹುದು. ಹೇಗೆ ಇಲ್ಲಿಯೂ ಕವಿಯು ಗೆಳತಿಯ ನಗೆಯ ಹೂವಲ್ಲಿ ತನ್ನೆಲ್ಲ ನೋವುಗಳನ್ನು ಮರೆಯುತಿರುವನು.

ನನ್ನ ಮನಸ್ಸಿನ ತುಂಬ
ಕಣ್ಣ ಕನಸಿನ ತುಂಬ
ನೀನೇ ತುಂಬಿರುವಾಗ
– – – – – – – – – –
ನನ್ನ ಎದೆಯೊಳಕ್ಕೆ ಇಳಿದಿಳಿದು
ನೀ ಬಿಟ್ಟ ಬೇರೀಗ ಮರಹೊತ್ತಿದೆ
ಸೋತ ಮೈಮನಗಳಿಗೆ ನೆರಳಾಗಿದೆ

ಇದಕ್ಕಿಂತ ಹೆಚ್ಚೇನು ಬೇಕು ಸಾಕ್ಷಿ!
ನನ್ನ ಕಾವ್ಯಾಕ್ಷಿ ! [೭೭]

ತನ್ನ ಮನಸ್ಸಿನ ತುಂಬ, ಕಣ್ಣ ಕನಸಿನ ತುಂಬ ತುಂಬಿರುವ ಗೆಳತಿಯೇ, ನೀ ನನ್ನ ಮರೆತರೂ ನಾ ನಿನ್ನ ಮರೆಯುವುದಿಲ್ಲ ಎಂದು ಕವಿ ಇಲ್ಲಿ ತನ್ನೆದೆಯಾಳದ ಮಾತನ್ನು ನುಡಿದಿದ್ದಾನೆ, ಗೆಳತಿ ಚಿತ್ತಿದ ಪ್ರೀತಿ ಈಗ ಮರವಾಗಿರುವುದು, ಅದು ಕವಿಯ ಸೋತ ಮೈಮನಗಳಿಗೆ, ನೋವುಗಳಿಗೆ ನೆರಳಾಗಿರುವುದು. ಹೀಗೆ ಇಲ್ಲಿ ಕವಿಯು ತನ್ನ ನೋವುಗಳೆಲ್ಲವುಗಳನ್ನು ಗೆಳತಿ ಚಿತ್ತಿದ ಪ್ರೀತಿಯ ನೆರಳಲ್ಲಿ ಮರೆಯುತಿಹನು.

ಸುಖದ, ನಗುವಿನ, ನಲಿವಿನ ದಿನಗಳಿಗಾಗಿ ಕಾಯುತ್ತಿರುವ ಕವಿಯು 'ನಾಳೆಯ ಸೂರ್ಯನಿಗಾಗಿ' ಎಂಬ ಕವನದಲ್ಲಿ –

ಸುಖದ ದಿನಗಳು
ಎಂದು ಬರುತ್ತವೆಯೋ ನನಗಿನ್ನು
ತಿಳಿದಿಲ್ಲ ಸಖಿ
– – – – – – – – – – –
ಹುಟ್ಟಿದ ದಿನದಿಂದ ಇಲ್ಲಿಯವರೆಗೂ
ನನ್ನ ಪುಟ್ಟ ಎದೆಯಲ್ಲಿ
ನೋವುಗಳ ವೈವಾಟು
ನಾನೀಗ ಅವುಗಳ ಬಂದಿ, ಖೈದಿ [೭೮]

ರಾಮನ ಬರವಿಗಾಗಿ ಕಾಯುತ್ತ ಕುಳಿತ ಶಬರಿಯಂತೆ ಕವಿಯು ತನಗೆ ಸುಖದ ದಿನಗಳು ಎಂದು ಬರುತ್ತವೆಯೇ ಎಂದು ಕಾಯುತ್ತ ಕುಳಿತಿರುವನು. ಹುಟ್ಟಿನಿಂದ ಇಲ್ಲಿಯವರೆಗು ನೋವುಗಳ ಮಧ್ಯೆಯೇ ಬೆಳೆದು, ಈಗ ಅವುಗಳ ಖೈದಿಯಾಗಿರುವೆ, ಯಾರಿಗೆ ಹೇಳಬೇಕೆಂದು ತಿಳಿಯುತ್ತಿಲ್ಲ, ಏಕೆಂದರೆ ಇದು ಒಂದು ದಿನದ ಮಾತಲ್ಲ, ದಿನವೂ ಸತ್ತರೆ ಅಳುವವರಾರು? ಎಂದು ಕವಿ ತನ್ನ ನೋವನ್ನು ತೋಡಿಕೊಂಡಿದ್ದಾನೆ. ಕೇಳಿಯೂ ಕೇಳದಂತಿರುವ ಸಖಿಯ ಹತ್ತಿರ ಬರಲು, ಅವಳಿರದಿರುವದನ್ನು ಕಂಡು, ದಿಕ್ಕೆಟ್ಟು ಬಿದ್ದು ಮತ್ತೆ ಸಾವರಿಸಿಕೊಂಡು ಕವಿ ನಾಳೆಯ ಸೂರ್ಯನಿಗಾಗಿ ಏಳುತ್ತಾನೆ.

ಕ್ಷಣಕ್ಕೊಂದು ನೋವು
ಅದು ಸತ್ತಕ್ಷಣ ಮತ್ತೊಂದು ನೋವು
ಮೈತುಂಬ ಗಾಯಗಳು
ಎದೆ ತುಂಬ ನೋವುಗಳು
ಹೇಗೆ ಹೇಳಲಿ ಹೇಳು
ನನ್ನೊಳಗಿನ ನೋವು [೧೯]

ನೋವಿರದ, ನೋವುಗಳರಿಯದವರು ನೊಂದ ನೋವಿನ ಪಾಡನ್ನು ಅವರೇನು ಬಲ್ಲರು? ಕ್ಷಣ-ಕ್ಷಣಕ್ಕೊಂದು ನೋವು, ಕಾಡುತಿಹವು ಒಂದರ ನಂತರ ಮತ್ತೊಂದು. ನೋವುಗಳೇ ತುಂಬಿರುವಾಗ ಎದೆ ತುಂಬ, ಎದೆಯೊಳಗಿನ ನೋವನ್ನು ಯಾರಿಗೆ ಹೇಳಲಿ, ಹೇಗೆ ಹೇಳಲಿ? ಎಂದು ಕವಿ ಇಲ್ಲಿ ನೋವಿನಿಂದ ನುಡಿದಿದ್ದಾನೆ. ನೋವನ್ನು ಕೇಳುವವರಾರಿಲ್ಲ, ಕಂಡರೂ ನೋಡುವವರಾರಿಲ್ಲ ಎಲ್ಲರೂ ಹಗಲು ವೇಷಧಾರಿಗಳು ಎಂದು ಬೇಸರ, ಕೋಪವನ್ನು ವ್ಯಕ್ತಪಡಿಸಿದ್ದಾನೆ.

ಈಗಾದ ನೋವು ದುಃಖಗಳ ಮಧ್ಯ
ನೀನೂ ಹೀಗೆ
ಮೌನದಲಿ ಇದ್ದು

ನನ್ನನ್ನು ಕೊಲ್ಲದಿರು ಸಖಿ
ನಿನ್ನ ನಿಸ್ತೇಜ ಕಣ್ಣು
ನಗುವಿರದ ಮುಖ
ನೋಡಲಾಗುವುದಿಲ್ಲ ನನಗೆ [೨೦]

ಸಖಿಯ ಮೌನ, ನಿಸ್ತೇಜ ಕಣ್ಣು, ನಗುವಿರದ ಮುಖವನ್ನು ಕಂಡು ಕವಿಯು – ಈಗಾದ ನೋವು, ದುಃಖಗಳ ನಡುವೆ ನಾನು ಎಂದೋ ಕೊಚ್ಚಿಕೊಂಡು ಹೋಗಬೇಕಾಗಿತ್ತು, ಬದುಕಿದ್ದೆ ಹೆಚ್ಚು ಅಂತಹದರಲ್ಲಿ ನೀನೂ ಹೀಗೆ ಮೌನದಲ್ಲಿ ನನ್ನನ್ನು ಕೊಲ್ಲಬೇಡ. ಎಂದು ಸಖಿಯಲ್ಲಿ ವಿನಂತಿಸಿಕೊಳ್ಳುತ್ತಿದ್ದಾನೆ.

ಸಾವು, ನೋವು
ನನ್ನ ಬದುಕಿನಲಿ – ಎಬ್ಬಿಸಿವೆ ಬಿರುಗಾಳಿ
ನಗು ಸಂತಸದ ಬದಲು
ಕಣ್ಣೀರು ಕೂಳು ಗುಡಿಸಲಿನಂಗಳದಲಿ [೨೧]

ಬೆಳಕಿನ ಹಬ್ಬ, ಕತ್ತಲನ್ನು ಕಳೆದು ಜ್ಞಾನವೆಂಬ ಬೆಳಕನ್ನು, ಸಂಪತ್ತನ್ನು ಹರಡುವ ಹಬ್ಬ ದೀಪಾವಳಿ. ಆದರೆ ಅದು ಬಡವರ ಕಣ್ಣೀರ ಒರೆಸದೇ, ಅವರ ಬದುಕಿಗೆ ಬೆಳಕಾಗದ ಹಬ್ಬ, ಸಾವು ನೋವು, ಕಣ್ಣೀರು, ಹಸಿವುಗಳೇ ತುಂಬಿರುವ ಗುಡಿಸಲಿನಂಗಳದಲ್ಲಿ ಬೆಳಕನ್ನು ತುಂಬದ ದೀಪಾವಳಿ ಹಬ್ಬವಿಂದು ಬಂದಿದೆ. ಈ ದೀಪಾವಳಿಗಿಂತಲೂ ನೀನೇ ನನಗೆ ಹೆಚ್ಚು ಎಂದು ಕವಿ ಸಖಿಯನ್ನು ಕುರಿತು ಹಾಡುತ್ತ, ಶುಭವಾಗಲಿ ನಿನಗೆ ಶುಭವಾಗಲಿ ಎಂದು ಹಾರೈಸುತ್ತಾನೆ.

ಸುತ್ತ ಮುತ್ತ ಕೊಳ್ಳಿ ದೆವ್ವಗಳು
ಚಕ್ರಾಕಾರವಾಗಿ ತಿರುಗುವ
ಬರುಡೆ ಭೂತಗಳು
ಜಂಟಿಯಲಿ ಮಲಗಿ ಬೀಳಲು
ಹೊಂಚು ಹಾಕಿ ಕುಳಿತಿವೆ ಕಾಯ್ದು [೨೨]

ಅನೇಕರು ನಿತ್ಯ ಬದುಕಿನ ಜೊತೆಗೆ ಯುದ್ಧ ಮಾಡುತ್ತಿದ್ದಾರೆ. ಅಳಬೇಕೆಂದರೆ ಅಳಲಾಗದ ಸ್ಥಿತಿ ನಗಬೇಕೆಂದರೆ ನಗಲಾರದ ಸ್ಥಿತಿ. ಅಳು – ನಗು ನೋವು–ನಲಿವುಗಳೆಲ್ಲವುಗಳನ್ನು ಮುಚ್ಚಿಕೊಂಡು ಗೂಡು ಕಟ್ಟಲು ನಿತ್ಯ ಬದುಕಿನೊಂದಿಗೆ ಯುದ್ಧ ಸಾಗುತಿಹುದು. ಇಂತಹದರ ಮಧ್ಯೆ ಕೊಳ್ಳಿ ದೆವ್ವಗಳು ದೋಚಲು, ಶೋಷಣೆ ಮಾಡಲು ಹೊಂಚು ಹಾಕಿ ಕುಳಿತಿವೆ.

ನಿನ್ನ ಕಂಡ ಗಳಿಗೆ
ಹಸಿರಾಗುತ್ತದೆ ಬಯಲು
ಬಿಸಿಲಾಗುತ್ತದೆ ನೆರಳು
ಇರುಳಾಗುತ್ತದೆ ಹಗಲು

ನಿನ್ನ ಕಂಡ ಗಳಿಗೆ
ಕಷ್ಟಗಳು ಕರಗಿ
ಮರೆಯಾಗುತ್ತವೆ ನೋವು
ಬೇವು – ಬದುಕು – ಬೆಲ್ಲವಾಗುತ್ತದೆ [೨೩]

ಸಖಿಯನ್ನು ಕಂಡಾಕ್ಷಣ ಬರುವ ಮನಸ್ಸಿನ ಭಾವನೆಗಳನ್ನು ಕವಿ 'ನಿನ್ನಕಂಡ ಆ ಗಳಿಗೆ' ಎಂಬ ಕವಿತೆಯಲ್ಲಿ ವ್ಯಕ್ತಪಡಿಸಿದ್ದಾನೆ. ಸಖಿಯನ್ನು ಕಂಡಾಗ ಕವಿಗೆ ಕನಸು ಕಡಲಾಗುವುದು, ಮನಸ್ಸು ಮುಗಿಲಾಗುವುದು. ಬಯಲು ಹಸಿರಾಗುವುದು, ಬಿಸಿಲು ನೆರಳಾಗುವುದು, ಇರುಳು ಹಗಲಾಗುವುದು, ಎಲ್ಲ ಕಷ್ಟಗಳೂ ಕರಗಿ, ನೋವುಗಳೆಲ್ಲವು ಮರೆಯಾಗುವವು.

ಜೀ. . . . . ಜೀ ಎನ್ನುವ ಷಂಡರಿಗೆ
ಉಫೇ . . . . ಉಫೇ ಎನಿಸಿಕೊಳ್ಳವ ಭಂಡರಿಗೆ
ನುಂಗಲಾರದ ತುತ್ತು
ಕಾರಣ
ನಮ್ಮೆದೆಯಲ್ಲಿ
ನಿಗಿ ನಿಗಿ ಕೆಂಡ
ಹೃದಯಾಂತರಾಳದಲ್ಲಿ ನೂರು ನೋವಿನ ಹಂದರ
ಆದರೂ :
ಎದೆ ಸೆಟಸಿ ಹೆಡಕು ಮೇಲತ್ತಿ . . . . [೭೪]

ನೋವು ಕಷ್ಟ, ಶೋಷಣೆಗಳಂದಾಗಿ ನಮ್ಮೆದೆಯಲ್ಲಿ ಆಕ್ರೋಶದ ಕೆಂಡ ತುಂಬಿದ್ದರೂ, ಹೃದಯಾಂತರಾಳದಲ್ಲಿ ನೂರು ನೋವುಗಳು ತುಂಬಿದ್ದರೂ ಮುನ್ನುಗುತ್ತಿಹರು.

ಗಿರಿ ಕಂದರ – ಶಿಖರಗಳಲ್ಲಿ
ಹೂವು ಅರಳಲಾರದೇನೆ
ಗಿಡ-ಗಂಟೆ ಮುಳ್ಳುಗಳಲಿ
ಹೂವು ಚಿಗಿಯಲಾರದೇನೆ
ಹೊಳೆ – ಹಳ್ಳ – ಕೊಳ್ಳಗಳಲಿ
ಮೀನು ಈಸಲಾರದೇನೆ
ಮಾವು ಮರ ತೆಂಗುಗಳಲಿ
ಕೋಗಿಲೆ ಹಾಡಲಾರದೇನೆ [೭೫]

ನೋವು, ಹಸಿವುಗಳ ದಾಟಿ ನಗುವು, ಕತ್ತಲ ಗುಡಿಸಲುಗಳ ದಾಟಿ ಬೆಳಕು ಮೂಡುವುದು. ಜಾತಿಭೇಧಗಳು ದೂರ ಸರಿದು ಪ್ರೀತಿ ಎಲ್ಲೆಡೆ ಮೂಡುವುದು ಎಂಬ ಆಶಯವನ್ನು ಕವಿಯು 'ವರ್ಗ-ವರ್ಣ' ಎಂಬ ಕವಿತೆಯಲ್ಲಿ ವ್ಯಕ್ತಪಡಿಸಿದ್ದಾರೆ.

ಅವ್ವನ ನೆರಳುವಿಕೆ
ಅಪ್ಪನ ಎದೆ ನೋವು
ತಮ್ಮನ ಹಸಿರು ಕನಸು
ಗೆಳತಿಯ ಸಪ್ಪೆ ಮುಖ
– – – – – – – – – [೭೬]

ಮನೆಯಲ್ಲಿ ಅಪ್ಪ, ಅವ್ವ, ತಮ್ಮರ ನೋವು, ನರಳಾಟ, ಹಾಗೂ ಗೆಳತಿಯ ಸಪ್ಪೆ ಮುಖ, ಕವಿಯನ್ನು ಚುಚ್ಚುತ್ತಿವೆ. ಎಲ್ಲಿ ಹೋದರೂ ಅವನನ್ನು ಹಿಂಬಾಲಿಸುತ್ತಿವೆ.

ಹುಟ್ಟಿದಾಗಲೇ ಸಾಯಬೇಕಿತ್ತು
ಸಾಯಲಿಲ್ಲ
ದೊಡ್ಡವನಾಗಿದ್ದೇನೆ ಬೆಳೆದು
ಖಂಡಿತ ಈಗಂತೂ
ಸಾಯುವುದಿಲ್ಲ . . . . . . ಬದುಕುತ್ತೇನೆ. [೭೭]

ಒಂದು ದಿನ ಸಂಜೆ
ಅವಳು ನಕ್ಕ ಕುಲು ಕುಲು ನಗೆಯ
ಬರೆ ಸೆಳತಕ್ಕೆ, ಶಾಖಕ್ಕೆ
ಹಿಮಾಲಯದ ಕಷ್ಟ ಕರಿಗಿತ್ತು
– – – – – – – – – – – – – [೭೮]

ಕವಿಯು ತನ್ನ ಕಷ್ಟ-ನೋವುಗಳನ್ನು ಗೆಳತಿಯ ನಗುವನ್ನು ಕಂಡು ಮರೆಯಲು ಪ್ರಯತ್ನಿಸುತ್ತಿರುವನು. ಒಂದು ದಿನ ಸಂಜೆ ಅವಳ ನಗು ಕಷ್ಟಗಳ ಗುಡ್ಡವನ್ನೇ ಕರಗಿಸಿತ್ತು. ಎಂದರೆ ಇನ್ನೊಂದೆಡೆ ಮತ್ತೊಂದು ದಿನ ಮುಂಜಾನೆ ಅವಳ ಅಳುವು ನೋವುಗಳ ಹಂದರವನ್ನೇ ಸುರಿದಿತ್ತು. ಎಂದಿದ್ದಾನೆ.

ಈ ನಾಡ ಮಣ್ಣೇ ಹೀಗೆ
ಒದ್ದು ಹೋಗೋಣ ಬಾ ದೂರ ತೀರಕ್ಕೆ
ಈರ್ವರನು ಒಂದಾಗಿಸುವ
ಒಂದಾಗಿಸಿ ಚುಂಬಿಸುವ
ಹೊಸ ನಾಡಿಗೆ – ಹೊಸ ದಿಗಂತಕ್ಕೆ
ನಾನು – ನೀನು ಆಗಬೇಕು ಈಗ ಹೀಗೆ [೭೯]

'ನಾನು–ನೀನು ಆಗಬೇಕು ಈಗ ಹೀಗೆ' ಎಂಬ ಕವಿತೆಯಲ್ಲಿ ಕವಿ ತನ್ನ ಗೆಳತಿ ಮತ್ತು ತಾನು ಹೇಗೆ ಇರಬೇಕು ಎಂಬುದರ ಕುರಿತು ಆಶಯ ವ್ಯಕ್ತಪಡಿಸಿದ್ದಾನೆ. ಎಲ್ಲ ಈ ನೋವುಗಳನ್ನು, ಕೆಟ್ಟಲೋಕವನ್ನು, ನರಕವನ್ನು ಬಿಟ್ಟು ದೂರ, ಬೇರೆ ಹೊಸ ದಿಕ್ಕಿಗೆ ಹೋಗೋಣ ಬಾ ಎಂದು ಗೆಳತಿಯನ್ನು ಕವಿ ಕರೆಯುತ್ತಿದ್ದಾನೆ.

ಬೇಡಗು, ಬಿನ್ನಾಣ ಕುಡಿ ನೋಟದಲಿ
ನನ್ನ,
ಬೆಂಕಿಯ ಎದೆಯಲ್ಲಿ, ಕೆಂಡದಾ ಕಣ್ಣಲ್ಲಿ
ತಂಗಾಳ ತೀಡುತ, ಹೊಂಗಿರಣ ಹರಡುತ
ಬಣ್ಣ ಬಣ್ಣದ ಹೂಗಳ
ಸರಮಾಲೆ ಕಟ್ಟಿ ಸರದೆಗೆದು ಉಲಿದವಳೆ. . . [೮೦]

ಗೆಳತಿಯ ನಗು, ಕುಡಿನೋಟ, ಅವಳ ಚೆಲುವು ನೆನಪಾಗಿ ಪ್ರತಿದಿನವೂ ಕವಿಯನ್ನು ಕಾಡುತಿವೆ. ನೋವುಗಳೇ ತುಂಬಿದ ಬೆಂಕಿಯೆದೆಯಲ್ಲಿ ತಂಗಾಳ ತೀಡಿ ಎಲ್ಲಿಯೋ ಮಾಯವಾದ ಗೆಳತಿಯ ನೆನಪಿನ ನೋವಲ್ಲಿ ಬಳಲುತ್ತಿದ್ದಾನೆ.

ನಿನ್ನ ಅಗಲಿಕೆ ನೋವು
ಇಂದಿಗೂ ಬರಸಿಡಿಲು
ಆ ಸಿಡಿಲು ಗುಡುಗಾಗಿ
ಈ ಭೂಮಿ
ಬಿರುಕು ಬಿಟ್ಟಿದೆ ಎಲ್ಲೆಲ್ಲು
ಈಗಲೂ

ನನ್ನ ಬಯಲ ಬದುಕಿಗೆ
ನೀನು
ಬೆಳ್ಳಿ ಬೆಡಗು [೮೧]

ಕಥೆ, ಕಾವ್ಯಗಳಿಗೆ ಸ್ಫೂರ್ತಿಯ ಸೆಲೆಯಾಗಿರುವ ಗೆಳತಿ ಕವಿಗೆ ಬೆಳದಿಂಗಳಬಾಲೆ, ಕೊರಳಿನ ಮಾಲೆಯಾಗಿಹಳು, ನೋವಿನಲ್ಲೂ ನಗೆಯ ತುಂಬಿ, ವಿಷದಲ್ಲೂ ಸಿಹಿಯ ತುಂಬಿ ಸಂತಸದ ಸುಗ್ಗಿಯ ತಂದಿದ್ದಳು. ಆದರೆ ಇಂದು ಅವಳ ಅಗಲಿಕೆಯಿಂದ ಕವಿಯ ಬದುಕಿಗೆ ಬರಸಿಡಿಲು ಬಡಿದಂತಾಗಿದೆ, ಭೂಮಿಯೇ ಬಿರುಕು ಬಿಟ್ಟಿದೆ. ಆದರೂ ಕವಿಯ ಬದುಕಿಗೆ ಈಗಲೂ ಅವಳು ಬೆಳ್ಳಿಬೆಡಗು. ಕವಿಯು ಗೆಳತಿ ಅನುಭವಿಸಿದ ನೋವುಗಳನ್ನು ನೋವಿನಿಂದ ನೆನಪಿಸಿಕೊಳ್ಳುತ್ತ, ಅದನ್ನು ಬರೆದು ಹಾಡಲು ಅಕ್ಷರಗಳು ಸಿಗುತ್ತಿಲ್ಲ ಎಂದು ನೋವಿನಿಂದ ನುಡಿದಿದ್ದಾನೆ. ಗೆಳತಿಯ ನಗು, ಚೆಲುವು, ಪ್ರೀತಿಯು ಕವಿಯ ಬದುಕಿಗೆ ಚೈತನ್ಯ, ಅದೇ ಸಿರಿಸಂಪತ್ತಾಗಿತ್ತು. ಆದರೆ ಆ ಪ್ರೀತಿಯ ಅಗಲುವಿಕೆಯು ಕವಿಯನ್ನು ನೋವಿನ ಸಾಗರದಲ್ಲಿ ಮುಳುಗಿಸಿದೆ. ಆದರೂ ಕವಿ ನೋವಿನಲ್ಲೇ, ಅವಳನ್ನು ನೆನಪಿಸುತ್ತ ಮುಂದೆ ಸಾಗುತಿರುವನು.

ನದಿ ಕಾಯುವುದಿಲ್ಲ
ಗಾಳಿ ನಿಲ್ಲುವುದಿಲ್ಲ

ಗೊತ್ತಿಲ್ಲ ನಿಮಗೆ
ನನ್ನ ಅವಳ ಮಾತು
ನನ್ನ ಅವಳ ಕನಸು
ಅವಳೇಕೆ
ನದಿಯಾಗಿ ಗಾಳಿಯಾಗಿ
ಸೇರಬಾರದು ಇಂದು [೮೨]

ಇಂದೇ ಬರುವೆನೆಂದು ಹೇಳಿ ಹೋಗಿದ್ದಾಳೆ ಗೆಳತಿ, ಇನ್ನು ಬಂದಿಲ್ಲ. ಅವಳಿಗಾಗಿ ಕವಿ ಕಾದು ಕುಳಿತಿದ್ದಾನೆ, ನದಿಯ ದಡದಲ್ಲಿ ಅವಳ ಬರುವನ್ನು ಕಾಯುತ್ತ ಕುಳಿತಿದ್ದಾನೆ. ಹುಟ್ಟು-ಸಾವು-ನೋವು ಎಲ್ಲವನ್ನು ಮರೆತು, ನದಿ ಹರಿಯುತ್ತಲೇ ಇದೆ, ಗಾಳಿ ಬೀಸುತ್ತಲೇ ಇದೆ ಆದರೂ ಅವಳಿನ್ನು ಬಂದಿಲ್ಲ. ಅವಳ

ಮಾತು, ಕನಸು, ನೆನಪಿನಲ್ಲಿ ಕಾಯುತಿರುವನು ಇಂದು ಬರುವಳೆಂದು, ನದಿಯಾಗಿ, ಗಾಳಿಯಾಗಿ ಬಂದು ತನ್ನ ಸೇರುವಳೆಂದು ಕಾಯುತಿರುವನು.

ಪ್ರೀತಿಸದವ, ಪ್ರೀತಿಗೊತ್ತಿರದವ ಗವಿಯೊಳಗೆ ಕುಳಿತರೂ ಕವಿಯಾಗಲಾರ, ಸನ್ಯಾಸಿಯೂ ಆಗಲಾರ; ಪ್ರೀತಿ ಬದುಕಿನ ಜೀವಾಳ, ಅದು ಸಾವಿರದ ಕವಿತೆ, ನವೋದಯ, ನವ್ಯ, ದಲಿತ-ಬಂಡಾಯ ಎಲ್ಲದಕ್ಕೂ ಒಡಲು ಕೊಟ್ಟು ಕಡಲಿನಂತೆ ಉಳಿಯುತ್ತದೆ. 'ಬುದ್ಧ ಪ್ರೀತಿಯನ್ನೇ ಹಂಚಿ ಪ್ರೀತಿಯನ್ನೇ ಬೇಡಿದ' –

ಎಲ್ಲವನ್ನು ತಿಳಿಯಲು
ಕತ್ತಲೆಯ ಕಳೆಯಲು
ಪ್ರೀತಿಯೊಂದೇ ಸಾಕು
ಕಾಣಬಹುದೆಲ್ಲೆಡೆ ಪೌರ್ಣಿಮೆಯ ಚಂದಿರ

ನೊಂದ ಎದೆಗೆ ತಂಪು ತೀಡುವ ಪ್ರೀತಿ ಜಾತಿ-ವರ್ಗ-ಅಂತಸ್ತು-ವರ್ಣ ಆಸ್ತಿ-ವಯಸ್ಸುಗಳ ಬೇಲಿ ದಾಟುವ ಸಾಮರ್ಥ್ಯಗಳಿಸಿವೆ. ಮಮತೆಯಿಂದಲೆ ಸಮತೆ, ಅದಕ್ಕಾಗಿಯೇ ಪ್ರೀತಿ ಬಂಡಾಯದ ಶಕ್ತಿಯಾಗುತ್ತಿದೆ. ಕವಿ ಪಾತ್ರೋಟರು ಮತ್ತೆ-ಮತ್ತೆ ಪ್ರೀತಿಯನ್ನು ಹುಡುಕುವುದು, ಕನಸುಗಳನ್ನು ಹೆಕ್ಕುವುದು, ಕವಿತೆಗಳನ್ನು ರಚಿಸುವುದು. ಇದಕ್ಕಾಗಿಯೇ !

"ಹುಡುಕಿ ಕೊಡಬನ್ನಿ ನೋಡೋಣ
ಆ ನನ್ನ ದಿನಗಳನು
ನನ್ನನ್ನು, ನನ್ನ ಕವಿತೆಗಳು
ಪ್ರೀತಿಸಿದ ಹುಡುಗಿಯನ್ನು"

ಈ ಉತ್ಕಟತೆ ಅಪಾಯವನ್ನು ಕೂಡಾ ಲೆಕ್ಕಿಸುವುದಿಲ್ಲ ಕುವೆಂಪು ನಿಸರ್ಗದಲ್ಲಿ ಭಗವತ್ ಬಿಂಬವನ್ನು ದರ್ಶಿಸಿದಂತೆ ಪಾತ್ರೋಟರು ಕಾಡಿನ ಜಾಲಿಗೆ ಗೂಡು ಕಟ್ಟಿದ ಪ್ರೀತಿಯ ಜೇನು ಹುಟ್ಟಿನಲ್ಲಿ ಕ್ರಾಂತಿಗಾನ ಹುಡುಕುತ್ತಾರೆ. ಪಾತ್ರೋಟರ ಪ್ರೀತಿಗೆ ಅಕ್ಕ ಪುನಃ - ಪುನಃ ಮಾದರಿಯಾಗುತ್ತಾಳೆ. ಪ್ರೀತಿಯ ನಿವೇದನೆಯ ಹಿಂದಿನ ವೇದನೆ ಅಕ್ಕನ ವಚನಗಳಲ್ಲಿ ವೈರಾಗ್ಯವಾಗಿ ಮೂಡಿದ್ದರೆ,

ಪಾತ್ರೋಟರ ಕಾವ್ಯದಲ್ಲಿ ವ್ಯವಸ್ಥೆ ಅಮಾನವೀಯತೆಯ ಧ್ವನಿಯಾಗುತ್ತದೆ. ಅದು ತನ್ನ ಸಹಜತೆಯಿಂದಾಗಿಯೇ ಕಿವಿ, ಕಣ್ಣು, ಎದೆಗಳನ್ನು ಹುಡುಕಿಕೊಳ್ಳುತ್ತದೆ. [೮೩]

'ಒಂದು ಪ್ರಶ್ನೆ' ಎಂಬ ಕವಿತೆಯಲ್ಲಿ ಕವಿಯು ದೇವರಿಗೆ ಹಲವು ಪ್ರಶ್ನೆಗಳನ್ನು ಹಾಕುತ್ತಾನೆ.

ನದಿ ಹರಿಯುತ್ತದೆ
ಬೆಟ್ಟದ ಮೇಲಿನ ಮಂಜು ಕರಗುತ್ತದೆ
ನನ್ನವರ
ನೋವುಗಳು ಕರಗಿ ನೀರಾಗಿಯೇ ಇಲ್ಲ ಒಮ್ಮೆಯೂ
ಗಡ್ಡೆ ಗಟ್ಟಿದ ಮಂಜು ಗಡ್ಡೆಯಂತೆ
ನೋವು ಕೊಟ್ಟೇ ಇಲ್ಲ ಯಾರಿಗೂ [೮೪]

ಬೆಟ್ಟದ ಮೇಲಿನ ಮಂಜು ಕರಗಿ ನದಿ ಹರಿಯುವಂತೆ, ನನ್ನವರ ನೋವುಗಳು ಕರಗಿ ಒಂದು ಸಾರಿಯೂ ನೀರಾಗಿಲ್ಲ. ಒಮ್ಮೆಯೂ ಗುಡಿಸಲ ಒಳಗೂ ಹೊರಗೂ ಬೆಳದಿಂಗಳು ಚೆಲ್ಲಿಲ್ಲ. ಓ ದೇವರೇ ಹೀಗೇಕೆ? ನೀ ಇರುವೆ ಎಂದು ಜಗದ ಜನರ ನಂಬಿಕೆ. ನೀ ಬರದ, ಕಾಣದ ಹೂರತು ನಿನ್ನ ಹೇಗೆನಂಬಲಿ? ಎಂದು ಕವಿ ಪ್ರಶ್ನಿಸಿದ್ದಾನೆ. ನೀ ಬಂದು ನಾ ಕೇಳುವ ಪ್ರಶ್ನೆಗೆ ಉತ್ತರಿಸಿದರೆ, ಜಗತ್ತಿನಲ್ಲಿ ಎಲ್ಲರಿಗಿಂತಲೂ ಹೆಚ್ಚು ನಿನ್ನನ್ನು ಪ್ರೀತಿಸುತ್ತೇನೆ. ಎಂದು ಹಾಡಿದ್ದಾರೆ.

ಪ್ರೀತಿ, ಪ್ರೀತಿಸಿದ ಪ್ರೀತಿಯನ್ನು ಮರೆಯುವುದಿಲ್ಲ, ಮರಯುವುದಾದರೆ ಅದೆಂತಹ ಪ್ರೀತಿ, ಪ್ರೀತಿ ಎಂದರೆ ಬರೀ ನಗು, ಮಾತು, ಸಿಟ್ಟು ಇತ್ಯಾದಿಗಳಿಗೆ ಸೀಮಿತವಾದದಲ್ಲ.

ನಾನಿನ್ನ ಮರೆಯುವುದು
ನೀ ನನ್ನ ಮರೆಯುವುದು
ಅದೆಂತಹ ಪ್ರೀತಿ
ನೀರ ಮೇಲಿನ ಗುರುಳಯೇನೆ? ಎಂದು ಪ್ರಶ್ನಿಸಿದ್ದಾರೆ. [೮೫]

ಕವಿ ತನ್ನ ನೋವಿನುಭವಗಳಲ್ಲಿ ಒಂದಾದ ಪ್ರೀತಿಯನ್ನು ಸುಂದರ ಕವಿತೆಗಳ ಮೂಲಕ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ತನ್ನ ಪ್ರೀತಿಯ ಅಗಾಧತೆಯ

ವರ್ಣನೆಯ ಜೊತೆಗೆ, ಬದುಕಿನ ನೋವು ಕಷ್ಟಗಳ ಚಿತ್ರಣವನ್ನು ನೀಡಿ, ಅವುಗಳೆಲ್ಲದರ ಮಧ್ಯೆಯೂ ಸಾಯದಿರದ ಪ್ರೀತಿ, ಪ್ರೀತಿಯ ಸುಂದರ ನೆನಪುಗಳಲ್ಲಿ ಬದುಕುತಿರುವ ಕವಿ ತನ್ನ ಮನದ ಅಭಿವ್ಯಕ್ತಿಯನ್ನು ಮುಕ್ತವಾಗಿ ವ್ಯಕ್ತಮಾಡಿದ್ದಾನೆ.

೩.೫ ನೆನಪಿನೊಳು ಒಂದಾದ ಪ್ರೀತಿ

'ನೆನಪು' ಎಂದರೆ ಈಗಾಗಲೇ ಸಂತಸದಿಂದಲೋ ಅಥವಾ ನೋವಿನಿಂದಲೋ ಕಳೆದಿರುವ ಸಮಯವಾಗಿದೆ. ಈ ನೆನಪು ಎಂದರೆ ಇತಿಹಾಸವಿದ್ದಂತೆ, ಇತಿಹಾಸವು ವರ್ತಮಾನವನ್ನು, ವರ್ತಮಾನವು ಭವಿಷ್ಯವನ್ನು ನಿರ್ಧರಿಸುತ್ತದೆ ಅಥವಾ ಪ್ರಭಾವಿತಗೊಳಸುತ್ತದೆ ಅಥವಾ ನಲಿವಿನ ನೆನಪುಗಳ ಪ್ರತಿಯೊಬ್ಬರನ್ನು ಕಾಡುತ್ತವೆ. ಆ ನೆನಪಿನಲ್ಲೇ ಅನೇಕರು ತಮ್ಮ ಪ್ರಸ್ತುತ ನೋವು – ಕಷ್ಟಗಳನ್ನು ಮರೆಯುತ್ತಾರೆ. ನೆನಪಿನಲ್ಲೇ ಸಂತಸಪಡುತ್ತಾರೆ, ಭವಿಷ್ಯದ ಕನಸುಗಳನ್ನು ಕಟ್ಟುತ್ತಾರೆ ಇನ್ನು ಪ್ರೀತಿಗೂ–ನೆನಪಿಗು ತುಂಬಾ ಅನ್ಯೋನ್ಯವಾದ ಸಂಬಂಧವಿದೆ. ಪ್ರೀತಿಸಿದವರು, ಪ್ರೀತಿಗಾಗಿ ಕಾಯುತಿರುವವರು, ಪ್ರೀತಿಯನ್ನು ಕಳೆದುಕೊಂಡಿರುವವರು ನೆನಪಿನಲ್ಲೇ ಬದುಕುರಿತುವರು. ಕವಿ ತನ್ನ ಕವನಗಳಲ್ಲಿ ನೆನಪಿನೊಳು ಒಂದಾದ ಪ್ರೀತಿಯನ್ನು ಚಿತ್ರಿಸಿದ್ದಾನೆ.

ಎಲ್ಲಿ ಆ ನಗು ಎಲ್ಲಿ ಆ ಬಿನ್ನಾಣ
ಎಲ್ಲಿ ಆ ಹಿತವಾದ ಕುಡಿನೋಟ ಚೆಲವೆ

ಮೋಡದಾ ಗುಡುಗಿಗೆ ನವಿಲೆದ್ದು ಕುಣಿವಾಗ
ಮಳೆನಿಂತು ಹೂ ಬಿಸಿಲು ಅಂಗಳಕೆ ಇಳಿವಾಗ
ದಿನವಲ್ಲ ಕಾಡುವುದು ನಿನ್ನ ನೆನಪು ಗೆಳತಿ [೮೨]

ತನ್ನ ಚೆಲುವೆಯ ಅಗಲುವಿಕೆಯ ನೋವಿನಲ್ಲಿರುವ ಕವಿಯು ಆ ನಗು, ಆ ಬಿನ್ನಾಣ, ಕುಡಿನೋಟ ಚಲುವೇ ಎಲ್ಲಿಹಳೆಂದು ನೆನಪಿಸುತ್ತಾ ಅವಳ ಸೌಂದರ್ಯದ ವರ್ಣನೆಯನ್ನು ಮಾಡುತ್ತಿದ್ದಾನೆ ಅವಳಿದ್ದ ತನ್ನ ಸುಂದರ ಬದುಕನ್ನು ನೆನದು–ನೆನೆದು ಮರಗುತ್ತ, ಕೊರಗುತ್ತಿರುವನು. ನೋವಿನೆದೆ ತಂಗಾಳಿಯನ್ನು ತೀಡುತ್ತಿದ್ದ ಅವಳ ನೆನಪು ಕವಿಯನ್ನು ದಿನವೆಲ್ಲಾ ಕಾಡುತ್ತಿದೆ.

[೨೩]ನನ್ನ ಕನಸಿನ ಹುಡುಗಿ
ಗಾನ ಗಂಧವತಿ
ನಡಿಸಿದ್ದಳು ಎದೆ ಮೀಟಿ ಮಂದಾರ
ಮಧುರ ಶೃತಿ
ಈಗವಳು – ಬರೀ ಸ್ಮೃತಿ
ಎಲ್ಲಿ ಹೋದಳೋ ಏನೋ ಕೆಡಸಿ ಧೃತಿ [೮೨]

'ನನ್ನ ಕನಸಿನ ಹುಡುಗಿ' ಎಂಬ ಈ ಕವನದಲ್ಲಿ ಹೆಣ್ಣು ತುಂಬ ಸುಕೋಮಲೆ; ಆದರೆ ಅವಳ ಅಸ್ತಿತ್ವ ಇರುವುದು ಕೇವಲ ಸ್ಮರಣೆಯಲ್ಲಿ. ಕವಿತೆ ಕಲೆಗಾರಿಕೆಯಲ್ಲಿ ಮೈದಳಾಳಿದೆ. ಬಣ್ಣನೆ ತೂಕಬದ್ಧವಾಗಿದೆ. ಚಂದ್ರಮನ ಬೆಳಕಲ್ಲಿ ತಂಗಾಳಿ ಚಿಮುಕಿಸಿ, ಕುಲುಕುಲು ನಗೆಯಲ್ಲಿ ಸಾಗರದ ನೆನಪು ಹೂವಿನಷ್ಟೇ ಮೃದು ಅವಳ ನಿಲುವು – ಸಿಹಿ ಮತ್ತು ಬೆಚ್ಚನೆಯ ನೆನಪುಗಳನ್ನು ಹುಟ್ಟುಹಾಕುತ್ತವೆ. ಗಾನ ಗಂಧವತಿಯಕಾದ ಇಂತಹ ಅನೇಕ ಹೂಬಾಲೆಯರ ಕನಸುಗಳ ಆಸೆ–ಆಕಾಂಕ್ಷೆಗಳು ಮುಂದೆಯಾದರೂ ಸುಟ್ಟು ಹೋಗದಂತೆ 'ಎತ್ತೋಣ ಗುಡಿಸಲು ಬೆಳಕಿನೆಡೆಗೆ' ಎಂಬ ಸದಾಶಯವೇ ಕಾವ್ಯದ ದೊಡ್ಡ ಆಶಯ ಮತ್ತು ಒಳಶಕ್ತಿಯಾಗಿದೆ 'ನನ್ನ ಪ್ರೀತಿಯ ಹುಡುಗಿ' ಯಂತೂ ಇತಿಹಾಸ ವರ್ತಮಾನಗಳನ್ನು ಹೆಣೆಯುತ್ತ ಪ್ರಕೃತಿಯ ಮುಖೇನ ಅನುಭಾವ ಲೋಕಕ್ಕೆ ಸಾಗಿಬಿಡುತ್ತದೆ. ಕೇಡಿಲ್ಲದ ಸಾವಿಲ್ಲದ ನಲ್ಲನಿಗಾಗಿ ಗಿರಿಗಹ್ವರ ಶೋಧಿಸಿದ ಅಕ್ಕನ ನಿಲುಮೆಯ ಚೌಕಟ್ಟಿನಲ್ಲಿ ನಿಂತು 'ವರ್ಗ–ವರ್ಣ' ಹಾವಳಿಯಲ್ಲಿ ಜಾತಿ ಧರ್ಮದ ಚಕ್ರವ್ಯೂಹದಲಿ, ಸಿಕ್ಕನಲ್ಲೆಯನ್ನು ಆಕೆ ನಾಶವಾಗದ ಮುನ್ನ ಹುಡುಕುವ, ರಕ್ಷಿಸುವ ಛಲವಿದೆ. ಅಕ್ಕನ ಹುಡುಕಾಟದ ಅನುಭಾವಿಕ ಗತನೆನಪು. ಇಂದಿನ ಸಂದರ್ಭದ ಪ್ರೀತಿಯ ಹುಡುಕಾಟಕ್ಕೆ ಬೆಸೆದುಕೊಳ್ಳುತ್ತದೆ. ಅದಕ್ಕೆ ಕಾಜಾಣ, ಗಿಳಿವಿಂಡು, ಮಲ್ಲಿಗೆಗಳು ಹಿರಿಯ ಸಾಕ್ಷಿಗಳಾಗುತ್ತವೆ ; ಸಂಕೇತಗಳಾಗುತ್ತವೆ. [೮೮]

ನಾನು ಪ್ರೀತಿಸಿದ ಹುಡುಗಿ
ಬರೀ ಚೆಲುವೆಯಲ್ಲಿ
ಚೆಲುವೆಯರಲ್ಲಿ ಚೆಲುವಿ
ಮನಸ್ಸು ಮಲ್ಲಿಗೆ ದಂಡಿ

ಇರುವೆಗೂ ಹಿಂಸಿಸದ ಅವಳ ಹಿರಿ ಗುಣವ
ಹೇಗೆ ಮರೆಯಲ್ಲಿ ನಾನು ಅವಳ ಹೂ ಮನವ
ನೆನೆಸುತ್ತ ಕುಳಿತಿಹೆನು
ಭವ್ಯ ಭಾರತದ ಈ ನನ್ನ ನಾಡಿನಲಿ [೮೯]

ನಾನು ಪ್ರೀತಿಸಿದ ಹುಡುಗಿ ಬರೀ ಚೆಲುವೆಯಲ್ಲ ಅವಳು ಸಿರಿಮೊಗದಲ್ಲಿ, ಹೂ ಬಿರಿದು ನಗೆಯಲ್ಲಿ ಬಂದರೆ ಅದು ಸೊಗಸಿನ ಸುಗ್ಗಿ, ಅಲ್ಲಿ ಬಂಡೆಗಲ್ಲೂ ಅರಳಬೇಕು. ಅಂಥ ಚೆಲುವೆ ಕೇವಲ ಚೆಲುವನ್ನು ಮಾತ್ರ ವರ್ಣಿಸದೇ ಅವಳಲ್ಲಿರುವ ಗುಣಗಳನ್ನು ನೆನಸುತ್ತಾನೆ. ಇರುವೆಗೂ ಹಿಂಸೆ ಕೊಡದ ಅವಳ ಹಿರಿ ಗುಣವನ್ನು ಹೇಗೆ ಮೆರಯಲಿ ಎಂದು ಕವಿ ಅವಳನ್ನೇ ನೆನೆಸುತ್ತಾ ಕುಳಿತಿರುವನು.

ಗೆಳೆಯಾ
ಎಲ್ಲರ ಹಾಗೆ
ನಾನು-ನೀನು ಹುಟ್ಟಿಲ್ಲವೇ
ಭ್ರೂಣದಲಿ-ಈನಾಡಿನಲಿ
ತಿಳಿಯುವುರೆಂದೋ ಈ ಜನ
ತಮ್ಮ ಮನಸ್ಸುಗಳನ್ನು [೯೦]

ಕವಿಯು ತನ್ನನ್ನು ದಿನವೂ ಒಂದೊಂದು ರಾತ್ರಿಯಲ್ಲಿ, ಒಂದೊಂದು ರೀತಿಯಲ್ಲಿ ಕಾಡುತ್ತಿರುವ ಹುಡುಗಿಯನ್ನು ನೆನೆಯುತ್ತ, ನೋವನ್ನು ತೋಡಿಕೊಂಡಿದ್ದನೆ. ಭೇದ-ಭಾವವಿರುವ, ಸಂಕೋಲೆಗಳು, ಇತಿ-ಮಿತಿಗಳಿರುವ ಈ ನಾಡಿನಿಂದ ದೂರ ಹೋಗೋಣ ಬಾ ಎಂದು ಗೆಳತಿ ಕವಿಗೆ ಕರೆಯನ್ನು ನೀಡುತ್ತಿದ್ದಾನೆ.

ಬಡವನಾದರೇನು ಪ್ರಿಯೆ
ಕೈ ತುತ್ತು ತಿನಿಸುವೆ
ಎದೆಯ ತುಂಬ ಒತ್ತಿಕೊಂಡು
ಮುತ್ತು ಮಳೆಯ ಸುರಿಸುವೆ

ಹರಿವ ನದಿಗೆ ಅಡ್ಡ ನಿಂತು

ನಿನಗೆ ದಾರಿ ಮಾಡುವೆ
ಬಿಸಿಲು ಮಳೆಯ ಚಳಿಯ ನುಂಗಿ
ನೆರಳು ಬೆಳಕು ಆಗುವೆ [೬೧]

'ಬಡವನಾದರೇನು ಪ್ರಿಯೆ' ಎಂಬ ಸುಂದರವಾದ ಕವಿತೆಯಲ್ಲಿ ಕವಿಯು ತನ್ನ ಪ್ರಿಯೆಯನ್ನು ಕುರಿತು, ಎದೆಯ ತುಂಬ ಪ್ರೀತಿಸುವೆ, ನನ್ನೆದೆಯ ರಾಜ್ಯದಲ್ಲಿ ನಿನ್ನನ್ನು ರಾಣಿಯಾಗಿಸುವೆ ನನ್ನ ಪುಟ್ಟ ಗುಡಿಸಲಿನಲ್ಲಿ ನಿನ್ನ ಪಟ್ಟದರಸಿಯನ್ನಾಗಿ ಮಾಡುವೆ. ಹೀಗೆ ತನ್ನ ಪ್ರಿಯೆಯನ್ನು ನೆನೆಯುತ್ತಾ ಕವಿಯು ತನ್ನ ಮನದಾಳದ ಮಾತನ್ನು ವ್ಯಕ್ತಪಡಿಸಿದ್ದಾನೆ.

ಪಟ್ಟ ಗುಡಿಸಲಿನಲ್ಲೇ
ಚುಕ್ಕೆಗಳ ಪೋಣಿಸುವೆನು
ಕೆಟ್ಟ ಕನಸುಗಳ ಮೀಟಿ
ಹೂ ಮಳೆಯ ಸುರಿಸುವೆನು
ಹಸಿರಾಗು ಬದುಕಿಗೆ
ಹಸನಾದ ನಗೆ ನಗಲು
ನಿನ್ನನ್ನೆಲ್ಲಿ ಹುಡುಕಲಿ
ಹೇಳೆ ಗಳತಿ
ನೀನೆಲ್ಲಿ ಇರುವಿ ! [೬೨]

ಕಳೆದು ಹೋಗಿರುವ, ಮರೆಯಾಗಿರುವ ಗೆಳತಿಯನ್ನು ನೆನೆಯುತ್ತ, ಅವಳಿರದ ನಾಡಿನಲ್ಲಿ, ಬದುಕಲ್ಲಿ ಇರಲು ಸಾಧ್ಯವಿಲ್ಲ. ಅವಳ ಜೊತೆ – ಜೊತೆಯಲ್ಲಿ ಕಳೆದ ಕ್ಷಣಗಳನ್ನು ನೆನೆಯುತ್ತ. ಮುಗಿಲು ಹರಿದುಕೊಂಡು ಮೈಮೇಲೆ ಬಿದ್ದರೂ. ನದಿಗಳು ಸಪ್ತಸಾಗರಗಳು ಎದುರಾದರೂ, ಈಜಿ, ದಾಟಿ ನಿನ್ನ ಬಳಿ ಬರುವೆನು. ಹೇಳು ನೀನೆಲ್ಲಿರುವಿ ಎಂದು ಗೆಳತಿಯನ್ನು ಕನವರಿಸುತ್ತಿದ್ದಾನೆ. ಕೆಂಡ ಕಾರುವ ಸೂರ್ಯ ಮೇಲಿದ್ದರೂ, ಕಿಚ್ಚಿನಂತಹ ಭೂಮಿ ಸುಡುತ್ತಿದ್ದರೂ, ಕನಸುಗಳ ಕಟ್ಟುವೆನು, ನಿನ್ನ ಹುಡುಕುತ ಹತ್ತಿರ ಬರುವೇನು ಹೇಳು ನಿನ್ನನ್ನೆಲ್ಲಿ ಹುಡುಕಲಿ ಎಂದು ಪ್ರಶ್ನಿಸುತ್ತಿರುವನು.

ಹೌದು ಗೆಳತಿ
ಈ ನೆನಪುಗಳೇ ಹಾಗೆ
ಆಲದ ಮರದ ಜೋತು ಬಾವಲಿಗಳಂತೆ
ಎದೆ ತುಂಬ ಇಳಿದಿಳಿದು
ತಿರಗಾ ಮುರಗಾ
ಹೊಸ ಬೇರಿನ ಹಿಂದೆ ಅಡಗುತ್ತವೆ.
ಬದುಕಿನ ದಾರಿಯಲಿ
ಇರುವಷ್ಟು ದಿನ
ಕಳ್ಳ ಹೆಜ್ಜೆಯಲಿ ತೊಡರುಗಳಾಗುತ್ತವೆ. [೬೩]

ನೆನಪುಗಳು ಅನಿರೀಕ್ಷಿತವಾಗಿ ಕವಿಯ ಮೇಲೆ ದಾಳಿಯನ್ನಿಡುತ್ತವೆ. ಚಿತ್ತಿ ಮಳೆಯಂತೆ ನೆನಪುಗಳು ಕಾಡುತ್ತಿವೆ. ಮಳೆ ನಿಂತರೂ ಮರದ ಹನಿ ಉದುರುವಂತೆ, ನೆನಪುಗಳು ಮತ್ತೆ ಮತ್ತೆ ನೆನಪಿಗೆ ಬರುತ್ತಿವೆ. ಕವಿ ಮರೆಯಬೇಕೆಂದರೂ ಅವುಗಳನ್ನು ಮರೆಯಲು ಆಗುತ್ತಿಲ್ಲ.

ನೀ ಇದ್ದ ದಿನದಾಗ ಬರದ ಗುಡಿಸಲಿನ್ಯಾಗ
ಚಂದ್ರನ ನಗಿಯೇನ ಹಕ್ಕಿಯ ದನಿಯೇನ
ನೀ ಹ್ವಾದ ಮರುದಿನ
ಎದಿಯಲ್ಲ ಬಣ ಬಣ ಮನಸ್ಸೆಲ್ಲ ರಣ ರಣ
ಎಲ್ಲ ಹುಡುಕಲಿ ನಾನು ಕಳೆದ್ಹೋದ ದಿನಮಾನ [೬೪]

ಮೊದಲಿನ ದಿನಗಳನ್ನು ನೆನೆಯುತ್ತಾ, ಮೊದಲಿನ ವೈಭವದ ದಿನಗಳೇ ಹೊರಟು ಹೋಗಿವೆ, ಮಳೆಯ ಬರುವೆ ಕಡಿಮೆಯಾಗಿದೆ, ಹಳ್ಳ-ಕೊಳ್ಳಗಳ ಜುಳು-ಜುಳು ಹರಿಯುವ ಶಬ್ದಗಳಿಲ್ಲ, ಹೂ, ಹಣ್ಣು, ಕಾಯಿಗಳು ಮರಗಳಲ್ಲಿ ತುಂಬಿಲ್ಲ, ಹಕ್ಕಿಗಳ ಸಂಖ್ಯೆಯೂ ಕ್ಷೀಣಿಸಿದೆ, ಇದ್ದ ಹಕ್ಕಿಗಳೂ ಹಾಡುತ್ತಿಲ್ಲ. ಇಂತಹದರಲ್ಲಿ ನಾ ಕವನವನ್ನು ಹೇಗೆ ಬರೆಯಲಿ! ಗೆಳತಿ ಇದ್ದಾಗ ಗುಡಿಸಲಿನಲ್ಲಿ ಚಂದ್ರನ ಬೆಳದಿಂಗಳಿತ್ತು, ಅವಳು ಹೋದಾಗಿನಿಂದ ಬರೀ ರಣ-ರಣ ಬಿಸಿಲು ಎಂದು ಕವಿ ಮೊದಲಿನ ದಿನಗಳನ್ನು ನೆನೆಯುತ್ತ, ಇಂದಿನ ಈ ಸ್ಥಿತಿಯಲ್ಲಿ ಕವನ ಹೇಗೆ ಬರೆಯಲಿ ಎಂದು ಪ್ರಶ್ನಿಸಿದ್ದಾನೆ.

ಗುಡುಗು – ಮಿಂಚಿಗೆ ನಲುಗಿ
ಮಳೆಯ ರಭಸಕೆ ಸೋತು
ತೋಯ್ದು ತಪ್ಪಡಿಯಾದ
ಜೋಪಡಿಗಳ ಮಧ್ಯ – ನೀನು
ನೆನಪಾಗುವುದಿಲ್ಲ ಗೆಳತಿ

ಹಗಲು ರಾತ್ರಿಯ ಬೆರಸಿ
ಕೊರೆವ ಚಳಿಯನು ನುಂಗಿ
ಕಾರ್ಖಾನೆ ಕರೆಯಲ್ಲಿ
ಕನಸು ಕೊಂದವರ ಮಧ್ಯ ನೀನು
ನೆನಪಾಗುವುದಿಲ್ಲ ಗೆಳತಿ [೬೫]

ಗೆಳತಿಯ ನೆನಪಲ್ಲಿ ಕೊರಗುತ್ತಿದ್ದ, ಗೆಳತಿಯ ನೆನಪುಗಳ ಕಾಡುತ್ತಿದ್ದ ಕವಿಗೆ, ಇಂದು ಗುಡುಗು, ಮಿಂಚು. ಮಳೆಗೆ ಸಿಲುಕಿ ನಲುಗಿ ಹೋಗಿರುವ ಗುಡಿಸಲುಗಳ ಮಧ್ಯೆ ಹಗಲು ರಾತ್ರಿಯನ್ನದೆ, ಚಳಿ, ಮಳೆ, ಬಿಸಿಲೆನ್ನದೆ ಕನಸುಗಳ ಕೊಂದು ದುಡಿಯುತ್ತಿರುವವರ ಮಧ್ಯೆ, ವರ್ಗ – ವರ್ಣಗಳ ಜಗಳಾಟದ ಮಧ್ಯೆ ಗೆಳತಿಯನೆನಪು ಬರುತ್ತಿಲ್ಲ, ಕವಿ ಹೇಳುವಂತೆ ಗೆಳತಿ ನೀನು ಮೇನಕೆಯಾದರೂ ಈ ಹೋರಾಟದಲ್ಲಿ ನಾನು ವಿಶ್ವಾಮಿತ್ರನಾಗುವುದಿಲ್ಲ.

ಹೀಗೆ ಎಲ್ಲರನ್ನು ಕಾಡುವ ಈ ನೆನಪುಗಳು ಕವಿಯನ್ನು ಕಾಡುತ್ತಿವೆ. ಕವಿ ಇಲ್ಲಿ ತಾನು ಹಿಂದೆ ಅನುಭವಿಸಿದ ಕಷ್ಟ–ನೋವುಗಳನ್ನು ಹಾಗೂ ತನ್ನವರು ಅನುಭವಿಸಿದ ನೋವು ಶೋಷಣೆಯನ್ನು ನೆನಪಿಸುತ್ತಾನೆ. ಜೊತೆಗೆ ನಲಿವಿನ ದಿನಗಳನ್ನು ತನ್ನ ಗೆಳತಿಯ ಪ್ರೀತಿ, ಅವಳ ಸೌಂದರ್ಯವನ್ನು ಇಲ್ಲಿ ನೆನೆಯುತ್ತಾನೆ. ಅವಳ ನೆನಪಿನಲ್ಲೇ ನೋವನ್ನು ಅನುಭವಿಸುತ್ತಿದ್ದಾನೆ.

ಟಿಪ್ಪಣಿಗಳು

೩.೧ ಪ್ರಕೃತಿಯೊಳು ಒಂದಾದ ಪ್ರೀತಿ :

೪. ಲೇಖನ ಪಾತ್ರೋಟರ ಕಾವ್ಯದಲಲಿ ಪ್ರೀತಿ ಮತ್ತು ನಿಸರ್ಗ – ಡಾ. ಹೇಮಾ ಪಟ್ಟಣಶೆಟ್ಟಿ – ಪುಟ – ೭

೫. ಕವನ ಸಂಕಲನ – 'ಕರಿಯ ಕಟ್ಟಿದ ಕವನ' – ಪ್ರಕೃತಿ –ಪುಟ – ೨೧

೬. ಕವನ ಸಂಕಲನ – 'ಕಲ್ಲಿಗೂ ಗೊತ್ತಿರುವ ಕತೆ' – ಕಾಡಲ್ಲೋ ಇದು – ಪುಟ – ೬೨

೭. ಕವನ ಸಂಕಲನ – 'ಕಲ್ಲಿಗೂ ಗೊತ್ತಿರುವ ಕತೆ' – ಈ ನೆಲ – ಪುಟ –೪

೮. ಕವನ ಸಂಕಲನ – 'ಕಲ್ಲಿಗೂ ಗೊತ್ತಿರುವ ಕತೆ' – ಮೋಡಗಳು – ಪುಟ – ೩೯

೯. ಕವನ ಸಂಕಲನ – 'ನನ್ನ ಕನಸಿನ ಹುಡುಗಿ' – ನಕ್ಷತ್ರ ಲೋಕ – ಪುಟ – ೫೮

೧೦. ಕವನ ಸಂಕಲನ – 'ಕರಿಯ ಕಟ್ಟಿದ ಕವನ' – ನೆಲದೊಡಲು –ಪುಟ – ೩

೧೧. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ನದಿ ಮತ್ತು ಕವಿ –ಪುಟ – ೫

೧೨. ಕವನ ಸಂಕಲನ – 'ಕರಿಯ ಕಟ್ಟಿದ ಕವನ' – ಗಿಡ ಮರ –ಪುಟ – ೪೨

೧೩. ಕವನ ಸಂಕಲನ – 'ಕರಿಯ ಕಟ್ಟಿದ ಕವನ' – ಐಸಿರಿ –ಪುಟ – ೪೬

೧೪. ಕವನ ಸಂಕಲನ – 'ಕರಿಯ ಕಟ್ಟಿದ ಕವನ' – ಮಳೆ –ಪುಟ – ೪೮

೧೫. ಕವನ ಸಂಕಲನ – 'ಜಾಜಿ ಮಲ್ಲಿಗೆ' – ಧಾರವಾಡದ ಮುಂಗಾರು ಮಳೆ – ಪುಟ – ೧೮

೩.೨ ಕನಸಿನೊಳು ಒಂದಾದ ಪ್ರೀತಿ

೧೬. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ಕನಸಿನ ಪ್ರಸಂಗ –ಪುಟ – ೧

೧೭. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ಬರೀ ಬೆಲುವಿದ್ದರೆ ಮುಗಿಯಲಿಲ್ಲ –ಪುಟ – ೫

೧೮. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ಆ ಮರ ಈ ನೆರಳು –ಪುಟ – ೨೨

೧೯. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ಹೇಗೆ ಮರೆಯಲಿ ಹೇಳು –ಪುಟ – ೩೧

೨೦. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ಚೆಲುವೆ ಮತ್ತು ಕವಿ –ಪುಟ – ೩೫

೨೧. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ಚಲುವಿಗಷ್ಟು ಇರಲಿ ಒಲವು –ಪುಟ –55

೨೨. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ನಿನ್ನ ಆಗಮನ –ಪುಟ – ೬೧

೨೩. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ಅಂತರ್ಜಾಲ –ಪುಟ – ೮೧

೨೪. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ಪ್ರೀತಿಯಥ ವಸ್ತು –ಪುಟ – ೧೦೨

೨೫. ಕವನ ಸಂಕಲನ – 'ಕರಿ ನೆಲದ ಕಲೆಗಳು' – ಕನಸಿನೊಳಗೊಂದು ಕಣಸು –ಪುಟ – ೧೭

೨೬. ಕವನ ಸಂಕಲನ – 'ಕರಿ ನೆಲದ ಕಲೆಗಳು' – ಒತ್ತಾಯ ನಿನಗಿಲ್ಲ –ಪುಟ – ೨೬

೨೭. ಕವನ ಸಂಕಲನ – 'ಕಲ್ಲಿಗೂ ಗೊತ್ತಿರುವ ಕತೆ' – ಹೀಗೊಂದು ರಸ್ತೆಯಲ್ಲಿ –ಪುಟ – ೨೭

೨೮. ಕವನ ಸಂಕಲನ – 'ಕಲ್ಲಿಗೂ ಗೊತ್ತಿರುವ ಕತೆ' – ಮಂಡೇಲಾ –ಪುಟ – ೩೪

೨೯. ಕವನ ಸಂಕಲನ – 'ಕಲ್ಲಿಗೂ ಗೊತ್ತಿರುವ ಕತೆ' – ಬರಗೂರರನ್ನು ಕುರಿತು –ಪುಟ – ೪೪

೩೦. ಕವನ ಸಂಕಲನ – 'ಕಲ್ಲಿಗೂ ಗೊತ್ತಿರುವ ಕತೆ' – ಕಾಡಲ್ಲೋ ಇದು –ಪುಟ – ೬೩

೩೧. ಕವನ ಸಂಕಲನ – 'ನನ್ನ ಕನಸಿನ ಹುಡುಗಿ' – ನನ್ನ ಕನಸಿನ ಹುಡುಗಿ – ಪುಟ – ೨೪

೩೨. ಲೇಖನ – 'ಜೀವನ ಪ್ರೀತಿ ಸ್ವವಿಮರ್ಶೆಯ ಸೆಳೆತ – ರಂಜಾನ್ ದರ್ಗಾ – ಪುಟ – ೭೨

೩೩. ಕವನ ಸಂಕಲನ – 'ನನ್ನ ಕನಸಿನ ಹುಡುಗಿ' – ನೆನಪಾಗುವುದಿಲ್ಲ ಗೆಳತಿ – ಪುಟ – ೨೬

೩೪. ಕವನ ಸಂಕಲನ – 'ನನ್ನ ಕನಸಿನ ಹುಡುಗಿ' – ಬೆಳದಿಂಗಳ ಬಾಲೆ –ಪುಟ – ೩೦

೩೫. ಕವನ ಸಂಕಲನ – 'ನನ್ನ ಕನಸಿನ ಹುಡುಗಿ' – ಅವಳಗಾಗಿ –ಪುಟ – ೩೨

೩೬. ಕವನ ಸಂಕಲನ – 'ನನ್ನ ಕನಸಿನ ಹುಡುಗಿ' – ಪ್ರೀತಿ ಎಂದರೆ –ಪುಟ – ೩೭

೩೭. ಕವನ ಸಂಕಲನ – 'ನನ್ನ ಕನಸಿನ ಹುಡುಗಿ' – ನಿನ್ನನ್ನೆಲ್ಲಿ ಹುಡುಕಲಿ – ಪುಟ – ೫೪

೩೮. ಕವನ ಸಂಕಲನ – 'ನನ್ನ ಕನಸಿನ ಹುಡುಗಿ' – ನಕ್ಷತ್ರ ಲೋಕ –ಪುಟ – ೫೯

೩೯. ಕವನ ಸಂಕಲನ – 'ಕರಿಯ ಕಟ್ಟಿದ ಕವನ' – ಕನ್ನಡತಿ –ಪುಟ – ೩೪

೪೦. ಕವನ ಸಂಕಲನ – 'ಕರಿಯ ಕಟ್ಟಿದ ಕವನ' – ಇಂಡಿಯಾ ನನ್ನ ಇಂಡಿಯಾ –ಪುಟ – ೬೩

೩.೩ ಬಂಡಾಯದೊಳು ಒಂದಾದ ಪ್ರೀತಿ

೪೧. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ಬದುಕಲೇ ಬೇಕಿಗ –ಪುಟ – ೪೫

೪೨. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ಬೆಳಕಾಗದ ಹಬ್ಬ –ಪುಟ – ೪೮

೪೩. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ಹಂಬಲ – ಪುಟ – ೮೪

೪೪. ಲೇಖನ – ಪಾತ್ರೋಟರ ಕವಿತೆಗಳಲ್ಲಿ ಪ್ರತಿಭಟನೆ – ಡಾ. ಮಹಾದೇವ ಕಣವಿ –ಪುಟ – ೧೯

೪೫. ಲೇಖನ – ಪಾತ್ರೋಟರ ಕವಿತೆಗಳಲ್ಲಿ ಪ್ರತಿಭಟನೆ – ಡಾ. ಮಹಾದೇವ ಕಣವಿ –ಪುಟ – ೧೯

೪೬. ಕವನ ಸಂಕಲನ – 'ಕರಿ ನೆಲದ ಕಲೆಗಳು' – ಹಕ್ಕಿ ಗೂಡು ಕಟ್ಟ ಬಲ್ಲೆ – ಪುಟ – ೮೬

೪೭. ಕವನ ಸಂಕಲನ – 'ಕರಿ ನೆಲದ ಕಲೆಗಳು' – ನಾನು ಮತ್ತು ನನ್ನ ಕಾವ್ಯ – ಪುಟ – ೧೩

೪೮. ಲೇಖನ – ಪಾತ್ರೋಟರ ಕವಿತೆಗಳಲ್ಲಿ ಪ್ರತಿಭಟನೆ – ಡಾ. ಮಹಾದೇವ ಕಣವಿ –ಪುಟ – ೨೧

೪೯. ಕವನ ಸಂಕಲನ – 'ಕರಿ ನೆಲದ ಕಲೆಗಳು' – ಬರಬ್ಯಾಡೋ ಅಜ್ಜ –ಪುಟ – ೧೫

೫೦. ಕವನ ಸಂಕಲನ – 'ಕರಿ ನೆಲದ ಕಲೆಗಳು' – ವರ್ಗ–ವರ್ಣ –ಪುಟ – ೨೯

೫೧. ಕವನ ಸಂಕಲನ – 'ಕರಿ ನೆಲದ ಕಲೆಗಳು' – ಉಸಿರಾಗದರಲಿ ಗೆಳತಿ – ಪುಟ – ೩೨

೫೨. ಕವನ ಸಂಕಲನ – 'ಕರಿ ನೆಲದ ಕಲೆಗಳು' – ಸಂಜೆಯ ಮಳೆ –ಪುಟ – ೪೪

೫೩. ಕವನ ಸಂಕಲನ – 'ಕರಿ ನೆಲದ ಕಲೆಗಳು' – ನಾನು ನೀನು ಆಗಬೇಕು ಹೀಗೆ –ಪುಟ – ೪೭

೫೪. ಕವನ ಸಂಕಲನ – 'ಕಲ್ಲಿಗೂ ಗೊತ್ತಿರುವ ಕತೆ' – ಕುಣಿದೇವು ನಾವು ಹಾಡಿದೇವು –ಪುಟ – ೧೩

೫೫. ಕವನ ಸಂಕಲನ – 'ಕಲ್ಲಿಗೂ ಗೊತ್ತಿರುವ ಕತೆ' – ಸುಖವಿಲ್ಲ ಕನಸಿಲ್ಲ – ಪುಟ – ೨೨

೫೬. ಲೇಖನ – ಪಾತ್ರೋಟರ ಕವಿತೆಗಳಲ್ಲಿ ಪ್ರತಿಭಟನೆ – ಡಾ. ಮಹಾದೇವ ಕಣವಿ –ಪುಟ – ೨೨

[illegible]

೫೭. ಕವನ ಸಂಕಲನ – 'ಕಲ್ಲಿಗೂ ಗೊತ್ತಿರುವ ಕತೆ' – ಮಂಡೇಲಾ -ಪುಟ - ೩೩

೫೮. ಕವನ ಸಂಕಲನ – 'ಕಲ್ಲಿಗೂ ಗೊತ್ತಿರುವ ಕತೆ' – ಗಾಯಕ್ಕೆ ಔಷಧಿ ಯಾರಲ್ಲಿ ಉಂಟು -ಪುಟ - ೬೩

೫೯. ಲೇಖನ - ಪಾತ್ರೋಟರ ಕವಿತೆಗಳಲ್ಲಿ ಪ್ರತಿಭಟನೆ – ಡಾ. ಮಹಾದೇವ ಕಣವಿ -ಪುಟ - ೧೮

೬೦. ಕವನ ಸಂಕಲನ – 'ನನ್ನ ಕನಸಿನ ಹುಡುಗಿ' – ಕರಿನೆಲದ ಕಲೆಗಳು - ಪುಟ - ೪

೬೧. ಕವನ ಸಂಕಲನ – 'ನನ್ನ ಕನಸಿನ ಹುಡುಗಿ' – ಐವತ್ತರ ಭಾರತಿ -ಪುಟ - ೬೦

೩.೪ ನೋವಿನನುಭಾವಗಳಲ್ಲಿ ಒಂದಾದ ಪ್ರೀತಿ

೬೨. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ನಿನ್ನದೆಂಥ ಪ್ರೀತಿಯ -ಪುಟ - ೧೧

೬೩. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ಎದೆಯ ಮಾತು -ಪುಟ -9

೬೪. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ನೀನೆಂದು ಬರುವಿ -ಪುಟ - ೧೩

೬೫. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ಉರಿಯುತಿಹ ನನ್ನೊಡಲು -ಪುಟ - ೧೭

೬೬. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ನಗೆಯ ಹೂ -ಪುಟ - ೧೯

೬೭. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ಆ ಮರ – ಈ ನೆರಳು -ಪುಟ - ೨೩

೬೮. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ನಾಳೆಯ ಸೂರ್ಯನಿಗಾಗಿ -ಪುಟ - ೨೮

[illegible]

೭೯. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ಅಕ್ಕ ಅವಳು, ನಾನು –ಪುಟ – ೩೯

೭೦. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ಬದುಕಲೇಬೇಕಿಗ –ಪುಟ – ೪೫

೭೧. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ಬೆಳಕಾಗದ ಹಬ್ಬ –ಪುಟ –೪೮

೭೨. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ಹಕ್ಕಿಗೂಡು ಕಟ್ಟಬಲ್ಲೆ –ಪುಟ – ೪೭

೭೩. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ನಿನ್ನ ಕಂಡ ಆ ಗಳಿಗೆ –ಪುಟ – ೮೮

೭೪. ಕವನ ಸಂಕಲನ – 'ಕರಿ ನೆಲದ ಕಲೆಗಳು' – ನಾನು ಮತ್ತು ನನ್ನ ಕಾವ್ಯ – ಪುಟ – ೧೩

೭೫. ಕವನ ಸಂಕಲನ – 'ಕರಿ ನೆಲದ ಕಲೆಗಳು' – ವರ್ಗ – ವರ್ಣ –ಪುಟ –28

೭೬. ಕವನ ಸಂಕಲನ – 'ಕರಿ ನೆಲದ ಕಲೆಗಳು' – ಎಲ್ಲಿ ಕೊಡ್ರುವದು –ಪುಟ – ೩೮

೭೭. ಕವನ ಸಂಕಲನ – 'ಕರಿ ನೆಲದ ಕಲೆಗಳು' – ಬದುಕುತ್ತೇನೆ –ಪುಟ – ೩೯

೭೮. ಕವನ ಸಂಕಲನ – 'ಕರಿ ನೆಲದ ಕಲೆಗಳು' – ಸಂಜೆ ಮುಂಜಾವು –ಪುಟ – ೪೫

೭೯. ಕವನ ಸಂಕಲನ – 'ಕರಿ ನೆಲದ ಕಲೆಗಳು' – ನಾನು ನೀನು ಆಗಬೇಕು ಹೀಗೆ –ಪುಟ – ೪೭

೮೦. ಕವನ ಸಂಕಲನ – 'ಕರಿ ನೆಲದ ಕಲೆಗಳು' – ನೆನಪು –ಪುಟ – ೪೯

೮೧. ಕವನ ಸಂಕಲನ – 'ಕರಿ ನೆಲದ ಕಲೆಗಳು' – ಬೆಳದಿಂಗ ಬಾಲೆ –ಪುಟ –8

೮೨. ಕವನ ಸಂಕಲನ – 'ಕಲ್ಲಿಗೂ ಗೊತ್ತಿರುವ ಕತೆ' – ಅವಳಿಗಾಗಿ –ಪುಟ – ೪೫

೮೩. ಕವನ ಸಂಕಲನ – 'ಸ. ಪಾತ್ರೋಟರ ಕಾವ್ಯದಲ್ಲಿ ಮನುಷ್ಯನ ಹುಡುಕಾಟ – ಡಾ.ವಿ.ಎಸ್.ಮಾಳಿ –ಪುಟ – ೧೭

೮೪. ಕವನ ಸಂಕಲನ – 'ಕಲ್ಲಿಗೂ ಗೊತ್ತಿರುವ ಕತೆ' – ಒಂದು ಪ್ರಶ್ನೆ –ಪುಟ – ೪೦

೮೫. ಕವನ ಸಂಕಲನ – 'ಕರಿಯ ಕಟ್ಟಿದ ಕವನ' – ಪ್ರೀತಿ ಎಂದರೆ –ಪುಟ – ೧೫

೩.೫ ನೆನಪಿನೊಳು ಒಂದಾದ ಪ್ರೀತಿ

೮೬. ಕವನ ಸಂಕಲನ – 'ನನ್ನ ಕನಸಿನ ಹುಡುಗಿ' – ನೆನೆಪು –ಪುಟ – ೧೬

೮೭. ಕವನ ಸಂಕಲನ – 'ನನ್ನ ಕನಸಿನ ಹುಡುಗಿ' – ನನ್ನ ಕನಸಿನ ಹುಡುಗಿ – ಪುಟ – ೨೪

೮೮. ಲೇಖನ – ಪಾತ್ರೋಟರ ಕಾವ್ಯ –ಪ್ರಕೃತಿಶೋಧ ಮತ್ತು ಅರ್ಥ ವಿನ್ಯಾಸ – ಡಾ.ಗುರುಪಾದ ಮರೆಗುದ್ದಿ –ಪುಟ – ೩೧

೮೯. ಕವನ ಸಂಕಲನ – 'ನನ್ನ ಕನಸಿನ ಹುಡುಗಿ' – ನಾನು ಪ್ರೀತಿಸಿದ ಹುಡಗಿ –ಪುಟ – ೪೦

೯೦. ಕವನ ಸಂಕಲನ – 'ನನ್ನ ಕನಸಿನ ಹುಡುಗಿ' – ಕಾಡುತ್ತಾಳೆ ಹುಡುಗಿ – ಪುಟ – ೪೧

೯೧. ಕವನ ಸಂಕಲನ – 'ನನ್ನ ಕನಸಿನ ಹುಡುಗಿ' – ಬಡವನಾದರೇನು ಪ್ರಿಯ –ಪುಟ – ೨೮

೯೨. ಕವನ ಸಂಕಲನ – 'ನನ್ನ ಕನಸಿನ ಹುಡುಗಿ' – ನಿನ್ನನ್ನೆಲ್ಲಿ ಹುಡುಕಲಿ – ಪುಟ – ೫೪

೯೩. ಕವನ ಸಂಕಲನ – 'ನನ್ನ ಕನಸಿನ ಹುಡುಗಿ' – ಈ ನೆನಪುಗಳೇ ಹಾಗೆ – ಪುಟ – ೬೫

೯೪. ಕವನ ಸಂಕಲನ – 'ನನ್ನ ಕನಸಿನ ಹುಡುಗಿ' – ಬರಿಯಲ್ಹೆಂಗ ಕವನ – ಪುಟ – ೩

೯೫. ಕವನ ಸಂಕಲನ – 'ಜಾಜಿ ಮಲ್ಲಿಗೆ' – ನೆನಪಾಗುವುದಿಲ್ಲ ಗೆಳತಿ –ಪುಟ – ೪೮

ಅಧ್ಯಾಯ - ೪

ಪಾಶ್ಚಾತ್ಯರ ಪ್ರೀತಿ ಕವಿತೆಗಳ ತುಲನಾತ್ಮಕ ನೋಟ

[illegible]

[illegible]

[illegible]

ಒಬ್ಬ ದಲಿತ - ಬಂಡಾಯ ಸಾಹಿತ್ಯ ಘಟ್ಟದ ಕವಿಯಾಗಿ ಸತ್ಯಾನಂದ ಪತ್ರೋಟರದು ಬಹು ದೊಡ್ಡ ಹೆಸರು. ಪಾತ್ರೋಟರು ಬಂಡಾಂಯ ಸಾಹಿತ್ಯ ಸಂಘಟನೆಯೊಂದಿಗೆ ಬರೆದು ಬೆಲೆದವರು. ದಲಿತ ಸಂವೇದನೆಗಳನ್ನು ಚಿತ್ರಿಸುವಲ್ಲಿ, ಬಂಡಾಯ ಸಾಹಿತ್ಯದ ಉದ್ದೇಶವನ್ನು ಸಾಕಾರಗೊಳಸುವಲ್ಲಿ ಅವರು ಬಹುವಾಗಿ ಯಶಸ್ಸು ಕಂಡಿದ್ದಾರೆ. ಅಲ್ಲದೇ ಈ ಮೇರೆಯನ್ನು ದಾಟಿ ಅವರು ಪ್ರೀತಿ, ಪ್ರೇಮದ ಕುರಿತು ಬರೆದಿದ್ದಾರೆ ಯಾವುದೇ ಕವಿಯ ಸಾಹಿತ್ಯವನ್ನು ಅಧ್ಯಯನ ಮಾಡುವಾಗ ತುಲನಾತ್ಮಕ ನೋಟ ಅಗತ್ಯವೆನಿಸುತ್ತದೆ. ಕಾರಣ ಸಾಹಿತ್ಯವು ಕವಿ ತನ್ನ ಪರಂಪರೆಗೆ ನೀಡಿದ ಪ್ರತಿಕ್ರಿಯೆಯಾಗಿರುತ್ತದೆ. ಅದೇ ಸಂದರ್ಭದಲ್ಲಿ ಇತರ ಕವಿಗಳು ಆ ಪರಂಪರೆಯನ್ನು ಭಿನ್ನವಾಗಿ ಕಂಡು ಪ್ರತಿಕ್ರಿಯೆ ನೀಡಿರಬಹುದು. ಪ್ರೀತಿಯ ಕುರಿತು ಅನೇಕ ಕವಿಗಳು ಕವಿತೆಗಳನ್ನು ಬರೆದಿದ್ದಾರೆ. ಅವರಲ್ಲಿ ಸತ್ಯಾನಂದ ಪಾತ್ರೋಟರ ವಿಶೇಷತೆಯನ್ನು ಗುರುತಿಸುವುದು ಅಗತ್ಯವೆನಿಸುವುದು

ಕವಿ ಪಾತ್ರೋಟರು ಪ್ರೀತಿಯ ಮೂಲಕ ಪ್ರಕೃತಿಯ ಸೌಂದರ್ಯವನ್ನು ವರ್ಣಿಸುವ ಪ್ರಯತ್ನವನ್ನು ಹಾಗೂ ಪ್ರಕೃತಿಯ ಮೂಲಕ ಪ್ರೀತಿಯನ್ನು ಹುಡುಕುವ ಪ್ರಯತ್ನವನ್ನು ಮಾಡಿರುವುದು ಅವರ ಕವನಗಳಲ್ಲಿ ಕಾಣಸಿಗುತ್ತದೆ. ಪ್ರಕೃತಿಯ ಸೌಂದರ್ಯದ ವರ್ಣನೆಯ ಜೊತೆಗೆ, ಪ್ರಕೃತಿಯ ಗುಣಗಳನ್ನು ಮಾನವನ ಗುಣಗಳನ್ನು ಹೋಲಿಸಿ, ಪ್ರಕೃತಿಯ ಶ್ರೇಷ್ಟತೆಯನ್ನು ತೋರಿಸಿ, ಪ್ರಕೃತಿ ಬಗೆಗೆ ತಮ್ಮ ಪ್ರೀತಿಯನ್ನು ಕವಿ ತಮ್ಮ ಕವಿತೆಗಳಲ್ಲಿ ವ್ಯಕ್ತಪಡಿಸಿದ್ದಾರೆ.

ಎಷ್ಟು ಸೊಗಸಾಗಿದ್ದಾಳೆ ಪ್ರಕೃತಿ
ಮುಪ್ಪಿರದ ಷೋಡಶಿ
ಎಲ್ಲರನ್ನು ಹೆತ್ತು, ಎಲ್ಲವನ್ನು ಹೊತ್ತವಳ
ಎಲ್ಲರಿಗೂ ಎದೆಹಾಲು ಉಣಲಿಕ್ಕಿ
ಲಾಲಿ ಹಾಡು ಲಲ್ಲೆಗರೆದವಳು
– – – – – – – – – – – ೯೭

ಇಲ್ಲಿ ಕವಿ ಪ್ರಕೃತಿಯನ್ನು ಮುಲಪ್ಪಿರದ ಷೋಡಶಿಗೆ ಹೋಲಿಸಿದ್ದಾನೆ. ಪ್ರಕೃತಿ ಚಿರಂತನವಾದ ಶಕ್ತಿ. ಎಲ್ಲರನ್ನು ಎಲ್ಲವನ್ನು ಹೆತ್ತು, ಹೊತ್ತು ಸಲಹುತಿಹ ಪ್ರಕೃತಿಯ

ಚೆಲವು ಶ್ರೇಷ್ಟವಾದುದು. ಜೊತೆಗೆ ಅಷ್ಟೇ ರುದ್ರ, ಭೀಕರತೆಯನ್ನು ಹೊಂದಿದೆ ಎಂದಿದ್ದಾರೆ.

ನಿಸರ್ಗವನ್ನು ಅಪಾರವಾಗಿ ಪ್ರೀತಿಸಿದ, ನಿಸರ್ಗಕವಿ ಎಂದು ಪ್ರಸಿದ್ಧರಾದ ರಾಷ್ಟ್ರಕವಿ ಕುವೆಂಪುರವರು ಮಲೆನಾಡನ್ನು 'ಮೋಹನ ಭೀಷಣ ಮಲೆನಾಡು' ಎಂದು ಕರೆದಿದ್ದಾರೆ.

ಎಲ್ಲವೂ ನನ್ನಿಂದ ಎಂದು
ಎಂದೆಂದೂ ಬೀಗಿಲ್ಲ
ಅದಕ್ಕೆ ಅವಳು ಅನುಗಾಲ
ಜೀವಿಗಳೆಲ್ಲ ಕ್ಷಣಕಾಲ [೬೭]

ಪ್ರಕೃತಿ ಮಾತೆ ತನ್ನ ಮಕ್ಕಳು ಏನೇ ನೋವುಗಳನ್ನು ನೀಡಿದರೂ, ಕೆಲವೊಮ್ಮೆ ಚಿಕ್ಕ ಕೋಪವನ್ನು ಮಾತ್ರ ತೋರಿಸುತ್ತ ಎಲ್ಲರನ್ನು ಸಲಹುತಿಹಳು. ಎಲ್ಲವೂ ತನ್ನಿಂದ ಎಂದು ಎಂದೂ ಅವಳಂದಿಲ್ಲ. ಅದೇ ಕಾರಣಕ್ಕೆ ಅವಳು ಚಿರಂತನ, ಜೀವಿಗಳೆಲ್ಲ ತಾತ್ಕಾಲಿಕ, ಎಂದು ಕವಿ ಪಾತ್ರೋಟರು ಹಾಡಿದ್ದಾರೆ. ಕವಿ ಇಲ್ಲಿ ಪ್ರಕೃತಿ ಸೌಂದರ್ಯ ಹಾಗೂ ಶ್ರೇಷ್ಟತೆಯ ವರ್ಣನೆಯ ಜೊತೆಗೆ ಪ್ರಕೃತಿ ಕುರಿತು ತನ್ನ ಅಪಾರವಾದಂತಹ ಪ್ರೀತಿಯನ್ನು ವ್ಯಕ್ತಪಡಿಸಿದ್ದಾನೆ.

ಜಾತಿ–ಗೀತಿ, ಲಿಂಗ–ಧರ್ಮ
ಮೀರಿ ಬೆಳೆದ ಗಿಡಮರ
ಅವನು ಇವಳು ಅದು ಇದು
ಎಣಿಸುತಿಲ್ಲ ಒಂದು ದಿನ [೬೮]

ಜಾತಿ–ಧರ್ಮ ಲಿಂಗ ವರ್ಣ ಹೀಗೆ ಭೇದ – ಭಾವ ತೋರುವ ಮಾನವನಲ್ಲಿ ಮಾತು ಉಂಟು. ಆದರೆ ಮಾತಿನಂತೆ ಅವನ ಮನಸ್ಸಿಲ್ಲ. ಆದರೆ ಇವೆಲ್ಲವುಗಳ ಮೀರಿ ಬೆಳೆದ ಗಿಡ–ಮರಗಳು ಅವರು– ಇವರು ಎಂದು ಭೇದ ತೋರಿಲ್ಲ.

ಕವಿ ಪಾತ್ರೋಟರು ಧಾರವಾಡದ ಮುಂಗಾರು ಮಳೆಯನ್ನು ಕಂಡು ಈ ರೀತಿ ಹಾಡಿದ್ದಾರೆ.

ಗೊತ್ತು ಗುರಿ ಇರದೇ ವೇಳೆ ಗೀಳೆ ಎನ್ನದೆ
ಖಾಸಾ ನೆಂಟರ ತುಂಟ ನಗೆ ಚಿಮ್ಮಿಸಿ

ಬೇಕಾದಾಗ ಧುತ್ತನೆ ಬರುವ ಈ
ಧಾರವಾಡದ ಮುಂಗಾರು ಮಳೆ
ಮನೆ ಮಠದ ಗಿಡಗಂಟಿಗೆಲ್ಲ
ತರುವುದು ಹಸಿಮಣೆಯ ಕಳೆ. [೯೯]

ದ.ರಾ ಬೇಂದ್ರೆಯವರಿಗೆ ಧಾರವಾಡದ ಮಳೆ ಹೇಗೆ ಕಂಡಿದೆ ಎಂಬುದನ್ನು ಅವರ ಸಖಿಗೀತ ಕವನ ಸಂಕಲನದ 'ಚಿತ್ತಿಯ ಮಳೆಯ ಸಂಜೆ' ಎಂಬ ಕವಿತೆಯಲ್ಲಿ ಕಾಣಬಹುದು. ಬೇಂದ್ರೆಯವರಿಗೆ ಚಿತ್ತಿಯ ಮಳೆಯು ಕುರುಡು ಪ್ರೀತಿಯ ಹಾಗೆ ಕಂಡಿದೆ.

ಎತ್ತೆನೋ ಬಿತ್ತೇನೋ
ಮಿಂಚಿನ ಮುತ್ತೇನೋ
ಕಣ್ಮುಚ್ಚಿ ತೆರೆವುದರಾಗ
ಹರದಾರಿಗೆ ಹರದಾವ [೧೦೦]

ಕವಿ ಚೆನ್ನವೀರ ಕಣವಿಯವರು 'ಮೊದಲ ಮಳೆ' ಎಂಬ ಕವಿತೆಯಲ್ಲಿ

ಬಿಸಿಲೇರಿತು ಬಾಯಾರಿತು
ಹುರುಪಳಿಸಿತು ನೆಲವು
ಗುಟುಕರಿಸಿತು ಜಲವು
ಬಾನುದ್ದತು ಧೂಳೆದ್ದಿತು
ತತ್ತರಿಸಿಕು ಬಲವು [೧೦೧]

ದ.ರಾ.ಬೇಂದ್ರೆ ಹಾಗೂ ಚೆನ್ನವೀರ ಕಣವಿಯವರಂತೆ ಕವಿ ಪಾತ್ರೋಟರು ಮಳೆಯನ್ನು ಕಂಡಿದ್ದಾರೆ. ಪಾತ್ರೋಟರ ಪ್ರಕಾರ ಮುಂಗಾರು ಮಳೆ ಬದುಕಿಗೆ ಹೊಸದಾದ ಚೈತನ್ಯವನ್ನು ತುಂಬುತ್ತದೆ, ಧರೆಗೆ ಹೊಸ ಕಳೆ ಬರುತ್ತದೆ.

"ಇದಕ್ಕೇನು ಕೆಡುಗಾಲ ಬಂತು
ನಮ್ಮ ಶೋಕಿ ಹಗಲಿಗೆ ಕೊಳ್ಳ ಬಿತ್ತು" ಎನ್ನುವ
ಕಸಿವಿಸಿ ಇವರಿಗೆ [೧೦೨]

ಎಂದು ಕವಿ ಪಾತ್ರೋಟರು ಲಿಪಸ್ಟಿಕ್ ಷೋಡಶಿಯರು ಚೂಡಿದಾರ ಸುಂದರಿಯರು, ಬಾಬಕಟ್ ಬೆಡಗಿಯರ ಕುರಿತು ನುಡಿದಿದ್ದಾರೆ.

ಕೆ. ಎಸ್. ನರಸಿಂಹಸ್ವಾಮಿಯವರು 'ಇಕ್ಕಳ' ಎಂಬ ಕವನದಲ್ಲಿ

ಚಳಿಗಾಲ ಬಂದಾಗ 'ಎಷ್ಟು ಚಳಿ'? ಎಂದರು;
ಬಂತಲ್ಲ ಬೇಸಿಗೆ 'ಕೆಟ್ಟ ಬಿಸಿಲೆ' ಎಂದರು
ಮಳೆ ಬಿತ್ತೊ, 'ಬಿಡದಲ್ಲ ಶನಿ'! ಎಂಬ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ ! [೧೦೩]

ಎಂದು ಅತೃಪ್ತಿಯೆಂಬುದು ಅಸಹನೆಯಾದರೆ ಮನುಷ್ಯ ನೆಮ್ಮದಿಯನ್ನು ಕಳೆದುಕೊಳ್ಳುವನು ಎಂಬುದನ್ನು ಕವಿಯು ಎಚ್ಚರಿಕೆಯ ರೂಪದಲ್ಲಿ ಪ್ರಕೃತಿ ಸತ್ಯಗಳ ಮೂಲಕ ನೀಡಿದ್ದಾರೆ.

ಪ್ರಕೃತಿಯ ಸರ್ವಋತುಗಳು ಆರಂಭದಲ್ಲಿ ಮನುಷ್ಯನಿಗೆ ಕಷ್ಟವೆನಿಸಬಹುದು ಹಾಗೆಂದು ಪ್ರಕೃತಿಯನ್ನು ತಿರಸ್ಕರಿಸುವುದು, ಅಲ್ಲಗಳೆಯುವುದು ಸರಿಯಲ್ಲ ಎಂದು ಪಾತ್ರೋಟರ ಹಾಗೂ ನರಸಿಂಹಸ್ವಾಮಿ ಇಬ್ಬರ ಕವನಗಳಿಂದಲೂ ವ್ಯಕ್ತವಾಗುತ್ತದೆ.

ಸುಂದರವಾದ ಪ್ರೇಮ ಕವನಗಳನ್ನು ಬರೆದ ಕೆ.ಎಸ್.ನರಸಿಂಹಸ್ವಾಮಿಯವರ ಪ್ರೇಮ ಕವನಗಳನ್ನು ಹಾಗೂ ಸತ್ಯಾನಂದ ಪಾತ್ರೋಟರ ಪ್ರೀತಿ ಕವನಗಳ ಹೋಲಿಕೆ ಮಾಡಿದರೆ, ಕಂಡು ಬರುವ ಅಂಶವೆಂದರೆ ಕೆ. ಎಸ್. ನರಸಿಂಹಸ್ವಾಮಿಯವರು ಹೆಚ್ಚಾಗಿ ದಾಂಪತ್ಯ ಪ್ರೀತಿ ಕುರಿತು ಕವನಗಳನ್ನು ರಚಿಸಿದರೆ, ಪಾತ್ರೋಟರು ಹೆಚ್ಚಾಗಿ ದಾಂಪತ್ಯ ಪೂರ್ವದ, ಅದರಲ್ಲೂ ಪ್ರೀತಿಯಿಂದ ದೂರವಾಗಿ, ಹಾಗೂ ಪ್ರೀತಿಯು ಮರೆಯಾಗಿರುವ ಸಂದರ್ಭದ ಕವನಗಳ ರಚನೆ ಮಾಡಿದ್ದು ಕಾಣಸಿಗುತ್ತದೆ.

ಕೆ. ಎಸ್. ನರಸಿಂಹ ಸ್ವಾಮಿಯವರ 'ಮೈಸೂರು ಮಲ್ಲಿಗೆ' ಮಿಲನ ಶೃಂಗಾರ ಭಾವದ ಅಭಿವ್ಯಕ್ತಿಯಾದರೆ, ಸತ್ಯಾನಂದ ಪಾತ್ರೋಟರ ಕವನಗಳಲ್ಲಿ ಶೃಂಗಾರ ಭಾವ ಸ್ಥಾಯಿಯಾಗದೇ ಇರುವುದು ಅವರ ವೈಶಿಷ್ಟ್ಯತೆಯನ್ನು ತೋರುತ್ತದೆ. ಪಾತ್ರೋಟರ ಪ್ರೇಮ ಕವನಗಳಲ್ಲಿ ಹೆಣ್ಣಿನ ಸೌಂದರ್ಯ, ಚೆಲುವಿನ ವರ್ಣನೆಯೇ ಸಾಮಾನ್ಯವಾಗದೇ, ಅವರು ವಾಸ್ತವಿಕ ನೆಲೆಯ ಮೇಲೆ ಹೆಣ್ಣು-ಗಂಡಿನ ಸಂಬಂಧ ಕಟ್ಟಲು ಪ್ರಯತ್ನ ನಡೆಸಿದ್ದಾರೆ.

ಕುವೆಂಪು ನಿಸರ್ಗದಲ್ಲಿ ಭಗವತ್ ಬಿಂಬವನ್ನು ದರ್ಶಿಸಿದಂತೆ ಪಾತ್ರೋಟರು ಕಾಡಿನ ಜಾಲಿಗೆ ಗೂಡು ಕಟ್ಟಿದ ಪ್ರೀತಿಯ ಜೇನು ಹುಟ್ಟಿನಲ್ಲಿ ಕ್ರಾಂತಿಗಾನ ಹುಡುಕುತ್ತಾರೆ.

ಸುಮತೀಂದ್ರ ನಾಡಿಗರವರ "ಎಲ್ಲಿ ಹೋದವೆ ಆ ದಿನ" ಎಂಬ ಕವನ ಹಾಗೂ ಪಾತ್ರೋಟರ ನೆನಪು ಎಂಬ ಕವನಗಳಲ್ಲಿ ಹೋಲಿಕೆಯ ಅಂಶಗಳು ಕಂಡು ಬರುತ್ತವೆ.

ಎಲ್ಲಿ ಹೋದವೇ ಆ ದಿನ?
ಸಖಿ, ಮತ್ತೆ ಬರುವವೆ ಆ ದಿನ?

ಮುಗಿಲಮೇಲೆ ನಡೆದಾಡಿದ ದಿನ
ಬಿಸಿಲು ಸುಡದ ದಿನ, ಚಳಿ ತಾಗದ ದಿನ
ನೆಲ ಬಾನಿನ ಮಳೆಬಿಲ್ಲ ಗೆಳೆತನ
- - - - - - - - - - - - - ೧೦೪

ಕವಿಗೆ ಸಖಿಯೊಂದಿಗೆ ಕಳೆದ ದಿನಗಳ ನೆನಪುಗಳು ಕಾಡುತ್ತಿವೆ, ಮತ್ತೆ ಅಂತಹ ದಿನಗಳು ಯಾವಗ ಬರುವವು ಎಂದು ಕಾಯುತ್ತಿರುವನು.

ಪಾತ್ರೋಟರ ನೆನಪು ಕವನದಲ್ಲಿ

"ಬೆಂಕಿಯ ಎದೆಯಲ್ಲಿ, ಕೆಂಡದಾ ಕಣ್ಣಲ್ಲಿ
ತಂಗಾಳಿ ತೀಡುತ, ಹೊಂಗಿರಣ ಹರಡುತ
ಬಣ್ಣ - ಬಣ್ಣದ ಹೂಗಳ
ಸರಮಾಲೆ ಕಟ್ಟಿ ಸರದಗೆದು ಉಲಿದವಳೆ
- - - - - - - - - - -
ಎಲ್ಲಿ ಆ ನಗು ಎಲ್ಲಿ ಆ ಬಿನ್ನಾಣ
- - - - - -- - - - - - ೧೦೫

ಎಂದು ಗೆಳತಿಯ ನೆನಪು ಕಾಡುತ್ತಿದೆ.

ಕವಿ ಸಿದ್ಧಲಿಂಗಯ್ಯನವರ 'ಸಾವಿರಾರು ನದಿಗಳು' ಎಂಬ ಕವಿತೆ ಶೋಷಣೆ, ಅನ್ಯಾಯದ ವಿರುದ್ಧ ಪ್ರತಿಭಟನೆ ಹಾಗೂ ಹೋರಾಟದ ಕುರಿತಾಗಿದೆ.

ತೇಲಿ ತೇಲಿ ಹರಿದವು
ಹೋರಾಟದ ಸಾಗರಕ್ಕೆ
ಸವಿರಾರು ನದಿಗಳು [೧೦೬]

ಹಾಗೆಯೇ ಕವಿ ಸತ್ಯಾನಂದ ಪಾತ್ರೋಟರ ಕವಿತೆಗಳಲ್ಲೂ ಶೋಷಣೆ ಅನ್ಯಾಯದ ವಿರುದ್ಧದ ಕೂಗು ಕೇಳಿ ಬರುತ್ತದೆ. ಇಲ್ಲಿವರೆಗೂ ಅನುಭವಿಸಿದ ನೋವು – ಕಷ್ಟಗಳ ಚಿತ್ರಣವನ್ನು ನೀಡುತ್ತ, ಅವುಗಳು ಕಳೆಯಲು ಧೈರ್ಯದಿಂದ ಮುನ್ನುಗ್ಗಲು ಬಡವರಿಗೆ ದಲಿತರಿಗೆ ಕರೆಯನ್ನು ನೀಡಿದ್ದಾರೆ.

ಪಾತ್ರೋಟರ 'ಬದಲೇಬೇಕಿಗ', 'ಬೆಳಕಾಗದ ಹಬ್ಬ', 'ಹಂಬಲ', 'ನಾನಿನ್ನು ಬರೆಯುವುದಿಲ್ಲ', 'ಕಪ್ಪು ನೆಲದ ಕಲೆಗಳು', 'ನಾನು ನೀನು ಆಗಬೇಕು ಹೀಗೆ' ಮೊದಲಾದ ಕವಿತೆಗಳಲ್ಲಿ ದಲಿತರು ಇಲ್ಲಿವರೆಗೂ ಪಡುತ್ತ ಬಂದಿರುವ ಕಷ್ಟ – ನೋವು, ಹಾಗೂ ಈಗಲೂ ಅವುಗಳನ್ನು ಅನುಭವಿಸುತ್ತಿರುವುದನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಹೊತ್ತಿ ಉರಿಯುತ್ತಿದೆ ಬಯಲು ಆವಿಯಂತೆ;
ಬೀಡು ಬಿಟ್ಟ ನೆಲ ತೇಕುತ್ತಿದೆ
ಓಡುತ್ತಿದೆ ಮೃಗ ಜಲ; [೧೦೭]

ಇವು ಶಾಂತರಸ 'ಬಯಲು ಸೀಮೆಯ ಬಿಸಿಲು' ಎಂಬ ಕವನದ ಸಾಲುಗಳು. ಈ ಕವನವು ದಲಿತರ ನೈಜ ಸ್ಥಿತಿಯನ್ನು ಚಿತ್ರಿಸುತ್ತದೆ. ಈ ಕವನದೊಂದಿಗೆ ಪಾತ್ರೋಟರ ಕವನಗಳನ್ನು ಹೋಲಿಸಿದಾಗ ಪಾತ್ರೋಟರ ಕವನದಲ್ಲಿ ದಲಿತ ನೈಜ ಚಿತ್ರಣವಿರುವುದರ ಜೊತೆಗೆ ಅವರಿಗೆ ಪ್ರತಿಭಟನೆ ಮತ್ತು ಹೋರಾಟದ ಕರೆಯೂ ಇದೆ.

ಪ್ರೀತಿ ಇಲ್ಲದ ಮೇಲೆ
ಹೂವು ಅರಳೀತು ಹೇಗೆ?
ಮೋಡ ಕಟ್ಟೀತು ಹೇಗೆ?
ನೆಲಕ್ಕೆ ಹಸಿರು ಮೂಡೀತು ಹೇಗೆ? [೧೦೭]

ಇವು ಜಿ.ಎಸ್. ಶಿವರುದ್ರಪ್ಪರ 'ಪ್ರೀತಿ ಇಲ್ಲದ ಮೇಲೆ' ಎಂಬ ಕವನದಸಾಲುಗಳಾಗಿವೆ. ಇಲ್ಲಿ ಪ್ರೀತಿ ಎಂಬುದು ಜಗತ್ತಿನೆಲ್ಲೆಡೆ ತುಂಬಿಹುದು.

ಪ್ರೀತಿಯಿಲ್ಲದೇ ಜಗತ್ತು ಇಲ್ಲ ಎಂದು ಪ್ರೀತಿಯ ಮಹತ್ವವನ್ನು ಸಾರಲಾಗಿದೆ. ನಮ್ಮ-ನಿಮ್ಮ ಮನಸ್ಸು ಮರಭೂಮಿಯಾಗದೆ ಹಾಗೆ ತಡೆಯಲು ಪ್ರೀತಿ ಅಗತ್ಯ ಎಂದು ಶಿವರುದ್ರಪ್ಪನವರು ಇಲ್ಲಿ ಹಾಡಿದ್ದಾರೆ.

ಕವಿ ಪಾತ್ರೋಟರು 'ಪ್ರೀತಿ ಎಂದರೆ' ಎಂಬ ಕವನದಲ್ಲಿ

ಪ್ರೀತಿ ಎಂದರೆ
ಕೊಡುವುದು – ಕೂಡಿಸುವುದು
– – – – – – – – – – –
ಸಿಕ್ಕಾಗ ಆಹಾ! ಎಂದು ಕುಣಿಯುವುದು
ಇಲ್ಲದಿರೆ, ಶೂನ್ಯವಾಗುವುದು
ಇಷ್ಟಕ್ಕೆ ಸೀಮಿತವೇ
ಹಾಗಾದರೆ ಸೂರ್ಯ ಚಂದ್ರರಿಗೇನುಂಟು ಕೆಲಸ [೧೦೯]

ಎಂದು ಹಾಡಿದ್ದಾರೆ

ಜಿ.ಎಸ್. ಶಿವರುದ್ರಪ್ಪನವರು 'ಪ್ರೀತಿ ಇಲ್ಲದ ಮೇಲೆ' ಎಂಬ ಕವನದಲ್ಲಿ ಪ್ರೀತಿಯ ಅಗತ್ಯವನ್ನು, ಮಹತ್ವವನ್ನು ಹೇಳಿದರೆ, ಪಾತ್ರೋಟರು ಪ್ರೀತಿಗೆ ಅರ್ಥವನ್ನು ನೀಡಿ, ಪ್ರೀತಿಯ ವೈಶಾಲ್ಯತೆಯನ್ನು ಚಿತ್ರಿಸುವ ಪ್ರಯತ್ನ ಮಾಡಿದ್ದಾರೆ.

ಪ್ರಭುರಾಜ ಅರಣಕಲ್ ರ

ನೀನೆಲ್ಲೆ ಇರು ನನಬಲ್ಲಿ ಇದ್ಹಾಂಗ ಅನಸತಾದ ನನಗೆ
ಈಟ್ಯಾಕ ನಿನಗೆ ಹಚಗೊಂಡೆನಂತ ತಿಳವಲ್ದು ನಂದ – ನನಗೆ
– – – – – – – – – – – – – –
ಬೇಕಂತ ನನಗೆ ಮರತಂಗ ಮಾಡಿ ಆಗೀದಿ ಮಟ್ಟಮಾಯಿ
ನೀ ಹೋದ ಹೋದಲ್ಲಿ ಬೆನ್ನ ಹತ್ತ್ಯಾದ. ನನ್ನ ನೆನಪ ನಾಯಿ
ಮನಸ ತಿಪ್ಪಿಮ್ಯಾಗಾಗ – ಈಗ ಬರತಾವ ಬ್ಯಾರೆ ಕೋಳಿ
ನಿನ್ನ ನೆನಪೊಂದು ದೊಡ್ಡಬೆಕ್ಕಾಗಿ ಮಾಡತಾದ ದಾಳಿ. [೧೧೦]

ತನ್ನ ಮರೆತು ದೂರ ಮಾಯವಾಗಿರುವ ಪ್ರೀತಿಯ ನೆನಪುಗಳು ಪ್ರಿಯನನ್ನು ಕಾಡುತ್ತಿವೆ. ಪ್ರೀತಿಯ ನೆನಪಲ್ಲಿರುವವನ್ನು ಕವಿ ಇಲ್ಲಿ ಪ್ರೀತಿಯ ನೆನಪಿನ

ಮೇಣಬತ್ತಿಗೆ ಹೋಲಿಸಿದ್ದಾನೆ. ಇಲ್ಲಿ ಪ್ರೀತಿ ದೂರವಿದ್ದರೂ ಪ್ರಿಯನಿಗೆ ಹತ್ತಿರವೇ ಇದ್ದ ಹಾಗೆ ಅನಿಸುತ್ತಿದೆ. ಈ ಪ್ರೀತಿಯ ನೆನಪು ಅವನನ್ನು ಅಷ್ಟೊಂದು ಕಾಡುತ್ತಿದೆ.

ಕವಿ ಪಾತ್ರೋಟರ ಕವಿತೆಗಳಲ್ಲಿ ನೆನಪುಗಳ ಸುಂದರ ಚಿತ್ರಣವಿದೆ. 'ನೆನಪು', 'ನಿನ್ನನ್ನೆಲ್ಲಿ ಹುಡುಕಲಿ', 'ನಿನ್ನ ನೆನಪಿನ ಒಳಗೆ', 'ನೆನಪಾಗುವುದಿಲ್ಲ ಗೆಳತಿ', 'ಈ ನೆನಪುಗಳೇ ಹೀಗೆ' ಈ ಎಲ್ಲ ಕವನಗಳಲ್ಲಿ ನೆನಪುಗಳ ಚಿತ್ರಣವಿದೆ. ಇಲ್ಲಿ ಕವಿಯನ್ನು ನೆನಪುಗಳು ಕಾಡುತ್ತಿವೆ. ಕವಿ ಇಲ್ಲಿ ಕೇವಲ ಗೆಳತಿಯ ಸೌಂದರ್ಯ, ಚೆಲವು, ಪ್ರೀತಿಯನ್ನು ಮಾತ್ರ ನೆನೆಯುತ್ತಿಲ್ಲ. ಅದರೆ ಜೊತೆಗೆ ಅಂದಿನ ಸೊಬಗು ಸಿರಿ, ನಲಿವು, ಹಾಗೂ ತಾನು ತನ್ನವರು ಅನುಭವಿಸಿದ ನೋವು, ಕಷ್ಟಗಳ ನೆನಪೂ ಇದೆ.

ನನ್ನ ಕನಸಿನ ಹುಡುಗಿ
ಗಾನ ಗಂಧವತಿ
ನುಡಿಸಿದ್ದಳು ಎದೆ ಮೀಟಿ ಮಂದಾರ
ಮಧುರ ಶೃತಿ
ಈಗವಳು ಬರೀ ಸ್ಮೃತಿ — ನನ್ನ ಕನಸಿನ ಹುಡುಗಿ

ನನ್ನ
ಬೆಂಕಿಯ ಎದೆಯಲ್ಲಿ, ಕೆಂಡದಾ ಕಣ್ಣಲ್ಲಿ
ತಂಗಾಳಿ ತೀಡುತ, ಹೊಂಗಿರಣ ಹರಡುತ
– – – – – – – – – – –
ಎಲ್ಲಿ ಹೋದೆಯೋ ಏನೋ ಮಂಗಮಾಯ — ನೆನಪು

ಇರುವೆಗೂ ಹಿಂಸಿಸದ ಅವಳ ಹಿರಿ ಗುಣವೆ
ಹೇಗೆ ಮರೆಯಲಿ ನಾನು ಅವಳ ಹೂ ಮನವ
ನೆನೆಸುತ್ತ ಕುಳಿತಿಹೆನು
ಭವ್ಯ ಭಾರತದ ಈ ನನ್ನ ನಾಡಿನಲಿ
— ನಾನು ಪ್ರೀತಿಸಿದ ಹುಡುಗಿ

ಮರೆಯ ಬೇಕೆಂದರೂ ಮರೆಯಲಾಗುವುದಿಲ್ಲ
ವರ್ತಮಾನಕೆ
ಭೂತಗಳಾಗುವುದು ಬಿಡುವುದಿಲ್ಲ
ಹೌದು ಗೆಳತಿ
ಈ ನೆನಪುಗಳೇ ಹಾಗೆ

– ಈ ನೆನಪುಗಳೇ ಹಾಗೆ

ಗುಡುಗು ಮಿಂಚಿಗೆ ನಲುಗಿ
ಮಳೆಯ ರಭಸಕ್ಕೆ ಸೋತು
ತೋಯ್ದು ತಪ್ಪಡಿಯಾದ
ಜೋಪಡಿಗಳ ಮಧ್ಯ – ನೀನು
ನೆನಪಾಗುವುದಿಲ್ಲ ಗೆಳತಿ

– ನೆನಪಾಗುವುದಿಲ್ಲ

ಪಾತ್ರೋಟರ ಈ ಕವನಗಳಲ್ಲಿ ಗೆಳತಿಯ ಮಾತು, ನಗು, ಚೆಲುವು, ಪ್ರೀತಿಯ ನೆನಪುಗಳು ಕಾಡುತ್ತಿವೆ. ಆದರೆ ಕವಿ ನೆನಪುಗಳಲ್ಲೇ ತೇಲಿ ಹೋಗದೆ, ಬಡತನ ಗುಡಿಸಲು, ಹಸಿವು, ಕಣ್ಣೀರು, ಜಾತಿಭೇಧಗಳ ಮಧ್ಯೆ ಗೆಳತಿಯ ನೆನಪು ಅತನನ್ನು ಭಾಧಿಸುವುದಿಲ್ಲ. ಇಲ್ಲಿಯೇ ಪಾತ್ರೋಟರು ವಿಶೇಷವಾಗಿ ನಿಲ್ಲುತ್ತಾರೆ.

ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು 'ಶಿವಮೊಗ್ಗೆಯ ಮಳೆ' ಎಂಬ ಕವನದಲ್ಲಿ

ಹತ್ತು ದಿನದಿಂದ ಊರಲ್ಲಿ
ರಚ್ಚಿಟ್ಟು ರಾಚುತ್ತಿದೆ ಮಳೆ
ಬಡಿದಂತೆ ನೆಲಕ್ಕೆ
ಏಕಕಾಲಕ್ಕೆ ಸಹಸ್ರ ಮಳೆ!
ಊರಿನ ಕನ್ನೆಗೆ ಪಟಪಟ
ಭಾರಿಸಿ, ರೇಗಿಸಿ ಛೇದಿಸಿ
ಕೂಗಿ ತರಿಸುತ್ತಿದೇ ಎಲ್ಲ
ಎದೆಯಲ್ಲೂ ದಿಗಿಲು . . . . .[೧೧೧]

ಶಿವಮೊಗ್ಗದ ಮಳೆಯ ಚಿತ್ರಣ ಈ ಕವಿತೆಯಲ್ಲದೆ, ಮಳೆಗಾಲದ ಮಳೆ ಬಂದಿತೆಂದರೆ ಊರಿನಲ್ಲೆಲ್ಲಾ ಏನೇನು ದಾಂಧಲೆ ಮಾಡುತ್ತೇ ಎಂಬುದನ್ನು ಕವಿ ಇಲ್ಲಿ ಚಿತ್ರಿಸಿದ್ದಾನೆ.

ಪಾತ್ರೋಟರು 'ಧಾರವಾಡದ ಮುಂಗಾರು ಮಳೆ' ಎಂಬ ಕವನದಲ್ಲಿ, ಮುಂಗಾರು ಮಳೆ ಬಂದಿತೆಂದರೆ ಕಾಣುವ ದೃಶ್ಯವನ್ನು ಚಿತ್ರಿಸುತ್ತ, ಮಳೆಯಿಂದಲೇ ಬುವಿಗೆ ಜಗತ್ತಿಗೆ, ಬಾಳಿಗೆ ಕಳೆ ಬರುತ್ತದೆ ಎಂದು ಮಳೆಯ ಮಹತ್ವವನ್ನು ಸಾರಿದ್ದಾರೆ.

ಗೊತ್ತು ಗುರಿ ಇರದೇ ವೇಳೆ ಗೀಳೆ ಎನ್ನದೇ
ಖಾಸಾ ನೆಂಟರ ತುಂಟ ನಗೆ ಚಿಮ್ಮಿಸಿ
ಬೇಕಾದಾಗ ಧುತ್ತನೆ ಬರುವ ಈ
ಧಾರವಾಡದ ಮುಂಗಾರು ಮಳೆ. . . . . . .

ಎಲ್ಲೆಲ್ಲೂ ಹೊಸ ಕಳೆ
ತಂಗಾಳಿ ತಂಪಲ್ಲ ಜೋಡಿಗಳ ನಗುವಲ್ಲ
ರೈತನ ಕಂಗಳಲಿ ಕಾಣುವುದು ಪ್ರಕೃತಿ. . . . . .[೧೧೨]

ಹೀಗೆ ಕನ್ನಡದ ಆಧುನಿಕ ಕವಿಗಳ ಸುಂದರ ಪ್ರೀತಿ ಕವಿತೆಗಳನ್ನು ಅವಲೋಕಿಸಿದಾಗ, ಸತ್ಯಾನಂದ ಪಾತ್ರೋಟರ ವಿಶೇಷತೆ ಕಂಡು ಬರುತ್ತದೆ.

[illegible]

[illegible]

[illegible]

[illegible]

[illegible]

[illegible]

ಟಿಪ್ಪಣಿಗಳು

೯೬. ಕವನ ಸಂಕಲನ – 'ಕರಿಯ ಕಟ್ಟಿದ ಕವನ' – ಪ್ರಕೃತಿ – ಪುಟ – ೨೧

೯೭. ಕವನ ಸಂಕಲನ – 'ಕರಿಯ ಕಟ್ಟಿದ ಕವನ' – ಪ್ರಕೃತಿ – ಪುಟ – ೨೨

೯೮. ಕವನ ಸಂಕಲನ – 'ಕರಿಯ ಕಟ್ಟಿದ ಕವನ' – ಗಿಡ ಮರ – ಪುಟ – ೪೨

೯೯. ಕವನ ಸಂಕಲನ – 'ಜಾಜಿ ಮಲ್ಲಿಗೆ' – ಧಾರವಾಡದ ಮುಂಗಾರು ಮಳೆ – ಪುಟ – ೧೮

೧೦೦. ಕವನ – 'ಸಖಿಗೀತ' – ಚಿತ್ತಿಯ ಮಳೆಯ ಸಂಜೆ – ಪುಟ – ೮೦

೧೦೧. ಕವನ ಸಂಕಲನ – 'ಮೊದಲ ಮಳೆ' – ಚನ್ನವೀರ ಕಣವಿ

೧೦೨. ಕವನ ಸಂಕಲನ – 'ಜಾಜಿ ಮಲ್ಲಿಗೆ' – ಧಾರವಾಡದ ಮುಂಗಾರು ಮಳೆ – ಪುಟ – ೧೮

೧೦೩. ಕವನ – 'ಇಕ್ಕಳ' – ಕೆ.ಎಸ್.ನರಸಿಂಹಸ್ವಾಮಿ

೧೦೪. ಕವನ ಸಂಕಲನ – 'ನನ್ನ ಪ್ರೀತಿಯ ಕವಿತೆ' – ಸಂ. – ಎಸ್.ಜಿ. ಸ್ವಾಮಿ – ಕವನ – 'ಎಲ್ಲಿ ಹೋದವೆ ಆ ದಿನ' – ಸುಮತೀಂದ್ರ ನಾಡಿಗ

೧೦೫. ಕವನ ಸಂಕಲನ – 'ನನ್ನ ಕನಸಿನ ಹುಡುಗಿ' – ನೆನಪು – ಪುಟ – ೧೬

೧೦೬. ಕವನ ಸಂಕಲನ – 'ನನ್ನ ಪ್ರೀತಿಯ ಕವಿತೆ' – ಸಂ. – ಎಸ್.ಜಿ. ಸ್ವಾಮಿ – ಕವನ –'ಸಾವಿರಾರು ನದಿಗಳು' – ಸಿದ್ದಲಿಂಗಯ್ಯ – ಪುಟ – ೨೬೬

೧೦೭. ಕವನ ಸಂಕಲನ – 'ನನ್ನ ಪ್ರೀತಿಯ ಕವಿತೆ' – ಸಂ. – ಎಸ್.ಜಿ. ಸ್ವಾಮಿ – ಕವನ – 'ಬಯಲು ಸೀಮೆಯ ಬಿಸಿಲು' – ಶಾಂತರಸ – ಪುಟ – ೨೪೧

೧೦೮. ಕವನ ಸಂಕಲನ – 'ನನ್ನ ಪ್ರೀತಿಯ ಕವಿತೆ' – ಸಂ. – ಎಸ್.ಜಿ. ಸ್ವಾಮಿ – ಕವನ – 'ಪ್ರೀತಿ ಇಲ್ಲದ ಮೇಲೆ' – ಜಿ.ಎಸ್.ಶಿವರುದ್ರಪ್ಪ – ಪುಟ – ೧೨೯

೧೦೯. ಕವನ ಸಂಕಲನ – 'ಕರಿಯ ಕಟ್ಟಿದ ಕವನ' – ಪ್ರೀತಿ ಎಂದರೆ – ಪುಟ – ೧೪

೧೧೦. ಕವನ ಸಂಕಲನ – 'ನನ್ನ ಪ್ರೀತಿಯ ಕವಿತೆ' – ಸಂ. – ಎಸ್.ಜಿ. ಸ್ವಾಮಿ – ಕವನ – 'ನಿನ್ನ ಹಾಡು' – ಪ್ರಭುರಾಜ ಅರಣಕಲ್ – ಪುಟ – ೧೫೧

೧೧೧. ಕವನ ಸಂಕಲನ – 'ನನ್ನ ಪ್ರೀತಿಯ ಕವಿತೆ' – ಸಂ. – ಎಸ್.ಜಿ. ಸ್ವಾಮಿ – ಕವನ – 'ಶಿವಮೊಗ್ಗೆಯಲ್ಲಿ ಮಳೆ' – ಎನ್.ಎಸ್. ಲಕ್ಷ್ಮೀನಾರಯಣ ಭಟ್ಟ – ಪುಟ – ೩೯

೧೧೨. ನ ಸಂಕಲನ – 'ಜಾಜಿ ಮಲ್ಲಿಗೆ' – ಧಾರವಾಡದ ಮುಂಗಾರು ಮಳೆ – ಪುಟ – ೧೯

ಅಧ್ಯಾಯ – ೫

ಸಮಾರೋಪ

[illegible] [illegible]

[illegible]

ದಲಿತ - ಬಂಡಾಯ ಸಾಹಿತ್ಯ ಘಟ್ಟವು ಆಧುನಿಕ ಕನ್ನಡ ಸಾಹಿತ್ಯಕ್ಕೆ ನವೀನವಾದ ಜೀವದನಿಯನ್ನು ತುಂಬಿದೆ. ಈ ಘಟ್ಟದ ಕವಿಗಳು ಕಾವ್ಯದ ಮೂಲಕ ಅದ್ಭುತವಾದ ಅಭಿವ್ಯಕ್ತಿಯನ್ನು ಮಾಡಿದ್ದಾರೆ. ಅಂತಹ ಪ್ರಮುಖರಲ್ಲಿ ಒಬ್ಬರಾದ ಕವಿ ಸತ್ಯಾನಂದ ಪಾತ್ರೋಟರು ದಲಿತ-ಬಂಡಾಯ ಸಾಹಿತ್ಯದ ಉದ್ದೇಶಗಳನ್ನು ಸಾಕಾರಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅಲ್ಲದೇ ಅವರು ಇದರ ಮೇರೆಯನ್ನು ಮೀರಿ ಪ್ರೀತಿ ಕುರಿತಾಗಿ ಸುಂದರವಾದ – ಕವಿತೆಗಳನ್ನು ರಚಿಸಿದ್ದಾರೆ.

ಪ್ರೀತಿ ಕುರಿತು ಅನೇಕ ಕವಿಗಳು ಸುಂದರವಾದ ಕವಿತೆಗಳನ್ನು ರಚಿಸಿದ್ದಾರೆ. ಪಾತ್ರೋಟರಿಗಿಂತ ಹಿರಿಯ ಹಾಗೂ ಪಾತ್ರೋಟರಿಗೆ ಸಮಕಾಲೀನವರು ರಚಿಸಿದ ಪ್ರೀತಿ - ಪ್ರೇಮ ಕುರಿತಾದ ಕವಿತೆಗಳನ್ನು ಅವಲೋಕಿಸಿದಾಗ, ಅವರಲ್ಲಿ ಕವಿ ಪಾತ್ರೋಟರ ವಿಶೇಷತೆ ಗುರುತಿಸಲ್ಪಡುತ್ತದೆ.

“ಕನ್ನಡ ಕಾವ್ಯ ಲೋಕದಲ್ಲಿ ಪ್ರೀತಿ, ಪ್ರಣಯದ ಅನೇಕ ಕವಿತೆಗಳು ರಚಿತವಾಗಿವೆ. ಪ್ರೀತಿಯ ಉತ್ಕಟ ಅಭಿವ್ಯಕ್ತಿಗಳಾದ ಮಿಲನ ಶೃಂಗಾರ ಮತ್ತು ವಿಪ್ರಲಂಭ ಶೃಂಗಾರದ ಅನನ್ಯ ಅಭಿವ್ಯಕ್ತಿಯ ಕವಿತೆಗಳಿಂದ ನಮ್ಮ ಸಾಹಿತ್ಯ ಶ್ರೀಮಂತವಾಗಿದೆ. ಮಿಲನ ಶೃಂಗಾರಕ್ಕೆ ಕೆ.ಎಸ್.ನರಸಿಂಹಸ್ವಾಮಿಯವರ ‘ಮೈಸೂರು ಮಲ್ಲಿಗೆ’, ವಿಪ್ರಲಂಭಕ್ಕೆ ಸಿದ್ಧಲಿಂಗ ಪಟ್ಟಣಶೆಟ್ಟಿಯರವ ‘ನೀನಾ’ ಥಟ್ಟನೇ ನೆನಪಿಗೆ ಬರುವಂಥವು.

ಆದರೆ ಸತ್ಯಾನಂದ ಪಾತ್ರೋಟರ ಕವಿತೆಗಳು ಇವೆಲ್ಲವುಗಳಿಗಿಂತ ಭಿನ್ನ ಮತ್ತು ವಿಶಿಷ್ಟವಾಗಿವೆ. ಪ್ರೇಮ ಎಂದೊಡನೆ ಪ್ರಣಯ, ಗಂಡು-ಹೆಣ್ಣಿನ ನಡುವಿನ ವಾಂಛೆ ಲಕ್ಷ್ಯಕ್ಕೆ ಬರುತ್ತದೆ. ಅದರೊಂದಿಗೆ ಹೆಣ್ಣಿನ ತುಟಿ, ಕಟಿ ಕದಪುಗಳ ವರ್ಣನೆ ಸಾಮಾನ್ಯ. ಆದರೆ ಸತ್ಯಾನಂದ ಪಾತ್ರೋಟರ ಪ್ರೀತಿ ಕವಿತೆಗಳಲ್ಲಿ ಹೆಣ್ಣು ಶೃಂಗಾರ ಭಾವಕ್ಕೆ ಸ್ಥಾಯಿಯಾಗದೇ ಇರುವುದು ಅವರ ವೈಶಿಷ್ಟ್ಯತೆಯನ್ನು ತೋರುತ್ತದೆ”[೧೧೩] ಪಾತ್ರೋಟರಕವಿತೆಗಳಲ್ಲಿ ಪ್ರೀತಿಯು ಕೇವಲ ಹೆಣ್ಣಿನ ಸೌಂದರ್ಯ ವರ್ಣನೆಗೆ ಸೀಮಿತವಾಗಿಲ್ಲ. ಅವರ ಕವಿತೆಗಳಲ್ಲಿ ಪ್ರಕೃತಿಯೊಳು ಒಂದಾದ ಪ್ರೀತಿ, ಕನಸಿನೊಳು ಒಂದಾದ ಪ್ರೀತಿ, ಬಂಡಾಯದೊಳು ಒಂದಾದ ಪ್ರೀತಿ, ನೋವಿನನುಭಾವಗಳಲ್ಲಿ ಒಂದಾದ ಪ್ರೀತಿ ಕಾಣಸಿಗುತ್ತದೆ. ಪಾತ್ರೋಟರ ಪ್ರೀತಿ ಕವಿತೆಗಳಲ್ಲಿನ ಹುಡುಗಿ ಪ್ರಣಯಿಸಿ, ಪ್ರೇಯಸಿಯಾಗಿ ಕಾಣದೇ ಗೆಳತಿಯಾಗಿ ರೂಪುಗೊಳ್ಳುತ್ತಾಳೆ. ಹೆಣ್ಣಿನ

ಅಂಗಾಂಗಗಳ ವರ್ಣನೆಯ ವಸ್ತು ಇಲ್ಲರದೇ, ಗಂಡು – ಹೆಣ್ಣಿನ ನಡುವೆ ಆಪ್ತ ಸಂಬಂಧವನ್ನು ಬೆಸೆಯುವ ಪ್ರಯತ್ನ ವ್ಯಕ್ತವಾಗುತ್ತದೆ. ಇಲ್ಲಿ ಕವಿಯ ಕಾವ್ಯ ರಚನೆಗೆ ಸಮಾಜದ ವ್ಯವಸ್ಥೆ ಹಾಗೂ ತಾನು, ತನ್ನವರು ಪಡೆದ ಅನುಭವಗಳೇ ಪ್ರೇರಣೆಯಾಗಿವೆ. ಯಾವ ಕವಿಯೇ ಅಗಲಿ ಸಾಮಾಜಿಕ ಬದ್ಧತೆ ಹೊಂದಿರುವುದು ಆಗತ್ಯ, ಹಾಗೆಯೇ ಕವಿ ಪಾತ್ರೋಟರು ಸಮಾಜಿಕ ಬದ್ಧತೆಯನ್ನು ಹೊಂದುವುದರ ಜೊತೆಗೆ, ಸಾಮಾಜಿಕ ಪ್ರಜ್ಞೆಯನ್ನು ಪ್ರದರ್ಶಿಸಿದ್ದಾರೆ.

ಸಹೃದಯರ ಹೃದಯವನ್ನು ಸ್ಪರ್ಶಿಸುವಂತಹ ಶಕ್ತಿ ಪಾತ್ರೋಟರ ಕವಿತೆಗಳಗಿದೆ. ಮನುಷ್ಯತ್ವ, ಮಾನವೀಯ ಸಂಬಂಧಗಳು, ಮೌಲ್ಯಗಳು ಹಾಗೂ ಸಾಮಾಜಿಕ ಕಳಕಳ ಮೊದಲಾದ ಅಂಶಗಳು ಅವರ ಕವಿತೆಗಳಲ್ಲಿ ಪ್ರತಿಬಿಂಬಿತವಾಗುತ್ತವೆ. ಭಾರತೀಯ ಪರಂಪರೆಯಲ್ಲಿ ಪ್ರಕೃತಿಯನ್ನು ಆರಾಧಿಸುತ್ತಾ ಬರಲಾಗಿದೆ. ಅದರಂತೆ ಪ್ರಕೃತಿಯನ್ನು ಕುರಿತು ಬರೆಯದ ಕವಿಯೇ ಇಲ್ಲವೆನ್ನಬಹುದು. ಸತ್ಯಾನಂದ ಪಾತ್ರೋಟರು ಪ್ರಕೃತಿ ಸೌಂದರ್ಯವನ್ನು, ವಿಶೇಷತೆಯನ್ನು ಪ್ರಕೃತಿಮಾತೆಯ ಗುಣಗಳನ್ನು, ಪ್ರಕೃತಿಯ ನಿಗೂಢತೆ ಹಾಗೂ ಭೀಕರತೆಯನ್ನು ತಮ್ಮ ಕವಿತೆಗಳಲ್ಲಿ ಚಿತ್ರಿಸಿದ್ದಾರೆ.

ಎಷ್ಟು ಸೊಗಸಾಗಿದ್ದಾಳೆ ಪ್ರಕೃತಿ
ಮುಪ್ಪಿರದ ಷೋಡಶಿ. . . . . .
ಎಲ್ಲರನ್ನು ಹೆತ್ತು, ಎಲ್ಲವನ್ನು ಹೊತ್ತವಳ
ಎಲ್ಲರಿಗೂ ಎದೆಹಾಲು ಉಣಲಿಕ್ಕಿ
ಲಾಲಿ ಹಾಡು ಲಲ್ಲೆಗರೆದವಳು [೧೧೪]

ಕಾಡಲ್ಲೋ ಇದು ಬರೀ ಕಲ್ಲುಗಳ ಕಾಡಲ್ಲ
ನಾಡಿನ ಸಿರಿ ಸೊಬಗು ಇಲ್ಲಿಹುದು ನೋಡ. . . .
ಕಾಡಿನಿಂದಲೇ ಇಹವು ಕಾಡಿನಿಂದಲೇ ಜಗವು
ಕಾಡು ಅಳಿದರೆ ಮನುಜ ಬದುಕುವುದು ಹೇಗೆ . . . . .[೧೧೫]

ಕವಿ ಇಲ್ಲಿ ನಿಸರ್ಗದ ಕುರಿತು ತನ್ನ ಅಪಾರವಾದ ಪ್ರೀತಿಯನ್ನು ಹಾಗೂ ಕಾಳಜಿಯನ್ನು ವ್ಯಕ್ತಪಡಿಸಿದ್ದಾನೆ. ನಿಸರ್ಗ ಸೌಂದರ್ಯವನ್ನು, ನಿಸರ್ಗದ

ಗುಣವಿಶೇಷತೆಗಳನ್ನು, ಅದರ ಭೀಕರತೆಯನ್ನು, ನಿಸರ್ಗದ ಮೇಲೆ ಮನುಷ್ಯನ ಶೋಷಣೆಯನ್ನು ಕವಿತೆಗಳಲ್ಲಿ ಮಾರ್ಮಿಕವಾಗಿ ಚಿತ್ರಿಸಿರುವುದು ಕಂಡು ಬರುತ್ತದೆ.

ಕವಿ ಪಾತ್ರೋಟರು ಕನಸುಗಳ ಕುರಿತು, ತಾವು ಕಂಡ ಕನಸುಗಳ ಕುರಿತು, ತಮ್ಮನ್ನು ಕಾಡುತ್ತಿರುವ ಕನಸುಗಳ ಕುರಿತು, ತಮ್ಮನ್ನು ಕಾಡುತ್ತಿರುವ ಕನಸುಗಳ ಹಾಗೂ ನೆನಪುಗಳ ಚಿತ್ರಣದ ವಿಶೇಷತೆಯನ್ನು ಕವಿತೆಗಳಲ್ಲಿ ತೋರ್ಪಡಿಸಿದ್ದಾರೆ.

> ಯಾರಿಗಿಲ್ಲ ಹೇಳು
> ಕನಸು ಕಾಣುವ ಕಟ್ಟುವ ಹಂಬಲ
> ದೇವ ದಾನವರಿಗೂ ಬಿಟ್ಟಿಲ್ಲೀ ಹಂಬಲ ೧೧೩
> – – – – – – – – – – – –
> ಎನ್ನುವ ಕವಿಯು
>
> ಆಗಸದೆತ್ತರಕೆ ಎಳೆದೊಯ್ಯದಿರು ಪ್ರಿಯೆ
> ಮುಗಿಲು ಮಲ್ಲಿಗೆಯಾಗುವ ಆಸೆ ನನಗಿಲ್ಲ
> ಕನಸಿನ ಲೋಕದಲ್ಲಿ ಹೊತ್ತೊಯ್ಯದಿರು ಪ್ರಿಯೆ
> ಕನಸು ಕಾಣುವ ಇಚ್ಛೆ ನನಗಿಲ್ಲ. . . . [೧೧೭]
>
> ಎಂದೂ ಹಾಡಿದ್ದಾರೆ.

ಪಾತ್ರೋಟರ ಕವಿತೆಗಳಲ್ಲಿ ಕಂಡು ಬರುವ ಇನ್ನೊಂದು ವಿಶೇಷತೆ ಎಂದರೆ ಬಂಡಾಯದೊಳ್ಗು ಒಂದಾದ ಪ್ರೀತಿ. ಕಾರಣ ಬಂಡಾಯವೂ ಹುಟ್ಟುವುದು ಪ್ರೀತಿಗಾಗಿ, ಜೀವನದ ಮೇಲಿನ ಪ್ರೀತಿಗಾಗಿ ಎಂಬುದು ಅವರ ಕವಿತೆಗಳಿಂದ ಸ್ಪಷ್ಟವಾಗುತ್ತದೆ. ಅವರ ಕವಿತೆಗಳನ್ನು ಅವಲೋಕಿಸಿದಾಗ, ಸುತ್ತ-ಮುತ್ತಲಿನ ಪರಿಸರದ ಪ್ರೇರಣೆ, ಪ್ರಭಾವಗಳು ಗೋಚರಿಸುತ್ತವೆ. ಪಾತ್ರೋಟರ ಕವಿತೆಗಳಲ್ಲಿ ಪ್ರಮುಖವಾಗಿ ಎರಡು ನೆಲೆಗಳಿವೆ. ಒಂದು ಪರಂಪರೆ ಮತ್ತೊಂದು ಪ್ರತಿಭಟನೆ. ಸಾಮಾನ್ಯವಾಗಿ ದಲಿತ ಬಂಡಾಯ ಕವಿಗಳೆಂದರೆ ನಕಾರಾತ್ಮಕ ನೋಟವೇ ಪ್ರಮುಖ. ಆದರೆ ಪಾತ್ರೋಟರಲ್ಲಿ ನಕಾರಾತ್ಮಕ ಹಾಗೂ ಸಕಾರಾತ್ಮಕ ಎರಡೂ ನೋಟಗಳಿವೆ.

ಹರಿವ ನದಿಗಳಿಗೆಲ್ಲ 'ಒಡ್ಡಾದ' ಒಡ್ಡಜನ
ಸುರೆಯ ಸೆರಗನ್ನು ಕಳಚಿ ಮುಂದೆ ಬನ್ನಿ
ನಾವು ಕಟ್ಟಿದ ನಾಡು ನಮ್ಮದಾಗದೆ ಇಂದು
ಹಾರಿ ಸುತ್ತಿಗೆ ಎತ್ತಿ ಉಳ್ಳವರ ಕೇಳಿ....

ಬಂಡಾಯ, ಪ್ರತಿಭಟನೆಗೆ ಮೂಲ ಕಾರಣವಾಗುವುದು ಅನುಭವಿಸಿದ ನೋವು. ಇಲ್ಲಿ ನೋವಿನನುಭಾವಗಳಲ್ಲೂ ಪ್ರೀತಿಯು ಒಂದಾದ ವಿಶೇಷತೆಯು ಕಾಣಸಿಗುತ್ತದೆ. ತನ್ನಿಂದ ದೂರವಾದ ಗೆಳತಿಯ ನೆನಪುಗಳು, ಅಗಲಿಕೆಯ ನೋವು ಕವಿಯನ್ನು ಕಾಡುತ್ತಿವೆ. ಅದಕ್ಕೆ ಕವಿಯು

ಅಲ್ಲಿ ಇಲ್ಲಿ ಹುಡುಕುತ್ತಿರುವೆ
ಎಲ್ಲಿ ಇರುವೆ ಹೇಳು......

ನೋವಿನೆದೆಗೆ ಗೆಲುವ ತರುವ
ಚೆಲುವ ನಿನ್ನ ಸ್ನೇಹವು . . . . . . [೧೧೯]

ಎಂದು ಹಾಡಿದ್ದಾರೆ.

ಗೆಳತಿಯ ಚೆಲುವು, ನಗು ಮೊಗವು ಇದ್ದರೆ ತನಗಿರುವ ನೂರು ನೋವುಗಳನ್ನು ಮರೆತು, ಏನೇ ಎದುರಾದರೂ ಎದುರಿಸುವ ಛಲವನ್ನು ಕವಿ ತೋರುತ್ತಾನೆ.

ಬಡವನಾದರೇನು ಪ್ರಿಯೆ
ಕೈತುತ್ತು ತಿನಿಸುವೆ
ಎದೆಯ ತುಂಬ ಒತ್ತಿಕೊಂಡು
ಮುತ್ತು ಮಳೆಯ ಸುರಿಸುವೆ [೧೨೦]

ಸರಳತೆಯ ಹಾಗೂ ಅಗಾಧವಾದ ಕವಿಯ ಪ್ರೀತಿಗೆ 'ಬಡವನಾದರೇನು ಪ್ರಿಯೆ' ಎಂಬ ಕವನ ಸಾಕ್ಷಿಯಾಗಿದೆ. ಕವಿಯನ್ನು ಇಲ್ಲಿ ಗೆಳತಿಯ ನೆನಪುಗಳು ಹಾಗೂ ಕನಸುಗಳು ಬಿಟ್ಟು ಬಿಡದೇ ಕಾಡುತ್ತಿವೆ. ಆದರೂ ಕವಿ ಆ ನೆನಪು, ಕನಸುಗಳ ಸಾಗರದಲ್ಲಿ ತೇಲಿ ಹೋಗಲು ಬಯಸುವುದಿಲ್ಲ, ಅದಕ್ಕೆಂದೇ ಕವಿ ಒಂದೆಡೆ ಹಾಡುತ್ತಾನೆ. 'ಆಗಸದೆತ್ತರಕೆ ಒಯ್ಯದಿರು, ಮುಗಿಲ ಮಲ್ಲಿಗೆಯಾಗುವ

ಆಸೆ ನನಗಿಲ್ಲ......' ಎಂದು. ಹಾಗೆಯೇ ಕವಿಯನ್ನು ಗೆಳತಿಯ ನೆನಪುಗಳು ಅಪಾರವಾಗಿ ಕಾಡುತ್ತಿದ್ದರೂ ಆ ನೆನಪುಗಳಲ್ಲೇ ಮುಳುಗದೇ, ತಾನು ಹಾಗೂ ತನ್ನವರ ನೋವುಗಳನ್ನು ಇಂದಿನ ಸ್ಥಿತಿಯನ್ನು ನೋಡುತ್ತ ಗುಡುಗು ಮಿಂಚಿಗೆ ನಲುಗಿ/ಮಳೆಯ-ರಭಸಕೆ ಸೋತು/ತೋಯ್ದು ತಪ್ಪಡಿಯಾದ / ಜೋಪಡಿಗಳ ಮಧ್ಯ-ನೀನು/ ನೆನಪಾಗುವುದಿಲ್ಲ ಗೆಳತಿ ಎಂದು ಹಾಡಿದ್ದಾರೆ.

ಸತ್ಯಾನಂದ ಪಾತ್ರೋಟರು ಬಡ ಕುಟುಂಬದಿಂದ ಬಂದಿದ್ದು, ಬಾಲ್ಯದಲ್ಲಿ ಬಡತನದಿಂದಾಗಿ ಶಿಕ್ಷಣಕ್ಕೂ ತೊಂದರೆದಾಯಕ ಪರಿಸ್ಥಿತಿ ಎದುರಿಸಿ ಬಂದು, ಪೂರಕವಾದ ಪರಿಸರವಿರದಿದ್ದರೂ ಬೆಳೆದು ಒಬ್ಬ ಸೃಜನಶೀಲ ಕವಿಯಾಗಿ ದಲಿತ-ಬಂಡಾಯ ಸಾಹಿತ್ಯ ಘಟ್ಟಕ್ಕೆ ಅಮೂಲ್ಯವಾದ ಕೊಡುಗೆಗಳನ್ನು ನೀಡಿದ್ದಾರೆ. ತಮ್ಮ ಸುತ್ತ-ಮುತ್ತಲಿನ ಪರಿಸರದಿಂದಲೇ ಪ್ರಭಾವಿತರಾದ ಕವಿ ಪಾತ್ರೋಟರು ಆಧುನಿಕ ಕನ್ನಡದ ಪ್ರಮುಖ ಕವಿಗಳಲ್ಲಿ ಗುರುತಿಸಲ್ಪಡುತ್ತಾರೆ. ಅದರಲ್ಲೂ ಪ್ರೀತಿ ಕವಿತೆಗಳನ್ನು ಬರೆದ ಕವಿಗಳಲ್ಲಿ ಸತ್ಯಾನಂದ ಪಾತ್ರೋಟರು ವೈಶಿಷ್ಟ್ಯತೆಯನ್ನು ತೋರಿದ್ದಾರೆ. ಅವರು ಹೆಣ್ಣು, ಚೆಲುವು, ಸೌಂದರ್ಯ, ಪ್ರೀತಿ, ನಿಸರ್ಗ, ಕನಸುಗಳನ್ನು ಕಂಡ ಬಗೆಯನ್ನು ಅವಲೋಕಿಸಿದಾಗ ಆದುನಿಕ ಕವಿಗಳಲ್ಲಿ ಪಾತ್ರೋಟರ ವಿಶೇಷತೆ ಕಾಣ ಸಿಗುತ್ತದೆ. ಪಾತ್ರೋಟರು 'ಪ್ರೀತಿ ಎಂದರೆ' ಎಂಬ ಕವನದಲ್ಲಿ ಗೆಳತಿಯನ್ನು ಕುರಿತು ಎದೆಯಾಳದ ಮಾತನ್ನು ಹೇಳುವಾಗ, ಪ್ರೀತಿಯನ್ನು ಅರ್ಥೈಸಿದ್ದಾರೆ.

ಪ್ರೀತಿ ಎಂದರೆ ಹೀಗೆ
ನಾಳೆಯನು ಸ್ಖಲಿಸುವುದು
ಕತ್ತಲೆಗೆ ಸೆಳಕಾಗಿ ಇಲ್ಲಾ ಬೆಳಕಾಗಿ
ನಾಡಿದ್ದನ್ನು ಬೆಸೆಯುವುದು
ಕಾಲಗಳ ಸೆರಗಿನಲಿ ಕಾಲಾತೀತವಾಗುವುದು
ಅಲ್ಲವೇನೆ ? [೧೨೧]

ಟಿಪ್ಪಣಿಗಳು

೧೧೩. ಸತ್ಯಾನಂದ ಪಾತ್ರೋಟರ ಕಾವ್ಯದಲ್ಲಿ ಪ್ರೀತಿ ಮತ್ತು ನಿಸರ್ಗ – ಡಾ. ಪಟ್ಟಣಶೆಟ್ಟಿ – ಪುಟ – ೧

೧೧೪. ಕವನ ಸಂಕಲನ – 'ಕರಿಯ ಕಟ್ಟಿದ ಕವನ' – ಪ್ರಕೃತಿ – ಪುಟ – ೨೧

೧೧೫. ಕವನ ಸಂಕಲನ – 'ಕಲ್ಲಿಗೂ ಗೊತ್ತಿರುವ ಕತೆ' – ಕಾಡಲ್ಲೋ ಇದು– ಪುಟ – ೬೨

೧೧೬. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ಹಂಬಲ – ಪುಟ – ೮೪

೧೧೭. ಕವನ ಸಂಕಲನ – 'ಕರಿ ನೆಲದ ಕಲೆಗಳು' – ಒತ್ತಾಯ ನಿನಗಿಲ್ಲ –ಪುಟ – ೨೬

೧೧೮. ಕವನ– 'ನಾಡ ಕಟ್ಟಿದ ಜನ'

೧೧೯. ಕವನ ಸಂಕಲನ – 'ನದಿಗೊಂದು ಕನಸು ಮತ್ತು ಅವಳು' – ಹಂಬಲ – ಪುಟ – ೧೯

೧೨೦. ಕವನ ಸಂಕಲನ – 'ಕರಿಯ ಕಟ್ಟಿದ ಕವನ' – ಬಡವನಾದರೇನು ಪ್ರಿಯ – ಪುಟ – ೨೮

೧೨೧. ಕವನ ಸಂಕಲನ – 'ಕರಿಯ ಕಟ್ಟಿದ ಕವನ' – ಪ್ರೀತಿ ಎಂದರೆ – ಪುಟ – ೧೫

అనుబంధాలు

ಕವಿ ಸತ್ಯಾನಂದ ಪಾತ್ರೋಟ



ಪರಾಮರ್ಶನ ಗ್ರಂಥಗಳು

ಅ.ಕ್ರಮ ಸಂಖ್ಯೆ	ಕೃತಿ	ಕೃತಿಕಾರ	ಪ್ರಕಾಶನ	ಪ್ರಕಟನೆ ವರ್ಷ
೧.	ಕರಿ ನೆಲದ ಕಲೆಗಳು	ಸತ್ಯಾನಂದ ಪಾತ್ರೋಟ	ಸಮತಾ ಪ್ರಕಾಶನ	೧೯೮೫
೨.	ಕರಿಯ ಕಟ್ಟಿದ ಕವನ	ಸತ್ಯಾನಂದ ಪಾತ್ರೋಟ	ಸಮತಾ ಪ್ರಕಾಶನ	೧೯೯೮
೩.	ಕಲ್ಲಿಗೂ ಗೊತ್ತಿರುವ ಕತೆ	ಸತ್ಯಾನಂದ ಪಾತ್ರೋಟ	ಸಮತಾ ಪ್ರಕಾಶನ	೧೯೯೪
೪.	ಜಾಜಿ ಮಲ್ಲಿಗೆ	ಸತ್ಯಾನಂದ ಪಾತ್ರೋಟ	ಸಮತಾ ಪ್ರಕಾಶನ	೧೯೯೫
೫.	ದಲಿತ ಸಂವೇದನೆ	ರಂಗರಾಜ ವನದುರ್ಗ	ಸಿ.ವಿ.ಜಿ	೨೦೦೪
೬.	ನದಿಗೊಂದು ಕನಸು ಮತ್ತು ಅವಳು	ಸತ್ಯಾನಂದ ಪಾತ್ರೋಟ	ಸಮತಾ ಪ್ರಕಾಶನ	೨೦೦೪
೭.	ನನ್ನ ಕನಸಿನ ಹುಡುಗಿ	ಸತ್ಯಾನಂದ ಪಾತ್ರೋಟ	ಸಮತಾ ಪ್ರಕಾಶನ	೧೯೯೮
೮.	ನನ್ನ ಪ್ರೀತಿಯ ಕವಿತೆ	ಎಸ್.ಜಿ.ಸ್ವಾಮಿ	ಎಡೆದೊರೆ ನಾಡಿನ ಉತ್ಸವ ಸಮಿತಿ, ರಾಯಚೂರು	೧೯೯೪
೯.	ನಿರುಪಾಧಿ (ಅಭಿನಂದನಾ ಗ್ರಂಥ)	ಪ್ರಧಾನ ಸಂ. ಬಿ.ಕೆ.ಹಿರೇಮಠ	ಮರೆಗುದ್ದಿ ಪೂಜ್ಯಶ್ರೀ ನಿರುಪಾಧೀಶ ಮಹಾಸ್ವಾಮಿಗಳ ಅಭಿನಂದನ ಸಮಿತಿ, ಮುಧೋಳ	೨೦೦೬

೧೦.	ಮೈಸೂರು ಮಲ್ಲಿಗೆ	ಕೆ.ಎಸ್.ನರಸಿಂಹಸ್ವಾಮಿ	ಅಶೋಕ ಸಾಹಿತ್ಯ ಪ್ರಕಾಶನ, ಬೆಂಗಳೂರು	೧೯೯೪
೧೧.	ಸಖಿಗೀತ	ದ.ರಾ.ಬೇಂದ್ರೆ	ಶ್ರೀಮಾತಾ ಪ್ರಕಾಶನ	೧೯೩೭
೧೨.	ಸಮಗ್ರಕಾವ್ಯ	ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ	ಕ್ಷಮಾಪ್ರಕಾಶನ, ಬೆಂಗಳೂರು	೨೦೦೪
೧೩.	ಹುಸಿ ಇಲ್ಲದ ಗೂಡಿನೊಳಗೆ	ಡಾ. ಅರ್ಜುನಗೊಳಸಂಗಿ	ದಲಿತ ಸಾಹಿತ್ಯ ಪರಿಷತ್ತು, ರಾಜ್ಯ ಘಟಕ, ಗದಗ	೨೦೦೫
೧೪.	ಇಕ್ಕಳ (ಕವನ)	ಕೆ.ಎಸ್.ನರಸಿಂಹಸ್ವಾಮಿ		